24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 131 | ನವದೆಹಲಿ | ಬೆಲೆ ₹10 | ನವಂಬರ್ 6, 2026, ಶುಕ್ರವಾರ

ಒಳಪುಟಗಳಲ್ಲಿ

ಜನರ ಅರಮನೆಯಲ್ಲಿ ಕನ್ನಡದ ಕಂಪು: ವಿಧಾನಸೌಧದಲ್ಲಿ 110 ಕನ್ನಡ ನುಡಿಫಲಕಗಳ ಲೋಕಾರ್ಪಣೆ - ಪು.5

ಗ್ಯಾರಂಟಿ ಸರ್ಕಾರವಲ್ಲ, ರಾಬರಿ ಸರ್ಕಾರ: ಬೆಲೆ ಏರಿಕೆಗೆ ಶಾಸಕ ಸುನೀಲ್ ಕುಮಾರ್ ಖಂಡನೆ - ಪು.6

ಹಳೇ ವೋಟರ್ ಲಿಸ್ಟ್ ಅನ್ವಯ ಚುನಾವಣೆ ಹಾಸ್ಯಾಸ್ಪದ: ಸಚಿವ ಖಂಡ್ರೆ ವಿರುದ್ಧ ಕಾರ್ನಿಕ್ ಕಿಡಿ - ಪು.7

ಕಾವೇರಿ ವಿವಾದ: ಕರ್ನಾಟಕ ವಿರುದ್ಧ ತಮಿಳುನಾಡು ವಾದ

ನವದೆಹಲಿ, ನ.5: ಕಳೆದ ಅ.23ರಿಂದ ಕರ್ನಾಟಕ ಸರ್ಕಾರ ಕಾವೇರಿ ನೀರನ್ನು ಬಿಡುಗಡೆ ಮಾಡುತ್ತಿಲ್ಲ ಎಂದು ಆರೋಪಿಸಿ ತಮಿಳುನಾಡು ಸರ್ಕಾರವು ಗುರುವಾರ ಸುಪ್ರೀಂ ಕೋರ್ಟ್‌ನಲ್ಲಿ ತುರ್ತು ಅರ್ಜಿ ಸಲ್ಲಿಸಿ ವಿಷಯ ಪ್ರಸ್ತಾಪಿಸಿದೆ. ಸಿಜೆಐ ಸೂರ್ಯಕಾಂತ್ ನೇತೃತ್ವದ ಪೀಠದ ಎದುರು ತಮಿಳುನಾಡು ಸರ್ಕಾರದ ಪರ ವಾದ ಮಂಡಿಸಿದ ವಕೀಲ ಬಿ. ಕರುಣಾಕರನ್, ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವು ಪ್ರತಿದಿನ 3,000 ಕ್ಯೂಸೆಕ್ ನೀರು ಬಿಡಲು ಆದೇಶಿಸಿದ್ದರೂ ಕರ್ನಾಟಕ ಅದನ್ನು ಪಾಲಿಸುತ್ತಿಲ್ಲ ಎಂದು ನ್ಯಾಯಪೀಠದ ಗಮನಕ್ಕೆ ತಂದರು. ಕುಡಿಯಲು ಹಾಗೂ ಕೃಷಿಗೆ ನೀರಿಲ್ಲದೆ ತಮಿಳುನಾಡಿನ ನಾಲ್ಕು ಲಕ್ಷ ಹೆಕ್ಟೇರ್ ಪ್ರದೇಶದಲ್ಲಿರುವ ಬೆಳೆಗಳು ಸಂಪೂರ್ಣವಾಗಿ ನಾಶವಾಗುವ ಭೀತಿ ಎದುರಾಗಿದೆ. ಕರ್ನಾಟಕ ನೀರು ಬಿಡುತ್ತಿಲ್ಲ, ನಾವು ಈಗ ಎಲ್ಲಿಗೆ ಹೋಗಬೇಕು ಎಂದು ಅಳಲು ತೋಡಿಕೊಂಡರು.ತಮಿಳುನಾಡು ಸರ್ಕಾರದ ಮನವಿಯನ್ನು ಆಲಿಸಿದ ಸುಪ್ರೀಂ ಕೋರ್ಟ್, ಈ ಅರ್ಜಿಯ ತುರ್ತು ವಿಚಾರಣೆಗೆ ಶೀಘ್ರವೇ ದಿನಾಂಕ ನಿಗದಿಪಡಿಸಲು ಸಮ್ಮತಿಸಿದೆ.



ಎಸ್‌ಐಆರ್: ಪಟ್ಟಿಯಿಂದ ಹೆಸರು ಡಿಲೀಟ್ ಆದವರಿಗೆ ನ್ಯಾಯ ಸಿಗಬೇಕು

ಬೇಡಿಕೆ ಈಡೇರುವವರೆಗೂ ಹೋರಾಟ ಮುಂದುವರಿಯಲಿದೆ: ಸಿಎಂ ಡಿ.ಕೆ. ಶಿವಕುಮಾರ್

ಬೆಂಗಳೂರು, ನ.5: ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ಮರಣ ಹೊಂದಿದವರನ್ನು ಹೊರತುಪಡಿಸಿ ಹೆಸರು ಕೈಬಿಟ್ಟಿರುವ ಎಲ್ಲಾ ಮತದಾರರಿಗೆ ನ್ಯಾಯ ಸಿಗಬೇಕು. ಹೆಸರು ಡಿಲೀಟ್ ಆದವರ ಬೇಡಿಕೆಗಳನ್ನು ಈಡೇರಿಸುವವರೆಗೆ ಪ್ರತಿಭಟನೆ ಮುಂದುವರಿಯುತ್ತದೆ ಎಂದು ಮುಖ್ಯಮಂತ್ರಿ ಹೇಳಿದರು.

ಎಸ್‌ಐಆರ್ ಹಾಗೂ ಮುಖ್ಯ ಚುನಾವಣಾ ಆಯುಕ್ತರ ರಾಜೀನಾಮೆಗೆ ಆಗ್ರಹಿಸಿ ನಗರದ ಫ್ರೀಡಂ ಪಾರ್ಕ್‌ನಲ್ಲಿ ಇಂಡಿಯಾ ಒಕ್ಕೂಟ ಗುರುವಾರ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಮಾತನಾಡಿದ ಅವರು, ಸದ್ಯ ನಡೆಯುತ್ತಿರುವ ಎಸ್‌ಐಆರ್ ರೀತಿಯನ್ನು ಒಪ್ಪಲು ಸಾಧ್ಯವಿಲ್ಲ. ಮರಣ ಹೊಂದಿದವರನ್ನು ಹೊರತುಪಡಿಸಿ ಹೆಸರು ಡಿಲೀಟ್ ಆಗಿರುವ ಎಲ್ಲರಿಗೂ ನ್ಯಾಯ ಸಿಗಬೇಕು ಎಂದು ಹೇಳಿದರು.

ಫಾರಂ7: ತನಿಖೆಗೆ ಸರ್ಕಾರ ಬದ್ಧ: ಫಾರಂ 7 ಅಡಿ ತಮ್ಮ ಕಾರ್ಯಕರ್ತರನ್ನು ರಕ್ಷಿಸಿಕೊಳ್ಳಲು ಬಿಜೆಪಿ ನಾಯಕರು ಪ್ರಯತ್ನಿಸಿದ್ದರು. ಈ ಪ್ರಕರಣದಲ್ಲಿ ಕಾನೂನಿನ ಚೌಕಟ್ಟಿನಲ್ಲಿ ಎಲ್ಲ ರೀತಿಯ ತನಿಖೆ ನಡೆಸಲು ಸರ್ಕಾರ ಬದ್ಧವಾಗಿದೆ. ಫಾರಂ 7 ಅನ್ನು ಯಾರು ತಂದುಕೊಟ್ಟರು, ಯಾರ ಬಳಿ ಇದೆ ಎಂಬುದಕ್ಕೆ ಸಂಬಂಧಿಸಿದ ಸಿಸಿಟಿವಿ ದೃಶ್ಯಾವಳಿ ಇವೆ. ತಪ್ಪಿತಸ್ಥರು ಯಾರೇ ಆಗಿದ್ದರೂ ತನಿಖೆ ಮೂಲಕ ಸತ್ಯಾಂಶ ಹೊರಬರಲಿದೆ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.



ಮತದಾರರ ಹಕ್ಕಿಗೆ ಧಕ್ಕೆ ತರುವ ಪ್ರಯತ್ನ ಸಹಿಸಲು ಸಾಧ್ಯವಿಲ್ಲ: ಸಿದ್ದರಾಮಯ್ಯ

ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ದುರ್ಬಲಗೊಳಿಸುವ ಹಾಗೂ ಅರ್ಹ ಮತದಾರರ ಮತದಾನದ ಹಕ್ಕಿಗೆ ಧಕ್ಕೆ ತರುವ ಯಾವುದೇ ಪ್ರಯತ್ನ ಸಹಿಸಲು ಸಾಧ್ಯವಿಲ್ಲ. ಎಸ್‌ಐಆರ್ ಪ್ರಕ್ರಿಯೆಯು ಕಾನೂನು ಹಾಗೂ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿದೆ. ಈ ಪ್ರಕ್ರಿಯೆಯನ್ನು ಕೂಡಲೇ ರದ್ದುಗೊಳಿಸಬೇಕು ಮತ್ತು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಇದು ಕೇವಲ ಮತದಾರರ ಪಟ್ಟಿಯ ಪರಿಷ್ಕರಣೆಗೆ ಸಂಬಂಧಿಸಿದ ವಿಚಾರವಲ್ಲ. ದೇಶದ ಸಂವಿಧಾನ, ಪ್ರಜಾಪ್ರಭುತ್ವ ಮತ್ತು ಮತದಾರರ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದ ಮಹತ್ವದ ಹೋರಾಟವಾಗಿದೆ ಎಂದು ಮಾಜಿ ಸಿಎಂ ಸಿದ್ದರಾಮಯ್ಯ ತಿಳಿಸಿದರು.

ಅಹಿಂದ ಮತಗಳನ್ನು ತೆಗೆದುಹಾಕಲು ಬಿಜೆಪಿ ನಾಯಕರಿಂದ ಸಂಚು

ರಾಜ್ಯದಲ್ಲಿ ದಲಿತರು, ಹಿಂದುಳಿದವರು ಹಾಗೂ ಅಲ್ಪಸಂಖ್ಯಾತರ ಮತಗಳನ್ನು ತೆಗೆದುಹಾಕಲು ಬಿಜೆಪಿ ನಾಯಕರು ಸಂಚು ರೂಪಿಸಿದ್ದರು. ನಾವು ಸಮಯಕ್ಕೆ ಸರಿಯಾಗಿ ಎಚ್ಚೆತ್ತುಕೊಂಡಿದ್ದರಿಂದ ದೊಡ್ಡ ಅನಾಹುತ ತಪ್ಪಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಗಂಭೀರ ಆರೋಪ ಮಾಡಿದರು. ಪ್ರತಿಯೊಬ್ಬ ಮತದಾರನ ಹಕ್ಕನ್ನು ರಕ್ಷಿಸುವುದು ನಮ್ಮ ಜವಾಬ್ದಾರಿ. ಆದರೆ, ಚುನಾವಣಾ ಆಯೋಗವೇ ಮತಗಳ್ಳತನಕ್ಕೆ ಅವಕಾಶ ಮಾಡಿಕೊಡುತ್ತಿದೆ. ಬಿಜೆಪಿ ನಾಯಕರು 15ರಿಂದ 20 ಸಾವಿರ ಮತಗಳನ್ನು ಅಳಿಸಲು ಮುಂದಾಗಿದ್ದರು. ವಿಶೇಷವಾಗಿ ದಲಿತರು, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಮತಗಳನ್ನು ಗುರಿಯಾಗಿಸಿಕೊಂಡಿದ್ದರು. ಮತದಾರರ ಪಟ್ಟಿಯಿಂದ ಹೆಸರು ಹಾಗೂ ಫೋನ್ ನಂಬರ್‌ಗಳನ್ನು ತೆಗೆದುಹಾಕುವಂತೆ ಮಾಡಿ, ಆ ಮಾಹಿತಿಯನ್ನು ಆಯಾ ಕ್ಷೇತ್ರಗಳ ನಾಯಕರಿಗೆ ಕಳುಹಿಸಲಾಗಿತ್ತು. ಕಲಬುರಗಿ, ಈಶ್ವರ್ ಖಂಡ್ರೆ ಪ್ರತಿನಿಧಿಸುವ ಕ್ಷೇತ್ರ ಹಾಗೂ ಸೌಮ್ಯಾರೆಡ್ಡಿ ಅವರ ಕ್ಷೇತ್ರದಲ್ಲೂ ಮತಗಳನ್ನು ಅಳಿಸುವ ಪ್ರಯತ್ನ ನಡೆದಿತ್ತು. ನಾವು ಸಮಯಕ್ಕೆ ಸರಿಯಾಗಿ ಎಚ್ಚೆತ್ತುಕೊಳ್ಳದಿದ್ದರೆ ದೊಡ್ಡ ಅನಾಹುತವೇ ಸಂಭವಿಸುತ್ತಿತ್ತು ಎಂದು ಹೇಳಿದರು.

ಬರ ಪರಿಹಾರ: ಗರಿಷ್ಠ 5000 ರೂ. ಇನ್‌ಪುಟ್ ಸಬ್ಸಿಡಿ ನೀಡಲು ತೀರ್ಮಾನ

- ಮೊದಲ ಕಂತು 2500 ರೂ. ಡಿಬಿಟಿ ಮೂಲಕ ರೈತರ ಖಾತೆಗೆ ಜಮಾ
- 15–20 ದಿನದಲ್ಲಿ 2ನೇ ಕಂತಿನ ಪರಿಹಾರ ಬಿಡುಗಡೆ: ಡಿ.ಕೆ. ಶಿವಕುಮಾರ್

ಬೆಂಗಳೂರು, ನ.5: ಬರಪೀಡಿತ ರೈತರಿಗೆ ತಲಾ 5,000 ರೂ. ಪರಿಹಾರ ನೀಡಲು ಸರ್ಕಾರ ತೀರ್ಮಾನಿಸಿದೆ. ಈಗ ಮೊದಲ ಹಂತದಲ್ಲಿ 2500 ರೂ. ಅನ್ನು ಡಿಬಿಟಿ ಮೂಲಕ ನೇರವಾಗಿ ರೈತರಿಗೆ ತಲುಪಿಸಲಾಗುತ್ತಿದೆ. ಉಳಿದ 2500 ರೂ.ಗಳನ್ನು ಮುಂದಿನ ದಿನಗಳಲ್ಲಿ ಬಿಡುಗಡೆ ಮಾಡಲಾಗುವುದು ಎಂದು ಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.



ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ಮೊದಲ ಕಂತಿನ ಇನ್ಪುಟ್ ಸಬ್ಸಿಡಿಯನ್ನು ಗುರುವಾರ ಬಿಡುಗಡೆ ಮಾಡಿ ಮಾತನಾಡಿ, 15 ಜಿಲ್ಲೆಗಳಿಗೆ ಪಾವತಿ ಕಡತಗಳ ತಯಾರಿ ಪ್ರಕ್ರಿಯೆಯಲ್ಲಿದೆ. ಉತ್ತರ ಕನ್ನಡ, ಕೋಲಾರ, ಕೊಪ್ಪಳ, ಚಾಮರಾಜನಗರ, ಧಾರವಾಡ, ಬಳ್ಳಾರಿ, ಬೀದರ್, ಬೆಂಗಳೂರು ನಗರ, ಹಾವೇರಿ, ಬೆಂಗಳೂರು ದಕ್ಷಿಣ, ದಾವಣಗೆರೆ, ದಕ್ಷಿಣ ಕನ್ನಡ, ಕಲಬುರಗಿ, ಮಂಡ್ಯ ಮತ್ತು ವಿಜಯನಗರ. ಎಲ್ಲಾ ಜಿಲ್ಲೆಗಳಲ್ಲಿರುವ ಅರ್ಹ ರೈತರಿಗೆ ಮೊದಲ ಕಂತಿನ ಇನ್ಪುಟ್ ಸಬ್ಸಿಡಿಯನ್ನು ಶೀಘ್ರವಾಗಿ ವಿತರಿಸಲಾಗುವುದು. ಮುಂದಿನ 15–20 ದಿನಗಳಲ್ಲಿ 2ನೇ ಕಂತಿನ ಮೊತ್ತವನ್ನು ಬಿಡುಗಡೆ ಮಾಡಲಾಗುವುದು. ರೈತರ ಬದುಕು ಹಸನು ಮಾಡಬೇಕು ಎಂಬ ನಿಲುವಿಗೆ ಸರ್ಕಾರ ಬದ್ಧವಾಗಿದೆ ಎಂದರು.

ಬರಗಾಲದಿಂದಾಗಿ ರಾಜ್ಯದಲ್ಲಿ 62 ಸಾವಿರ ಕೋಟಿ ನಷ್ಟವಾಗಿದೆ ಎಂದು ಕೇಂದ್ರ ಸರ್ಕಾರಕ್ಕೆ ವರದಿ ಕಳುಹಿಸಲಾಗಿದೆ. ರೈತರ ನೆರವಿಗೆ ಧಾವಿಸಬೇಕಾದ್ದು ಕೇಂದ್ರ ಸರ್ಕಾರದ ಕರ್ತವ್ಯ. ರೈತರಿಗೆ ಬೆಳೆ ಪರಿಹಾರವಾಗಿ 2 ಸಾವಿರ ರೂ. ಒದಗಿಸುವುದಾಗಿ ವಿಧಾನಸಭೆಯಲ್ಲಿ ಘೋಷಣೆ ಮಾಡಿದ್ದು, ಕೇಂದ್ರದಿಂದ 22,400 ಕೋಟಿ ಪರಿಹಾರವನ್ನು ಒದಗಿಸಲು ಕೋರಲಾಗಿದೆ. ಈ ಸಂಬಂಧ ಪ್ರಧಾನಮಂತ್ರಿಯನ್ನು ಭೇಟಿ ಮಾಡಲು ಸಮಯ ಕೇಳಿದ್ದೇವೆ. ಸರ್ವಪಕ್ಷ ನಿಯೋಗ ಕರೆತರುವುದಾಗಿಯೂ ತಿಳಿಸಿದ್ದೇವೆ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ಎನ್‌ಡಿಆರ್‌ಎಫ್ ಅಡಿ 22,400 ಕೋಟಿ ನೆರವು ಬಿಡುಗಡೆಗೆ ಕೇಂದ್ರಕ್ಕೆ ಮನವಿ

ರಾಜ್ಯದಲ್ಲಿ ಉಂಟಾಗಿರುವ ಬರ ಪರಿಸ್ಥಿತಿ ಹಾಗೂ ಬೆಳೆ ಹಾನಿಯ ಪ್ರಮಾಣವನ್ನು ವಿವರಿಸಿ, ಎನ್‌ಡಿಆರ್‌ಎಫ್ ಅಡಿಯಲ್ಲಿ ಒಟ್ಟು 22,400.58 ಕೋಟಿ ಆರ್ಥಿಕ ನೆರವು ನೀಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಈ ಮೊತ್ತದಲ್ಲಿ ಬೆಳೆಹಾನಿ ಇನ್‌ಪುಟ್ ಸಬ್ಸಿಡಿಗಾಗಿ 7,943.55 ಕೋಟಿ, ಕುಡಿಯುವ ನೀರಿನ ವ್ಯವಸ್ಥೆಗಾಗಿ 1,727 ಕೋಟಿ, ಜಾನುವಾರುಗಳ ರಕ್ಷಣೆಗಾಗಿ 583.04 ಕೋಟಿ ಹಾಗೂ 61.91 ಲಕ್ಷ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಅನುಗ್ರಹ ಪರಿಹಾರಕ್ಕಾಗಿ 12,146.99 ಕೋಟಿ ಸೇರಿದೆ. ಬರ ಪರಿಹಾರಕ್ಕೆ ಸಂಬಂಧಿಸಿದ ಎನ್‌ಡಿಆರ್‌ಎಫ್ ಮಾನದಂಡಗಳನ್ನು ಮರುಪರಿಶೀಲಿಸಿ ಸಡಿಲಗೊಳಿಸಬೇಕು ಹಾಗೂ ರಾಜ್ಯಕ್ಕೆ ಅಗತ್ಯ ಅನುದಾನವನ್ನು ತುರ್ತಾಗಿ ಬಿಡುಗಡೆ ಮಾಡಬೇಕು ಎಂದು ನಾನು, ಸಿಎಂ ಅವರು ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ ಹಾಗೂ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಐದಕ್ಕೂ ಹೆಚ್ಚು ಬಾರಿ ಪತ್ರ ಬರೆದು ಒತ್ತಾಯಿಸಲಾಗಿದೆ. ಹಾಗೂ ಪ್ರಧಾನಿ ಭೇಟಿಗೂ ಸಮಯ ಕೋರಲಾಗಿದೆ ಎಂದು ಡಾ. ಜಿ. ಪರಮೇಶ್ವರ್ ತಿಳಿಸಿದರು.

ಗ್ರಿಡ್-ಸ್ಕೇಲ್ ಎನರ್ಜಿ ಸ್ಟೋರೇಜ್

14,500 ಕೋಟಿ ಅಂತರನಿಧಿ ಯೋಜನೆಗೆ ಕೇಂದ್ರ ಅನುಮೋದನೆ

ನವದೆಹಲಿ, ನ.5: ಗ್ರಿಡ್–ಸ್ಕೇಲ್ ಶಕ್ತಿ ಸಂಗ್ರಹಣಾ ವ್ಯವಸ್ಥೆಗಾಗಿ 14,500 ಕೋಟಿ ಮೊತ್ತದ ವಯಾಬಿಲಿಟಿ ಗ್ಯಾಪ್ ಫಂಡಿಂಗ್ (ವಿಜಿಎಫ್) ಯೋಜನೆಗೆ ಕೇಂದ್ರ ಸರ್ಕಾರವು ಅನುಮೋದನೆ ನೀಡಿದೆ ಎಂದು ಕೇಂದ್ರ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ, 2026–27ನೇ ಆರ್ಥಿಕ ವರ್ಷದಿಂದ 2030–31ರವರೆಗೆ ಅನುಮೋದಿಸಿದೆ. ಈ ಯೋಜನೆ ದೇಶಾದ್ಯಂತ 92 ಗೀಗಾವ್ಯಾಟ್ ಶಕ್ತಿ ಸಂಗ್ರಹಣಾ ಸಾಮರ್ಥ್ಯದ ಅಭಿವೃದ್ಧಿಗೆ ಬೆಂಬಲ ನೀಡುವ ಗುರಿ ಹೊಂದಿದ್ದು, ಇದರಿಂದ ಭಾರತದ ಇಂಧನ ಭದ್ರತೆ ಮತ್ತಷ್ಟು ಬಲಗೊಳ್ಳಲಿದ್ದು, ಸ್ವಚ್ಛ ಹಾಗೂ ಸುಸ್ಥಿರ ಇಂಧನ ಭವಿಷ್ಯದತ್ತ ದೇಶದ ಪರಿವರ್ತನೆಗೆ ವೇಗ ದೊರೆಯಲಿದೆ ಎಂದಿದ್ದಾರೆ. ಈ ಯೋಜನೆ ದೇಶದಲ್ಲಿ ಪ್ರಸ್ತುತ ಗ್ರಿಡ್ ಸ್ಕೇಲ್ ಎನರ್ಜಿ ಸ್ಟೋರೇಜ್ ಸಿಸ್ಟಮ್ ಸಾಮರ್ಥ್ಯದ ಶೇ.170ಕ್ಕೆ ಸಮಾನ ಹೊಸ ಸಾಮರ್ಥ್ಯಗಳನ್ನು ಸೃಷ್ಟಿಸಲಿದೆ. ...3ನೇ ಪುಟಕ್ಕೆ





ಅಭಿನಂದನೆ


ತುಮಕೂರು ವಿವಿ ಸಿಂಡಿಕೇಟ್‌ನ ನೂತನ ಸದಸ್ಯ

ಸಿ.ವಿ.ಸಂದೀಪ್ ಅವರಿಗೆ ಅಭಿನಂದನೆ



ತುಮಕೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ ನೇಮಕಗೊಂಡಿರುವ ಸಿ.ವಿ. ಸಂದೀಪ್ ಅವರು ಇತ್ತೀಚೆಗೆ ಅಧಿಕಾರ ಸ್ವೀಕಾರ ಮಾಡಿದರು. ವಿವಿ ಉಪಕುಲಪತಿ ನಾಗಭೂಷಣ್, ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಎಸ್. ವೀರಯ್ಯ, ಬಿಜೆಪಿ ಎಸ್‌ಸಿ ಮೋರ್ಚಾ ರಾಜ್ಯ ಕಾರ್ಯದರ್ಶಿ ಓಂಕಾರೇಶ್ವರ್, ಜಿಲ್ಲಾ ಬಿಜೆಪಿ ಹಿರಿಯ ಉಪಾಧ್ಯಕ್ಷ ಟಿ.ಆರ್. ಸದಾಶಿವಯ್ಯ, ಮುಖಂಡ ರಂಗಾನಾಯ್ಕ್ ಮತ್ತಿತರರು ನೂತನ ಸಿಂಡಿಕೇಟ್ ಸದಸ್ಯ ಸಿ.ವಿ. ಸಂದೀಪ್ ಅವರಿಗೆ ಶುಭ ಕೋರಿದರು.

ನಿತ್ಯ ಪಂಚಾಂಗ 6.11.2026 ಶುಕ್ರವಾರ



ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ದಕ್ಷಿಣಾಯಣ ಶರದ್ ಋತು, ಚಾಂದ್ರಮಾನ ಶ್ರಾವಣ-ಆಶ್ವಯುಜ ಮಾಸ

ಆಶ್ವಯುಜ ಬಹುಳ, ದ್ವಾದಶಿ, ಹಸ್ತ ನಕ್ಷತ್ರ, ಪ್ರದೋಷ್, ನೀರುತುಂಬುವ ಹಬ್ಬ, ಧನ್ವಂತರಿ ಜಯಂತಿ, ನರಸೋಬಾಡಿ/ಲೋಕಿಕೆರೆ/ಕುರಗುಡ್ಡಿ ಗುರುದ್ವಾದಶಿ

ದಿನ	ರಾಹುಕಾಲ	ಯಮಗಂಡ	ಗುಳಿಕಕಾಲ
ಭಾನು	ಸ. 5.04– 6.33	12.00– 1.30	3.00– 4.00
ಸೋಮ	ಬೆ. 7.20– 9.04	10.30–12.00	1.30– 3.00
ಮಂಗಳ	ಮ. 3.25– 4.59	9.00–10.30	12.00– 1.30
ಬುಧ	ಮ.12.16– 1.50	7.30– 9.00	10.30– 12.00
ಗುರು	ಮ. 1.50– 3.29	6.00– 7.30	9.00– 10.30
ಶುಕ್ರ	ಬೆ.10.42–12.16	3.00– 4.30	7.30– 9.00
ಶನಿ	ಬೆ. 9.07–10.41	1.30– 3.00	6.00– 7.30

ಗ್ಯಾರಂಟಿಗಳಿಗೆ ಹಣ ಹೊಂದಿಸಲು ಸಾಧ್ಯವಾಗದೆ ಜನರ ಮೇಲೆ ಹೊರೆ

ಹಾಲು, ಬಸ್ ಪ್ರಯಾಣದರ ಏರಿಕೆ ವಿರೋಧಿಸಿ ರಾಜ್ಯದ ವಿವಿಧೆಡೆ ಬಿಜೆಪಿ ಪ್ರತಿಭಟನೆ

ಬೆಂಗಳೂರು/ಮಂಗಳೂರು/ಶಿವಮೊಗ್ಗ, ನ.5: ಹಾಲು, ಸಾರಿಗೆ ಬಸ್ ಪ್ರಯಾಣ ದರ ಏರಿಕೆಯನ್ನು ಖಂಡಿಸಿ ಬಿಜೆಪಿಯಿಂದ ರಾಜ್ಯದ ವಿವಿಧೆಡೆ ಗುರುವಾರ ಪ್ರತಿಭಟನೆ ನಡೆಸಲಾಯಿತು. ಸರ್ಕಾರದ ನಡೆಗೆ ಆಕ್ರೋಶ ವ್ಯಕ್ತಪಡಿಸಿದ ಪ್ರತಿಪಕ್ಷದ ನಾಯಕರು, ಬೆಲೆ ಏರಿಕೆಯ ವಿರುದ್ಧ ದಿಕ್ಕಾರ ಕೂಗಿದರು.

ಬೆಂಗಳೂರಿನ ಮೆಜೆಸ್ಟಿಕ್‌ನಲ್ಲಿ ಬಿಜೆಪಿಗರು ಭಿಕ್ಷಾಪಾತ್ರೆ ಹಿಡಿದು ಪ್ರತಿಭಟನೆ ನಡೆಸಿದರು. ಈ ವೇಳೆ ಮಾತನಾಡಿದ ಪ್ರತಿಪಕ್ಷ ನಾಯಕ ಆರ್.ಅಶೋಕ್, ಇದು ದುಷ್ಟ ಮತ್ತು ಲೂಟಿ ಸರ್ಕಾರ. ಸರ್ಕಾರ ಗ್ಯಾರಂಟಿ ಸಂಬಂಧ ಸುಮಾರು ಐದಾರು ಸಾವಿರ ಕೋಟಿ ಹಣ ಕೊಡಬೇಕು. ಹಣ ಕೊಡುವ ಯೋಗ್ಯತೆ ಇಲ್ಲದೆ, ಜನರ ಮೇಲೆ ತೆರಿಗೆ ಹಾಕುತ್ತಿದ್ದಾರೆ. ಗ್ಯಾರಂಟಿಗಾಗಿ ಹಣ ಅವರಿಗೆ ಒಂದು ಪೈಸೆ ಕ್ರೋಢೀಕರಣ ಮಾಡಲು ಆಗುತ್ತಿಲ್ಲ. ಜನರ ಮೇಲೆ ಅದನ್ನು ತೆರಿಗೆ ರೂಪದಲ್ಲಿ ಹಾಕುವ ದುಷ್ಟ, ಲೂಟಿ ಸರ್ಕಾರ ಎಂದು ಟೀಕಿಸಿದರು.

ಸಿದ್ದರಾಮಯ್ಯ-ಡಿ.ಕೆ.ಶಿವಕುಮಾರ್ ಸರ್ಕಾರ ಬಂದ ಮೇಲೆ ಪೆಟ್ರೋಲ್ ಮತ್ತು ಡೀಸೆಲ್‌ನಿಂದಲೇ ಐದರಿಂದ ಆರು ಸಾವಿರ ಕೋಟಿ ಹಣ ಖಜಾನೆಗೆ ಬಂದಿದೆ. ಅದನ್ನು ವಾಪಸ್ ಕೊಡಿ. ಪೆಟ್ರೋಲ್ ಬೆಲೆ ಏರಿಕೆ, ಡೀಸೆಲ್ ಬೆಲೆ ಏರಿಕೆ ಅಂತೀರಲ್ಲ, ಅದರಿಂದ ಹಣ ಬಂದಿದೆಯಲ್ಲ ವಾಪಸ್ ಕೊಡಿ.



ಆದರೆ ಕೊಡಲು ಯೋಗ್ಯತೆ ಇಲ್ಲ. ಸರ್ಕಾರ ದಿವಾಳಿಯಾಗಿದೆ, ಸಂಬಳ ಕೊಡುವುದಕ್ಕೂ ದುಡ್ಡಿಲ್ಲ ಎಂದು ವಾಗ್ದಾಳಿ ನಡೆಸಿದರು.

ಹಾಲು, ಮೊಸರು, ತುಪ್ಪದ ದರ ಏರಿಸಿದ್ದಾರೆ. ಜನಸಾಮಾನ್ಯ ಏನು ಮಾಡಬೇಕು. ಸಾರಿಗೆ ಇಲಾಖೆ ಮುಚ್ಚುವ ಸ್ಥಿತಿಗೆ ಬಂದಿದೆ. ಸಚಿವ ರಾಮಲಿಂಗಾರೆಡ್ಡಿ ಇಲಾಖೆಯನ್ನು ಈ ಸ್ಥಿತಿಗೆ ತಂದಿದ್ದಾರೆ. ಬಸ್‌ಗಳಿಗೆ ಟೈರ್ ಇಲ್ಲ, ಟ್ಯೂಬ್ ಇಲ್ಲ, ಹ್ಯಾಂಡಲ್ ಇಲ್ಲ, ಸ್ಟೇರಿಂಗ್ ಇಲ್ಲ, ಬ್ಯಾಟರಿ ಇಲ್ಲ, ಓಡುವುದೇ ಇಲ್ಲ, ತಳ್ಳುವ ಬಸ್‌ಗಳಿವೆ ಎಂದು ಟೀಕಿಸಿದರು.

ಮಂಗಳೂರಲ್ಲಿ ಬಿಜೆಪಿ ಪ್ರತಿಭಟನೆ

ಮಂಗಳೂರು ನಗರದ ಕೊಡಿಯಾಲ್‌ಬೈಲ್‌ನ ಪಿವಿಎಸ್ ವೃತ್ತದ ಬಳಿ ಬಿಜೆಪಿ ವತಿಯಿಂದ ಗುರುವಾರ ಪ್ರತಿಭಟನೆ ನಡೆಯಿತು.ಈ ಸಂದರ್ಭದಲ್ಲಿ ಮಾತನಾಡಿದ ಮಂಗಳೂರು ದಕ್ಷಿಣ ಕ್ಷೇತ್ರದ ಶಾಸಕ ಡಿ.ವೇದವ್ಯಾಸ ಕಾಮತ್, ಕಾಂಗ್ರೆಸ್ ಸರ್ಕಾರಕ್ಕೆ ಕಿಂಚಿತ್ತಾದರೂ ಮಾನ, ಮರ್ಯಾದೆ ಇದ್ದರೆ ತಕ್ಷಣವೇ ಈ ಅವೈಜ್ಞಾನಿಕ ದರ ಏರಿಕೆಯನ್ನು ಹಿಂಪಡೆಯಬೇಕು. ಇಲ್ಲವಾದರೆ ಈ ಜನವಿರೋಧಿ ಸರ್ಕಾರವನ್ನು ಅಧಿಕಾರದಿಂದ ಕಿತ್ತೊಗೆಯುವವರೆಗೆ ಬಿಜೆಪಿ ವಿಶ್ರಮಿಸುವುದಿಲ್ಲ ಎಂದು ಹೇಳಿದರು.

ಕರ್ನಾಟಕದಲ್ಲಿ ಯಾವುದೇ ಹಬ್ಬ ಸಮೀಪಿಸಿದರೂ ಇಡೀ ರಾಜ್ಯದ ಆರು ಕೋಟಿ ಜನರಲ್ಲಿ ಹೆದರಿಕೆ ಶುರುವಾಗುತ್ತದೆ. ಮೊನ್ನೆ ದಸರಾ ಹಬ್ಬದ ವೇಳೆ ಹಾಲಿನ ದರವನ್ನು ಲೀಟರ್‌ಗೆ 8 ರೂ. ಹಾಗೂ ಮೊಸರಿನ ದರವನ್ನು 14 ರೂ.ಗಳಷ್ಟು ಹೆಚ್ಚಿಸಿ ದಸರಾ ಆಚರಿಸುವ ಜನರಿಗೆ ಕಹಿ ಅನುಭವ ನೀಡಿದರು. ಈಗ ನಾಳೆಯಿಂದ ದೀಪಾವಳಿ ಹಬ್ಬ ಆರಂಭವಾಗುತ್ತಿದೆ. ಹಬ್ಬದ ಸಂಭ್ರಮದಲ್ಲಿರುವ ಬಡವರು, ಮಧ್ಯಮ ವರ್ಗದವರು ಮತ್ತು ಸ್ವಂತ ದ್ವಿಚಕ್ರ ಅಥವಾ ನಾಲ್ಕು ಚಕ್ರದ ವಾಹನಗಳಿಲ್ಲದೆ ಕೆಎಸ್‌ಆರ್‌ಟಿಸಿಯನ್ನೇ ನಂಬಿಕೊಂಡಿರುವ ಸಾಮಾನ್ಯ ಜನರಿಗೆ ಕಣ್ಣೀರು ಹಾಕಿಸುವ ಕೆಲಸವನ್ನು ಈ ಸರ್ಕಾರ ಮಾಡಿದೆ ಎಂದು ಕಿಡಿಕಾರಿದರು.

ಜನಸಾಮಾನ್ಯರು ಕಂಗಾಲು: ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ



ರಾಜ್ಯ ಸರ್ಕಾರ ಹಾಲು, ಬಸ್, ಮೆಟ್ರೋ ಹಾಗೂ ಮದ್ಯದ ದರ ಏರಿಕೆ ಮಾಡಿದ್ದರಿಂದ ಜನಸಾಮಾನ್ಯರು ಕಂಗಾಲಾಗಿದ್ದಾರೆ ಎಂದು ಕೇಂದ್ರ ಸಚಿವೆ ಶೋಭಾ ಕರದ್ಲಾಂಜೆ ರಾಜ್ಯ ಸರ್ಕಾರದ ವಿರುದ್ಧ ಕಿಡಿಕಾರಿದರು. ಶಿವಮೊಗ್ಗದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ನೌಕರರಿಗೆ ಸಂಬಳ ಕೊಡಲೂ ಹಣವಿಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ಅಧಿಕಾರದಲ್ಲಿ ಮುಂದುವರೆಯಲು ಇಡೀ ರಾಜ್ಯವನ್ನೇ ಹಾಳುಮಾಡಿ ಹೋಗಲು ಕಾಂಗ್ರೆಸ್ ಹೊರಟಿದೆ. ಸರ್ಕಾರ ಉರುಳಿಸಲು, ಇನ್ನೊಬ್ಬರನ್ನು ಇಳಿಸಲು, ರಾಜಕೀಯ ಲಾಭಕ್ಕಾಗಿ ಸ್ಟಿಂಗ್ ಆಪರೇಷನ್ ನಡೆಸಲಾಗುತ್ತಿದೆ. ಕರ್ನಾಟಕವನ್ನು ಸ್ಟಿಂಗ್ ಆಪರೇಷನ್‌ಗಳ ನಾಡನ್ನಾಗಿ ಮಾಡಿರುವುದು ರಾಜ್ಯ ರಾಜಕೀಯಕ್ಕೆ ಕಪ್ಪುಚುಕ್ಕೆ ಎಂದರು.

ನಾನು ಹಳ್ಳಿಯವನು ಎಂದು ಹೇಳಲು ಹೆಮ್ಮೆ ಇದೆ: ಎಚ್.ಡಿ.ಕುಮಾರಸ್ವಾಮಿ



ನವದೆಹಲಿ, ನ.5: ರಾಜ್ಯದ ಗೃಹ ಸಚಿವ ಪ್ರಿಯಾಂಕ್ ಖರ್ಗೆ ತಮ್ಮನ್ನು 'ಹಳ್ಳಿ ಗುಗ್ಗು' ಎಂದು ಕರೆದಿರುವ ಬಗ್ಗೆ, ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಗೃಹ ಸಚಿವರು ಹಾಗೆ ಕರೆದಿದ್ದು ಅವರ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತದೆ. ನಮ್ಮ ತಂದೆಯವರು ಹಳ್ಳಿಯಿಂದಲೇ ಬಂದು ಪ್ರಧಾನಿಯಾದರು. ನಾನು ಹಳ್ಳಿಯಿಂದಲೇ ಬಂದು ಎರಡು ಬಾರಿ ರಾಜ್ಯದ ಮುಖ್ಯಮಂತ್ರಿ ಆಗಿದ್ದೇನೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು

ನವದೆಹಲಿಯಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು; ನಾನು ಹಳ್ಳಿಯವನು ಎಂಬ ಬಗ್ಗೆ ನನಗೆ ಹೆಮ್ಮೆ ಇದೆ. ಅವರು ನನ್ನನ್ನು ಹಳ್ಳಿ ಗುಗ್ಗು ಎಂದು ಕರೆದಿದ್ದಾರೆ. ಅವರಿಗೆ ಸಂತೋಷ ಆಗುವುದಾದರೆ ಹಾಗೆಯೇ ಕರೆದುಕೊಳ್ಳಲಿ. ಅವರಿಗೆ ಜನರೇ ಉತ್ತರ ಕೊಡುತ್ತಾರೆ ಎಂದರು.

ಯಾವುದೇ ಆಕ್ಸಫರ್ಡ್, ಬೋಸ್ಟನ್ ಅಥವಾ ಕೇಂಬ್ರಿಜ್ ನಂತಹ ವಿಶ್ವವಿದ್ಯಾಲಯಗಳಲ್ಲಿ ಓದಿ ಬಂದವನಲ್ಲ. ಯಾವುದೇ ಮೂಲಸೌಕರ್ಯವೂ ಇಲ್ಲದ ಕುಗ್ರಾಮದ ಶಾಲೆಯಲ್ಲಿ ವಿದ್ಯೆ ಕಲಿತ ಸಾಮಾನ್ಯ ರೈತನ ಮಗ ಎಂಬ ಬಗ್ಗೆ ಅಪಾರ ಹೆಮ್ಮೆಯಿದೆ ಎಂದು ತಿರುಗೇಟು ನೀಡಿದರು.

ತಮ್ಮನ್ನು ಹಳ್ಳಿ ಗುಗ್ಗು ಎಂದು ಕರೆದಿರುವುದು ಕೇವಲ ತಮಗಲ್ಲ, ನಾಡಿಗೆ ಅನ್ನ ನೀಡುವ ಸಮಸ್ತ ರೈತಕುಲಕ್ಕೆ ಮತ್ತು ಗ್ರಾಮೀಣ ಜನತೆಗೆ ಮಾಡಿದ ಘೋರ ಅವಮಾನವಾಗಿದೆ ಎಂದು ಕುಮಾರಸ್ವಾಮಿ ಅವರು ನೋವು ವ್ಯಕ್ತಪಡಿಸಿದರು.

'ಭಾರತದ ಆತ್ಮ ಹಳ್ಳಿಗಳಲ್ಲಿದೆ' ಎಂದು ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರು ಹೇಳಿದ್ದರು. ಹಳ್ಳಿಗರೆಂದರೆ ಗುಗ್ಗುಗಳಲ್ಲ ಎಂದು ಪ್ರಿಯಾಂಕ್ ಖರ್ಗೆ ಅವರಿಗೆ ವಿನಮ್ರವಾಗಿ ಹೇಳಬಯಸುತ್ತೇನೆ ಎಂದು ಸಚಿವರು ಹೇಳಿದರು.

ಗೃಹ ಸಚಿವರಿಗೆ ಒಂದು ಮಾತು ಹೇಳಲು ಬಯಸುತ್ತೇನೆ. ನೀವು ಪ್ರತಿಯೊಂದಕ್ಕೂ ದಾಖಲೆ ಕೇಳುತ್ತೀರಿ. ಸಿದ್ದರಾಮಯ್ಯ ಅವರ ಸಂಪುಟದಲ್ಲಿ ನೀವು 3 ವರ್ಷಗಳ ನಿರ್ವಹಿಸಿದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಎಂಜನಿಯರ್‌ಗಳನ್ನು ತರಾತುರಿಯಲ್ಲಿ ಆಯ್ಕೆ ಮಾಡಿದ್ದೀರಿ. ಈ ಬಗ್ಗೆ ನೆನಪಿರಬಹುದು. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನಾಡಿನ ಮುಂದೆ ಇಟ್ಟದ್ದೇ ಈ ಹಳ್ಳಿ ಗುಗ್ಗು ಎಂಬುದನ್ನು ಮರೆಯಬೇಡಿ. ಎಂದು ಟಾಂಗ್ ನೀಡಿದರು.

ರಾಷ್ಟ್ರಮಟ್ಟದಲ್ಲಿ ರಾಹುಲ್ ಗಾಂಧಿಯವರನ್ನು ಜನರು 'ಇಡಿಯಟ್' (ಮೂರ್ಖ) ಎಂದು ಕರೆಯುತ್ತಾರೆ. ಆ ಪದಕ್ಕೆ ಪ್ರಿಯಾಂಕ್ ಖರ್ಗೆ ಅವರು 'ವಿಲೇಜ್' (ಹಳ್ಳಿ) ಎಂಬ ಪದವನ್ನು ಸೇರಿಸಿ ನನ್ನನ್ನು 'ವಿಲೇಜ್ ಇಡಿಯಟ್' ಎಂದು ಕರೆದು ಅಪಮಾನಿಸಿದ್ದಾರೆ. ಹಳ್ಳಿಯ ರೈತರನ್ನು ಹಗುರವಾಗಿ ಪರಿಗಣಿಸಿರುವ ಈ ಕಾಂಗ್ರೆಸ್ ನಾಯಕರ ದುರಹಂಕಾರದ ಮಾತುಗಳಿಗೆ ಮುಂದಿನ ದಿನಗಳಲ್ಲಿ ನಾಡಿನ ಜನತೆಯೇ ತಕ್ಕ ಉತ್ತರ ನೀಡಲಿದ್ದಾರೆ ಎಂದು ಎಚ್ಚರಿಸಿದರು.

ಅಕ್ರಮ, ಪ್ರಜಾಪ್ರಭುತ್ವ ವಿರೋಧಿ ಎಸ್‌ಐಆರ್ ರದ್ದು ಸೇರಿ 5 ನಿರ್ಣಯ ಮಂಡನೆ

ಸಿಇಸಿ ನೇಮಕಾತಿ ಪ್ರಕ್ರಿಯೆಯ ಸ್ವಾಯತ್ತತೆ ಖಾತರಿಗೆ ಆಗ್ರಹ: ಬೆಂಗಳೂರಿನಲ್ಲಿ ಕಾಂಗ್ರೆಸ್ ನೇತೃತ್ವದಲ್ಲಿ 20ಕ್ಕೂ ಹೆಚ್ಚು ಸಂಘಟನೆಗಳಿಂದ ಪ್ರತಿಭಟನೆ



ಬೆಂಗಳೂರು, ನ.5: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ವಿರೋಧಿಸಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಇಂಡಿಯಾ ಒಕ್ಕೂಟದ ವತಿಯಿಂದ ಬೃಹತ್ ಪ್ರತಿಭಟನೆ ನಡೆಸಲಾಯಿತು. ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ 20ಕ್ಕೂ ಹೆಚ್ಚು ಸಂಘಟನೆಗಳ ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿ ಕೇಂದ್ರ ಚುನಾವಣಾ ಆಯೋಗದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಎಸ್‌ಐಆರ್ ಪ್ರಕ್ರಿಯೆಯನ್ನು ಅಕ್ರಮ ಮತ್ತು ಪ್ರಜಾಪ್ರಭುತ್ವ ವಿರೋಧಿ ಎಂದು ಆರೋಪಿಸಿದ ಪ್ರತಿಭಟನಾಕಾರರು, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರು ಹಾಗೂ ಶಾಸಕರು ಭಾಗವಹಿಸಿದ್ದರು.

ಪ್ರತಿಭಟನೆಯ ಸಂದರ್ಭದಲ್ಲಿ ಇಂಡಿಯಾ ಒಕ್ಕೂಟದ ವತಿಯಿಂದ ಐದು ಪ್ರಮುಖ ನಿರ್ಣಯಗಳನ್ನು ಮಂಡಿಸಲಾಯಿತು. ಅಕ್ರಮ ಮತ್ತು ಪ್ರಜಾಪ್ರಭುತ್ವ ವಿರೋಧಿ ಎಸ್‌ಐಆರ್ ಪ್ರಕ್ರಿಯೆಯನ್ನು ತಕ್ಷಣವೇ ರದ್ದುಪಡಿಸಬೇಕು. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಲಾಯಿತು. ಇದರ ಜತೆಗೆ, ಮುಖ್ಯ ಚುನಾವಣಾ ಆಯುಕ್ತರ ನೇಮಕಾತಿ ಕಾನೂನನ್ನು ರದ್ದುಗೊಳಿಸಿ, ಸುಪ್ರೀಂ ಕೋರ್ಟ್ ಸೂಚನೆಯಂತೆ ನೇಮಕಾತಿ ಪ್ರಕ್ರಿಯೆಯ ಸ್ವಾಯತ್ತತೆಯನ್ನು ಖಾತರಿಪಡಿಸಬೇಕು ಎಂದು ಆಗ್ರಹಿಸಲಾಯಿತು.

ಕರ್ನಾಟಕ ಸರ್ಕಾರ ರಾಜ್ಯದ ಎಸ್‌ಐಆರ್ ಅಂತಿಮ ಮತದಾರರ ಪಟ್ಟಿಯನ್ನು ತಿರಸ್ಕರಿಸಬೇಕು. ಅಲ್ಲದೆ, ರಾಜ್ಯದಲ್ಲಿ ನಡೆಯಲಿರುವ ಸ್ಥಳೀಯ ಸಂಸ್ಥೆಗಳು ಹಾಗೂ ಮುಂಬರುವ ತಾಲೂಕು ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಗಳನ್ನು ಎಸ್‌ಐಆರ್‌ಗೂ ಮುನ್ನ ಇದ್ದ ಮತದಾರರ ಪಟ್ಟಿಯ ಆಧಾರದ ಮೇಲೆ ನಡೆಸಲು ಕ್ರಮ ಕೈಗೊಳ್ಳಬೇಕು ಎಂಬ ನಿರ್ಣಯಗಳನ್ನೂ ಮಂಡಿಸಲಾಯಿತು.

ಎಸ್‌ಐಆರ್ ಪ್ರಕ್ರಿಯೆ ಪ್ರಜಾಪ್ರಭುತ್ವದ ಆಶಯಗಳಿಗೆ ವಿರುದ್ಧವಾಗಿದೆ ಎಂದು ಆಕ್ಷೇಪ ವ್ಯಕ್ತಪಡಿಸಿರುವ ಇಂಡಿಯಾ ಒಕ್ಕೂಟ, ಈ ಐದು ಬೇಡಿಕೆಗಳನ್ನು ಈಡೇರಿಸುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮೇಲೆ ಒತ್ತಡ ಹೇರುವ ಉದ್ದೇಶದಿಂದ ಪ್ರತಿಭಟನೆ ನಡೆಸಿದೆ

ಜ್ಞಾನೇಶ್‌ಕುಮಾರ್ ರಾಜೀನಾಮೆ ನೀಡಿ ಜೈಲಿಗೆ ಅಟ್ಟುವವರೆಗೂ ಹೋರಾಟ: ಬಿ.ಕೆ. ಹರಿಪ್ರಸಾದ್

ಬೆಂಗಳೂರು, ನ.5: ನಮ್ಮ ಪೂರ್ವಜರು ಮಾಡಿರುವ ತ್ಯಾಗ ಬಲಿದಾನಕ್ಕೆ ಬಿಜೆಪಿಯವರು ಅಪಮಾನ ಮಾಡುತ್ತಿದ್ದಾರೆ. ಆರ್ ಎಸ್ಎಸ್ ಮಾಡುತ್ತಿರುವ ಷಡ್ಯಂತ್ರದ ವಿರುದ್ಧ ನಾವು ಹೋರಾಟ ಮಾಡಬೇಕಾದರೆ ನಾವು ಒಂದಾಗಿ ಜ್ಞಾನೇಶ್ ಕುಮಾರ್ ರಾಜೀನಾಮೆ ನೀಡಿ, ಆತನನ್ನು ಜೈಲಿಗೆ ಹಾಕುವವರೆಗೂ ನಾವು ಹೋರಾಟ ಮಾಡಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಹೇಳಿದ್ದಾರೆ. ಬಿಹಾರದಲ್ಲಿ 64 ಲಕ್ಷ, ಪಶ್ಚಿಮ ಬಂಗಾಳದಲ್ಲಿ 91 ಲಕ್ಷ ಮತದಾರರನ್ನು ಕೈಬಿಟ್ಟು ತಮ್ಮ ಸರ್ಕಾರ ಅಧಿಕಾರಕ್ಕೆ ಬರುವಂತೆ ಮಾಡಿಕೊಂಡಿದ್ದಾರೆ. ಮಹಾರಾಷ್ಟ್ರ, ಹರಿಯಾಣ ಸೇರಿದಂತೆ ಬೆಂಗಳೂರು ಕೇಂದ್ರ ಕ್ಷೇತ್ರದ ಮಹದೇವಪುರದಲ್ಲಿ 1 ಲಕ್ಷ ಮತಗಳ ಅಕ್ರಮ ಎಸಗಿದ್ದಾರೆ. ಆದರೂ ಮಾನ ಮರ್ಯಾದೆ ಇಲ್ಲದೆ ಸಂಸತ್ತಿನಲ್ಲಿ ಚರ್ಚೆಗೆ ಸಿದ್ಧವಿಲ್ಲದೆ ನಮ್ಮ ವಿರುದ್ಧ ಪ್ರತಿಭಟನೆಗೆ ಮುಂದಾಗಿದ್ದಾರೆ. ಸರ್ಕಾರದಲ್ಲಿರುವ ಪಕ್ಷ ರಸ್ತೆಗಿಳಿದು ಪ್ರತಿಭಟನೆ ಮಾಡಿರುವುದನ್ನು ನಾವು ಯಾರೂ ನೋಡಿರಲಿಲ್ಲ. ಆದರೆ ಇವರು ಮಾಡುತ್ತಿರುವುದು ನೋಡಿದರೆ ಜನರು ಅವರ ವಿರುದ್ಧ ನಿಂತಿದ್ದಾರೆ ಎಂಬುದಕ್ಕೆ ಸಾಕ್ಷಿ. ನಮ್ಮ ನಾಯಕರಾದ ರಾಹುಲ್ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರು ಇಂಡಿಯಾ ಮೈತ್ರಿಕೂಟದ ಪಕ್ಷಗಳೊಂದಿಗೆ ಹೋರಾಟಕ್ಕೆ ಮುಂದಾಗಿದ್ದು, ಈ ಹೋರಾಟಕ್ಕೆ ಕರ್ನಾಟಕದಲ್ಲಿ ನಮ್ಮೆಲ್ಲರ ಸಂಪೂರ್ಣ ಬೆಂಬಲವಿದೆ. ನಾವು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಈ ಪ್ರತಿಭಟನೆ ಹಮ್ಮಿಕೊಂಡಿದ್ದು, ನಮ್ಮ ಹೋರಾಟ ನಿರಂತರವಾಗಿ ಮುಂದುವರಿಯಲಿದೆ ಎಂದು ಹರಿಪ್ರಸಾದ್ ಹೇಳಿದರು.

ಕೆಪಿಎಸ್‌ಸಿ 362 ಕಳಂಕಿತ ಅಧಿಕಾರಿಗಳ ಸೇವೆ ಮುಂದುವರಿಸದಿರಿ

ಬೆಂಗಳೂರು, ನ.5: ಕರ್ನಾಟಕ ಸಾರ್ವಜನಿಕ ಸೇವಾ ಆಯೋಗದ (ಕೆಪಿಎಸ್‌ಸಿ) 2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ಬೆನ್ನಲ್ಲೇ, ಕಳಂಕಿತ ನೇಮಕಾತಿಯಡಿ ಸೇವೆಗೆ ಸೇರಿದ ಅಧಿಕಾರಿಗಳನ್ನು ಮುಂದುವರಿಸದಂತೆ ರಾಜ್ಯ ಸರ್ಕಾರಕ್ಕೆ ಕಾನೂನು ಇಲಾಖೆ ಸೂಚನೆ ನೀಡಿದೆ.

362 ಗ್ರೂಪ್ ಎ ಮತ್ತು ಗ್ರೂಪ್ ಬಿ ಹುದ್ದೆಗಳ ನೇಮಕಾತಿಯನ್ನು ರದ್ದುಗೊಳಿಸಿರುವ ಹಿನ್ನೆಲೆಯಲ್ಲಿ, ನ್ಯಾಯಾಲಯದ ಆದೇಶವನ್ನು ಯಥಾವತ್ತಾಗಿ ಜಾರಿಗೊಳಿಸುವುದು ಸರ್ಕಾರಕ್ಕೆ ಅನಿವಾರ್ಯವಾಗಿದೆ. ಅ. 29ರಂದು ಸುಪ್ರೀಂ ಕೋರ್ಟ್, 2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿಗಳ ನೇಮಕಾತಿಯನ್ನು ಮಾನ್ಯಗೊಳಿಸಲು ರಾಜ್ಯ ಸರ್ಕಾರ ಜಾರಿಗೆ ತಂದಿದ್ದ ಕರ್ನಾಟಕ ನಾಗರಿಕ ಸೇವೆಗಳ (2011ನೇ ಬ್ಯಾಚ್ ಗೆಜೆಟೆಡ್ ಪ್ರೊಬೇಷನರಿಗಳ ಆಯ್ಕೆ ಮತ್ತು ನೇಮಕಾತಿಯ ಮೌಲ್ಯಮಾಪನ) 2022ರ ಕಾಯ್ದೆಯನ್ನು ಅಸಂವಿಧಾನಿಕ ಎಂದು ಘೋಷಿಸಿ ರದ್ದುಗೊಳಿಸಿತ್ತು.

ಕೆಪಿಎಸ್‌ಸಿ ನೇಮಕಾತಿ ಪ್ರಕ್ರಿಯೆಯಲ್ಲಿ ವ್ಯಾಪಕ ಭ್ರಷ್ಟಾಚಾರ ಮತ್ತು ಸ್ವಜನಪಕ್ಷಪಾತ ನಡೆದಿರುವ ಆರೋಪಗಳ ಹಿನ್ನೆಲೆಯಲ್ಲಿ ಈ ಹಿಂದೆ ನ್ಯಾಯಾಲಯಗಳು ನೇಮಕಾತಿ ಯನ್ನು ರದ್ದುಗೊಳಿಸಿದ್ದವು. ಆದರೆ 2022ರ ಕಾಯ್ದೆ ಮೂಲಕ ನೇಮಕಾತಿಗೆ ಮರುಜೀವ ನೀಡುವ ಪ್ರಯತ್ನ ನಡೆದಿತ್ತು.

ಈಗ ಸುಪ್ರೀಂಕೋರ್ಟ್ ಆ ಕಾಯ್ದೆಯನ್ನೇ ರದ್ದುಗೊಳಿಸಿರುವುದರಿಂದ ನೇಮಕಾತಿಗಳೂ ಅಸಿಂಧುವಾಗಿವೆ. ಹೀಗಾಗಿ ಹಳೆಯ ಅಧಿಕಾರಿಗಳನ್ನು ಸೇವೆಯಲ್ಲಿ ಮುಂದುವರಿಸಲು ಸರ್ಕಾರಕ್ಕೆ ಸ್ವತಂತ್ರ ಅಧಿಕಾರವಿಲ್ಲ ಎಂದು ಕಾನೂನು ಇಲಾಖೆ ಸ್ಪಷ್ಟಪಡಿಸಿದೆ.

ವಿಶೇಷ ಪರೀಕ್ಷೆಗೆ ಅವಕಾಶವಿಲ್ಲ:

2011ನೇ ಬ್ಯಾಚ್‌ನ ಅಭ್ಯರ್ಥಿಗಳಿಗೆ ಮಾತ್ರ ಸೀಮಿತವಾಗಿ ವಿಶೇಷ ಪರೀಕ್ಷೆ ನಡೆಸುವುದು ಅಥವಾ ಪ್ರತ್ಯೇಕ ನೇಮಕಾತಿ ಪ್ರಕ್ರಿಯೆ ರೂಪಿಸುವುದು ಸಂವಿಧಾನದ 14 ಮತ್ತು 16ನೇ ವಿಧಿಗಳ ಉಲ್ಲಂಘನೆಗೆ ಕಾರಣವಾಗಬಹುದು ಎಂದು ಇಲಾಖೆ ಎಚ್ಚರಿಸಿದೆ.

ಇಂತಹ ಕ್ರಮವು ಸುಪ್ರೀಂ ಕೋರ್ಟ್ ತೀರ್ಪಿನ ಆಶಯವನ್ನು ಬದಿಗೊತ್ತುವ ಪ್ರಯತ್ನ ವೆಂದೂ ಪರಿಗಣನೆಯಾಗ ಬಹುದು. ಅಲ್ಲದೆ, ಹೊಸ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಹಾಲಿ ಅಧಿಕಾರಿಗಳನ್ನು ಸೇವೆಯಲ್ಲಿ ಉಳಿಸಿಕೊಳ್ಳಲು ಕೋರ್ಟ್ ಅನುಮತಿ ನೀಡಿಲ್ಲ. ಅನುಮತಿಯಿಲ್ಲದೆ ಕ್ರಮ ಕೈಗೊಂಡರೆ ನ್ಯಾಯಾಂಗ ಆದೇಶದ ಉಲ್ಲಂಘನೆ ಸಾಧ್ಯತೆಯಿದೆ ಎಂದು ಇಲಾಖೆ ಅಭಿಪ್ರಾಯಪಟ್ಟಿದೆ.

ವಯೋಮಿತಿ ಸಡಿಲಿಕೆ

ಸುಪ್ರೀಂಕೋರ್ಟ್ ತನ್ನ ತೀರ್ಪಿನ 19ನೇ ಪ್ಯಾರಾದಲ್ಲಿ ಮಹತ್ವದ ನಿರ್ದೇಶನ ನೀಡಿದೆ. ಪ್ರಸ್ತುತ ಜಾರಿಯಲ್ಲಿರುವ ನೇಮಕಾತಿ ನಿಯಮಗಳ ಪ್ರಕಾರ ಖಾಲಿ ಇರುವ ಗ್ರೂಪ್ ಎ ಮತ್ತು ಗ್ರೂಪ್ ಬಿ ಹುದ್ದೆಗಳಿಗೆ ಹೊಸದಾಗಿ ಅಧಿಸೂಚನೆ ಹೊರಡಿಸಿ, ಮುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ನೇಮಕಾತಿ ನಡೆಸುವಂತೆ ರಾಜ್ಯ ಸರ್ಕಾರಕ್ಕೆ ಸೂಚಿಸಿದೆ. (7ನೇ ಪುಟಕ್ಕೆ)

ಬಿಜಿಎಸ್ ಉತ್ಸವಕ್ಕೆ ರಕ್ಷಣಾ ಸಚಿವ ರಾಜನಾಥ್ ಸಿಂಗ್‌ಗೆ ಆಹ್ವಾನ



ನವದೆಹಲಿ, ನ.5: ನವದೆಹಲಿಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರನ್ನು ಭೇಟಿಯಾದ ಬಿಜಿಎಸ್ ಮತ್ತು ಎಸ್‌ಜೆಬಿ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಡಾ. ಪ್ರಕಾಶನಾಥ ಸ್ವಾಮೀಜಿ ಅವರು, ಬಿಜಿಎಸ್ ಉತ್ಸವ ಹಾಗೂ 18ನೇ ವರ್ಷದ ಸಂಸ್ಥಾಪಕರ ದಿನಾಚರಣೆಗೆ ಆಹ್ವಾನ ನೀಡಿದರು.

ನವೆಂಬರ್ 27ರಂದು ಮಧ್ಯಾಹ್ನ 2 ಗಂಟೆಗೆ ಕೆಂಗೇರಿಯ ಬಿಜಿಎಸ್ ಹೆಲ್ತ್ ಮತ್ತು ಎಜುಕೇಶನ್ ಸಿಟಿಯಲ್ಲಿ ಎರಡು ದಿನಗಳ BGS ಉತ್ಸವ, ಫೌಂಡರ್ಸ್ ಡೇ ಮತ್ತು ಕಲ್ಚರಲ್ ಫೆಸ್ಟ್ ನಡೆಯಲಿದೆ.

ಇದೇ ಸಂದರ್ಭದಲ್ಲಿ 800 ಹಾಸಿಗೆಗಳ ಸಾಮರ್ಥ್ಯದ ನೂತನ ಆಸ್ಪತ್ರೆಯ ಉದ್ಘಾಟನಾ ಕಾರ್ಯಕ್ರಮವೂ ಜರುಗಲಿದೆ.

ಕಾರ್ಯಕ್ರಮಕ್ಕೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಆಗಮಿಸುವ ನಿರೀಕ್ಷೆಯಿದ್ದು, ಕರ್ನಾಟಕದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಕೇರಳದ ಮುಖ್ಯಮಂತ್ರಿ ವಿ.ಡಿ. ಸತೀಶನ್ ಅವರು ನವೆಂಬರ್ 27ರಂದು ಭಾಗವಹಿಸಲಿದ್ದಾರೆ. ನವೆಂಬರ್ 28ರಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಇದಲ್ಲದೆ, ಉಪರಾಷ್ಟ್ರಪತಿಗಳನ್ನೂ ಭೇಟಿಯಾಗಿ ಕಾರ್ಯಕ್ರಮಕ್ಕೆ ಆಹ್ವಾನಿಸುವ ಉದ್ದೇಶವಿದೆ ಎಂದು ಸ್ವಾಮೀಜಿ ತಿಳಿಸಿದರು.

ಪೂಜ್ಯ ಡಾ. ಬಾಲಗಂಗಾಧರನಾಥ ಸ್ವಾಮೀಜಿಯವರು ನಿರ್ಮಿಸಿದ ಆಸ್ಪತ್ರೆಗಳು ಮತ್ತು ಶಿಕ್ಷಣ ಸಂಸ್ಥೆಗಳು, ಪೂಜ್ಯ ಡಾ. ನಿರ್ಮಲಾನಂದನಾಥ ಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ಹಾಗೂ ಡಾ. ಪ್ರಕಾಶನಾಥ ಸ್ವಾಮೀಜಿಯವರ ಸಾರಥ್ಯದಲ್ಲಿ ಮುನ್ನಡೆಯುತ್ತಿವೆ.

ಸಂಸ್ಥೆಯಲ್ಲಿ ಸತತ 25 ವರ್ಷಗಳ ಕಾಲ ಸೇವೆ ಸಲ್ಲಿಸಿರುವ ವೈದ್ಯಕೀಯ ಸಿಬ್ಬಂದಿಯನ್ನು ಗುರುತಿಸಿ, ಅವರಿಗೆ 'ಸೇವಾರತ್ನ ಪ್ರಶಸ್ತಿ' ನೀಡಿ ಗೌರವಿಸಲಾಗುವುದು. ಎರಡು ದಿನಗಳ ಈ ಬೃಹತ್ ಉತ್ಸವದಲ್ಲಿ ಸುಮಾರು 25 ಸಾವಿರ ಜನರು ಭಾಗವಹಿಸುವ ನಿರೀಕ್ಷೆಯಿದೆ.

ಡಾ. ಬಾಲಗಂಗಾಧರನಾಥ ಸ್ವಾಮೀಜಿಯವರು ಶಿಕ್ಷಣ, ಆರೋಗ್ಯ ಮತ್ತು ಸಮಾಜಸೇವೆಯ ಕ್ಷೇತ್ರಗಳಲ್ಲಿ ಸಲ್ಲಿಸಿದ ಮಹೋನ್ನತ ಸೇವೆಯನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ಯುವುದು ನಮ್ಮ ಗುರಿಯಾಗಿದೆ ಎಂದು ಡಾ. ಪ್ರಕಾಶನಾಥ ಸ್ವಾಮೀಜಿ ತಿಳಿಸಿದರು.

ಎಸ್‌ಐಆರ್ ವಿಚಾರದಲ್ಲಿ ಕಾಂಗ್ರೆಸ್‌ನಿಂದ ದೇಶಾದ್ಯಂತ ಅರಾಜಕತೆ, ಗೊಂದಲ ಸೃಷ್ಟಿ

ಸಾಂವಿಧಾನಿಕ ಸಂಸ್ಥೆಗಳ ಕಾರ್ಯವೈಖರಿ ಬಗ್ಗೆ ಬಿಜೆಪಿಯಿಂದ ಜನರಿಗೆ ತಿಳಿಸುವ ಯತ್ನ: ಬಿಜೆಪಿ ವಕ್ತಾರ ಡಾ.ಸಂಬೀತ್ ಪಾತ್ರ

ಬೆಂಗಳೂರು, ಅ.5: ಎಸ್‌ಐಆರ್ ಸಂಬಂಧ ಕಾಂಗ್ರೆಸ್ ದೇಶದಾದ್ಯಂತ ಜನರಲ್ಲಿ ಗೊಂದಲ ಮೂಡಿಸುತ್ತಿದೆ. ದೇಶದಾದ್ಯಂತ ಅರಾಜಕತೆಯನ್ನು ಹಬ್ಬಿಸುತ್ತಿದೆ. ಆದರೆ ಬಿಜೆಪಿ ಚುನಾವಣಾ ಆಯೋಗದಂತಹ ಸಾಂವಿಧಾನಿಕ ಸಂಸ್ಥೆಗಳು ಹೇಗೆ ಕೆಲಸ ಮಾಡುತ್ತಿವೆ ಎಂಬುದನ್ನು ಜನರಿಗೆ ತಿಳಿಸುವ ಪ್ರಯತ್ನ ಮಾಡುತ್ತಿದೆ ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಹಾಗೂ ಸಂಸದ ಡಾ. ಸಂಬೀತ್ ಪಾತ್ರಾ ಹೇಳಿದ್ದಾರೆ.

ರಾಜ್ಯ ಬಿಜೆಪಿ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಎಸ್‌ಐಆರ್ ಸಂಬಂಧ ಬಿಜೆಪಿ ಯುವಜನತೆ, ಮಾಧ್ಯಮಗಳು ಮತ್ತು ಸಾಮಾನ್ಯ ಜನರೊಂದಿಗೆ ಸಂವಾದ ನಡೆಸುತ್ತಿದೆ. ಒಂದು ನಿರ್ದಿಷ್ಟ ನೋಟ ಮತ್ತು ದೃಷ್ಟಿಕೋನ ಇಟ್ಟುಕೊಂಡಿದೆ. ಆದರೆ ಕಾಂಗ್ರೆಸ್ ಇದಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿದೆ ಎಂದು ದೂರಿದರು.

ಆರೋಗ್ಯಕರ ಪ್ರಜಾಪ್ರಭುತ್ವಕ್ಕಾಗಿ ಎಲ್ಲರನ್ನು ತಲುಪುವ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಸತ್ಯ ಏನು ಎಂದು ಜನರಿಗೆ ಅರಿವಾಗಬೇಕು.



ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರಗೆ ಹುಟ್ಟುಹಬ್ಬದ ಶುಭ ಕೋರಿದ ಸಂಬೀತ್ ಪಾತ್ರಾ

ದೇಶದ ಸಾಂವಿಧಾನಿಕ ಸಂಸ್ಥೆಗಳು ಹೇಗೆ ಕೆಲಸ ಮಾಡುತ್ತಿವೆ ಎಂಬುದು ತಿಳಿಯಬೇಕು ಎಂದು ವಿವರಿಸಿದರು.

ಇತ್ತೀಚೆಗೆ ವಿಧಾನ ಪರಿಷತ್ ಚುನಾವಣೆಯಲ್ಲಿ ಬ್ಯಾಲೆಟ್ ಪೇಪರ್ ಬಳಸಲಾಗಿತ್ತು. ಆದರೂ ಬಿಜೆಪಿ ಅಭ್ಯರ್ಥಿಗಳೇ ಗೆಲುವು ಸಾಧಿಸಿದರು. ಶಿಲ್ಪಾ ಬಡಮ್ಮನವರ್ ಎಂಬುವರು ಪಶ್ಚಿಮ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ನಕಲಿ ಮತದಾನ ಮಾಡಿದರು. ಕಾಂಗ್ರೆಸ್ ಜಿಲ್ಲಾಧ್ಯಕ್ಷರ ಪತ್ನಿಯ ಹೆಸರಿನಲ್ಲಿ ಕಾಂಗ್ರೆಸ್ ಪಕ್ಷದ ಮಹಿಳಾ ಕಾರ್ಯಕರ್ತೆಯೇ ನಕಲಿ ಮತದಾನ ಮಾಡಿರೋ ಆರೋಪ ಕೇಳಿಬಂದಿತ್ತು. ಈ ಬಗ್ಗೆ ವಿವಾದ ಆಯಿತು. ರಾಜ್ಯದಲ್ಲಿ ಬಸ್ ಹಾಗೂ ಹಾಲಿನ ಬೆಲೆ ಏರಿಕೆ ಬಗ್ಗೆಯೇ ಜನರು ಮಾತನಾಡುತ್ತಿದ್ದಾರೆ. ರಾಹುಲ್ ಗಾಂಧಿ ಅವರು ಈ ಎಲ್ಲದರ ಬಗ್ಗೆಯೂ ಚರ್ಚೆಗೆ ಬರಬೇಕು ಎಂದು ಸಂಬೀತ್ ಆಗ್ರಹಿಸಿದರು.

ಎಸ್‌ಐಆರ್ ನಡೆದ ನಂತರ ಯಾರದೇ ಅರ್ಹ ಮತದಾರರ ಹೆಸರು ಬಿಟ್ಟು ಹೋಗಿದ್ದರೆ ಅವರು ಮತ್ತೆ ಹೆಸರು ಸೇರಿಸಲು ಅವಕಾಶ ಇದೆ. ಆದರೂ ಕಾಂಗ್ರೆಸ್ ಮತಕಳವು ಎಂದು ಆರೋಪ ಮಾಡುತ್ತಿದೆ. ಎಸ್‌ಐಆರ್‌ನಲ್ಲಿ ಮೂರು ಕೋಟಿ ಮತದಾರರಿಗೆ ನೋಟಿಸ್ ನೀಡಲಾಗಿದೆ. ಅವರಲ್ಲಿ ಹಲವರು ಉತ್ತರ ನೀಡಿಲ್ಲ. ಅವರು ಅಕ್ರಮ ವಲಸೆ ಬಂದವರು ಎಂದು ಸಾಬೀತಾಗಿದೆ. ಇವರಿಗೆಲ್ಲ ಮಮತಾ ಬ್ಯಾನರ್ಜಿ ಅವರು ಆಧಾರ್ ಕಾರ್ಡ್ ಮಾಡಿಕೊಟ್ಟಿದ್ದರು. ಪ್ರಿಯಾಂಕಾ ಗಾಂಧಿ ಅವರಿಗೆ ರೇಷನ್ ಕಾರ್ಡ್ ನೀಡಿದ್ದರು. ರೋಹಿಂಗ್ಯಾಗಳು ಭಾರತಕ್ಕೆ ಬಂದಿದ್ದಾರೆ. ಅವರ ಹೆಸರು ಮತಪಟ್ಟಿಯಲ್ಲಿವೆ. ಈಗ ಕಾಂಗ್ರೆಸ್ ನ ಓಟ್ ಬ್ಯಾಂಕ್‌ಗೆ ತಡೆಯಾಗಿದೆ ಎಂದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ರಾಜ್ಯ ಪ್ರಧಾನ ಕಾರ್ಯದರ್ಶಿ ಮತ್ತು ಶಾಸಕ ವಿ. ಸುನೀಲ್‌ಕುಮಾರ್, ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಂಗೌಡ, ರಾಜ್ಯ ಮುಖ್ಯ ವಕ್ತಾರ ಅಶ್ವತ್ಥನಾರಾಯಣ್, ಯುವಮೋರ್ಚಾ ರಾಜ್ಯ ಅಧ್ಯಕ್ಷ ಮತ್ತು ಶಾಸಕ ಧೀರಜ್ ಮುನಿರಾಜು ಉಪಸ್ಥಿತರಿದ್ದರು.

ದಾಖಲೆ ಇದ್ದರೆ ಕೋರ್ಟ್‌ಗೆ ಸಲ್ಲಿಸಲಿ


ಭಾರತ ಧಾರ್ಮಿಕ ಮೂಲಭೂತವಾದಿಗಳ ದೇಶ ಅಲ್ಲ. ನಮ್ಮದು ಜಾತ್ಯತೀತ ದೇಶ. ಆದರೆ ನೇಹಾ ಬೋರಾ ಬಾಂಗ್ಲಾ ದೇಶದಲ್ಲಿ ಆದಂತೆ ಭಾರತದಲ್ಲೂ ಆಗಲಿದೆ ಎನ್ನುತ್ತಾರೆ. ಇಂತಹ ಸಂದರ್ಭದಲ್ಲಿ ಬಿಜೆಪಿ ಸುಮ್ಮನಿರಲು ಸಾಧ್ಯವಿಲ್ಲ. ಶಾಂತಿಯಿಂದ ಸಾಂವಿಧಾನಿಕ ಮಾರ್ಗದ ಮೂಲಕ ಜನರ ಮುಂದೆ ಬರುತ್ತೇವೆ. ಮತಕಳವಿನ ಬಗ್ಗೆ ಕಾಂಗ್ರೆಸ್‌ಗೆ ಮಾಹಿತಿ ಇದ್ದರೆ ದಾಖಲೆ ಇದ್ದರೆ ಚುನಾವಣಾ ಆಯೋಗ ಅಥವಾ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಲಿ ಎಂದು ಸಂಬೀತ್ ಪಾತ್ರಾ ಸವಾಲು ಹಾಕಿದರು.

ರಾಹುಲ್‌ಗಾಂಧಿ ಬಳಿ ನೋ ಡೇಟಾ - ಓನ್ಲಿ ಗಲಾಟ

ರಾಹುಲ್ ಗಾಂಧಿ ಅವರಿಗೆ ದೇಶದ ಆಗುಹೋಗುಗಳ ಬಗ್ಗೆ ಯಾವುದೇ ಅಂಕಿಅಂಶ ಮತ್ತು ಮಾಹಿತಿ ಇರುವುದಿಲ್ಲ. ಅವರದು ಒಂದು ರೀತಿ ನೋ ಡೇಟಾ, ಓನ್ಲಿ ಗಲಾಟ? ಎನ್ನುವಂತಿಗೆ. ದೇಶದಲ್ಲಿ ಏನು ನಡೆಯುತ್ತಿದೆ ಎಂಬ ಬಗ್ಗೆ ಅವರಿಗೆ ತಿಳಿವಳಿಕೆಯೇ ಇಲ್ಲ. ಆದರೆ ಅರಾಜಕತೆ ರೀತಿ ಬೀದಿಯಲ್ಲಿ ಗಲಾಟೆ ಮಾಡ್ತಾರೆ. ಆದರೆ ಇವರು ಮೋದಿ ಅವರೊಂದಿಗೆ ಚರ್ಚೆ ಮಾಡಬೇಕು ಎಂದು ಬಯಸುತ್ತಾರೆ ಎಂದು ಡಾ. ಸಂಬಿತ್ ಪಾತ್ರಾ ವ್ಯಂಗ್ಯವಾಡಿದರು. ರಾಹುಲ್ ಗಾಂಧಿ ಅವರು ಸಂಸತ್ತಿನಲ್ಲಿ ಐದಾರು ನಿಮಿಷವೂ ಕೂರುವುದಿಲ್ಲ. ಹೊರಗೆ ಹೋಗ್ತಾರೆ ಬರ್ತಾರೆ. ಇದಕ್ಕೆ ಬೇಕಾದರೆ ದಾಖಲೆಗಳನ್ನು ತೆಗೆದು ನೋಡಿ. ಅವರು ಆ ರೀತಿ ಮಾಡುವುದನ್ನು ನಾನು ಹತ್ತಿರದಿಂದ ನೋಡಿದ್ದೇನೆ. ಒಂದು ಕಡೆ ಅವರು ಐದಾರು ನಿಮಿಷವೂ ಶಾಂತಿಯಿಂದ ಕೂರುವುದಿಲ್ಲ. ಚರ್ಚೆಗೆ ಸಹ ಬರುವುದಿಲ್ಲ ಎಂದು ದೂರಿದರು.

Chief reporter : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com
Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

ಬಿ.ವೈ ವಿಜಯೇಂದ್ರ ಜನ್ಮದಿನ ಗಣ್ಯರಿಂದ ಸನ್ಮಾನ



ಬೆಂಗಳೂರು, ನ.5: ಬಿಜೆಪಿಯ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಯಡಿಯೂರಪ್ಪ ಅವರ 51ನೇ ಜನುಮ ದಿನ ಸಂದರ್ಭದಲ್ಲಿ ಮಾಜಿ ಸಂಸದ ಡಾ.ಉಮೇಶ್ ಜಾಧವ್ ಮತ್ತು ಶಾಸಕ ಡಾ. ಅವಿನಾಶ್ ಉಮೇಶ್ ಜಾಧವ್ ಸನ್ಮಾನಿಸಿ ಶುಭ ಕೋರಿದರು.

ಬೆಂಗಳೂರಿನ ಬಿಜೆಪಿ ಕಚೇರಿ ಜಗನ್ನಾಥ ಭವನದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಸನ್ಮಾನಿಸಿದರು. ಪಕ್ಷದ ಹಿರಿಯ ನಾಯಕರಾದ ಯಡಿಯೂರಪ್ಪ ಅವರ ಆದರ್ಶದ ಹಾದಿಯಲ್ಲಿ ನಡೆದು ಸರಳ ಸಜ್ಜನಿಕೆಯೊಂದಿಗೆ ಸಮರ್ಪಣಾ ಮನೋಭಾವದಿಂದ ಜನಸೇವೆ ಮಾಡುತ್ತಿರುವ ವಿಜಯೇಂದ್ರ ಅವರಿಗೆ ಭವಿಷ್ಯ ಉಜ್ವಲವಾಗಲಿ ಎಂದು ಡಾ. ಉಮೇಶ್ ಜಾಧವ್ ಶುಭ ಕೋರಿದರು.

ಈ ಸಂದರ್ಭದಲ್ಲಿ ಶಾಸಕ ಡಾ ಅವಿನಾಶ್ ಜಾಧವ್ ಹಾಗೂ ಚಿಂಚೋಳಿ ತಾಲೂಕಿನ ಮಂಡಲ ಅಧ್ಯಕ್ಷ ವಿಜಯಕುಮಾರ್ ಚೇಂಗಟಿ,ಪ್ರಧಾನ ಕಾರ್ಯದರ್ಶಿ ರಾಮರೆಡ್ಡಿ ಪಾಟೀಲ್, ತೊಗರಿಮಂಡಳಿಯ ಮಾಜಿ ಅಧ್ಯಕ್ಷ ರಾಜಶೇಖರ್ ಗೌನಳ್ಳಿ, ವಿಜಯಕುಮಾರ್ ಮಾಡಗಿ, ನಾಗರಾಜ್ ಕೇಶ್ವಾರ್ ಚಂದ್ರಶೇಖರ ಮಳಗಿ, ಶಿವಮೂರ್ತಿಸ್ವಾಮಿ, ಸದ್ದಾಂ ವಜೀರ್ ಗಾಂವ ಗಣ್ಯರು ಜೊತೆಗಿದ್ದರು.

ಮೊದಲನೇ ಪುಟದಿಂದ

14,500 ಕೋಟಿ ಅಂತರನಿಧಿ ಯೋಜನೆಗೆ ಕೇಂದ್ರ ಅನುಮೋದನೆ

ಮತ್ತು 2031–32ರ ವೇಳೆಗೆ ಅಗತ್ಯವಿರುವ 411 ಉಘು ಗ್ರಿಡ್ ಸ್ಕೇಲ್ ಇಖಖ ಸಾಮರ್ಥ್ಯವನ್ನು ಪೂರೈಕೆಗೆ ನೆರವಾಗಲಿದೆ ಎಂದಿದ್ದಾರೆ.

24 ತಾಸು ವಿದ್ಯುತ್ ಪೂರೈಕೆ ಖಚಿತ: ಭಾರತದ ವಿದ್ಯುತ್ ವಲಯದಲ್ಲಿನ ಮೂಲಸೌಕರ್ಯ ಬಲಪಡಿಸುವ ನಿಟ್ಟಿನಲ್ಲಿ ಈ ಯೋಜನೆ ಮಹತ್ವದ್ದಾಗಿದ್ದು, ನವೀಕರಿಸಬಹುದಾದ ಇಂಧನ ವಲಯದ ಏಕೀಕರಣವನ್ನು ಸುಗಮಗೊಳಿಸುತ್ತದೆ ಮತ್ತು ವಿಶ್ವಾಸಾರ್ಹ, ಕೈಗೆಟುಕುವ ಮತ್ತು ದಿನದ 24 ಗಂಟೆಯೂ ವಿದ್ಯುತ್ ಪೂರೈಕೆಯನ್ನು ಖಚಿತಪಡಿಸುತ್ತದೆ ಎಂದು ಹೇಳಿದ್ದಾರೆ.

ಕ್ಯಾಪೆಕ್ಸ್ ಬೆಂಬಲ ಯೋಜನೆ: 2,814 ಕೋಟಿ ಆರ್ಥಿಕ ವೆಚ್ಚದೊಂದಿಗೆ ಐದು ವರ್ಷಗಳ ಅವಧಿಗೆ ನಿರ್ಣಾಯಕ ಖನಿಜ ಸಂಸ್ಕರಣೆಯನ್ನು ಉತ್ತೇಜಿಸುವ 'ಕ್ಯಾಪೆಕ್ಸ್ ಬೆಂಬಲ ಯೋಜನೆ'ಗೂ ಕೇಂದ್ರ ಸಂಪುಟ ಅನುಮೋದನೆ ನೀಡಿದೆ ಎಂದು ತಿಳಿಸಿದ್ದಾರೆ.

ತುಂಗಭದ್ರಾ ನೀರು ಹಂಚಿಕೆ: ಆಂಧ್ರ ಕೋಟಾದಡಿ ಉಳಿಯುವ 4 ಟಿಎಂಸಿ ಬಳಕೆಗೆ ಕ್ರಮ

ಬೆಂಗಳೂರು, ನ.5: ತುಂಗಭದ್ರಾ ನದಿ ನೀರಿನ ಹಂಚಿಕೆಯಲ್ಲಿ ಆಂಧ್ರಪ್ರದೇಶ ಕೋಟಾದಡಿ ಉಳಿಕೆ ಆಗುವ 4 ಟಿಎಂಸಿ ನೀರಿನ ಸದ್ಬಳಕೆಗೆ ಅವಕಾಶ ಕೋರಲು ರಾಜ್ಯ ಸರ್ಕಾರ ಮುಂದಾಗಿದೆ. ಈ ಸಂಬಂಧ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್.ತಂಗಡಗಿ ನೇತೃತ್ವದ ನಿಯೋಗವು ಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿಮಾಡಿ ಮನವಿ ಸಲ್ಲಿಸಿತು.

ಕರ್ನಾಟಕದಲ್ಲಿ ಮುಂಗಾರು ಹಂಗಾಮಿನಲ್ಲಿ ಬೆಳೆದಿರುವ ಬೆಳೆಗಳನ್ನು ನ.30ರವರೆಗೆ ಸಂರಕ್ಷಿಸಬೇಕಾಗಿದೆ. ಆದ್ದರಿಂದ ಆಂಧ್ರಪ್ರದೇಶದ ನದಿ ಸಹಾಯ ಕೋಟಾದಡಿ ಉಳಿಕೆಯಾಗಿರುವ ನೀರನ್ನು ಬಳಕೆ ಮಾಡಿಕೊಳ್ಳುವ ಸಂಬಂಧ ಆಂಧ್ರ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರೊಂದಿಗೆ ಮಾತನಾಡುವಂತೆ ಡಿ.ಕೆ.ಶಿವಕುಮಾರ್ ಅವರಿಗೆ ಸಚಿವರು ಮನವಿ ಮಾಡಿದ್ದಾರೆ. ಆಂಧ್ರಪ್ರದೇಶದ ಕೋಟಾದಡಿ 5 ಟಿಎಂಸಿ ನೀರು ಹಂಚಿಕೆ ಮಾಡಲಾಗಿದೆ. ಈ ಪೈಕಿ ಈಗಾಗಲೇ 1 ಟಿಎಂಸಿಯನ್ನು ನದಿಗೆ ಹರಿಸಲಾಗಿದೆ. ಉಳಿದ 4 ಟಿಎಂಸಿ ನೀರನ್ನು ಆರ್‌ಬಿಎಚ್‌ಎಲ್‌ಸಿ ಅಥವಾ ಕಾಲುವೆಗಳಿಗೆ ತಿರುಗಿಬಹುದೇ ಎಂಬುದರ ಬಗ್ಗೆ ಖಚಿತವಾಗಿಲ್ಲ. ಆದ್ದರಿಂದ ಈ ನೀರನ್ನು ಬಳಸಿಕೊಳ್ಳಲು ಅವಕಾಶ ನೀಡಿದರೆ ಅನುಕೂಲ ಆಗಲಿದೆ ಎಂದು ತಂಗಡಗಿ ಮನವಿ ಮಾಡಿದ್ದಾರೆ.

ಪ್ರಸ್ತುತ ಕರ್ನಾಟಕದ ಕೋಟಾದಡಿ ಹಂಚಿಕೆಯಾಗಿರುವ ನೀರಿನ ಪ್ರಮಾಣ 70.807 ಟಿಎಂಸಿಯಲ್ಲಿ ಕುಡಿಯುವ ನೀರಿಗಾಗಿ 10.71 ಟಿಎಂಸಿ ಕಾಯ್ದಿರಿಸಲಾಗಿದೆ. ನೀರಾವರಿಗಾಗಿ 60.097 ಟಿಎಂಸಿ ಬಳಸಬಹುದಾಗಿದೆ. ಅಕ್ಟೋಬರ್ 31ರವರೆಗೆ 51.243 ಟಿಎಂಸಿ ನೀರನ್ನು ಬಳಸಲಾಗಿದೆ. ನವೆಂಬರ್ 1 ರಿಂದ 11ರವರೆಗೆ ಬಳಕೆಯಾಗಬಹುದಾದ ನೀರಿನ ಪ್ರಮಾಣ 8.170 ಟಿಎಂಸಿ ಒಟ್ಟು ಬಳಕೆ ಆಗಬಹುದಾದ ನೀರಿನ ಪ್ರಮಾಣ 59.413 ಟಿಎಂಸಿ ಆಗಿದೆ.

15 ಡಿಗ್ರಿ ಓರೆಯಾದ ವಿಶ್ವದ ಮೊದಲ ಎಲ್‌ಇಡಿ ಡೋಮ್ ತಾರಾಲಯ ನ.13ರಂದು ಲೋಕಾರ್ಪಣೆ

ಮೈಸೂರು, ನ.5: ಮೈಸೂರಿನಲ್ಲಿ ನಿರ್ಮಾಣಗೊಂಡಿರುವ ವಿಶ್ವದ ಮೊದಲ 15 ಡಿಗ್ರಿ ಓರೆಯಾದ ಎಲ್‌ಇಡಿ ಡೋಮ್ ತಾರಾಲಯವನ್ನು ನ.13ರಂದು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಲಿದ್ದಾರೆ.

ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಶ್ರೀ ಜಯಚಾಮರಾಜ ಒಡೆಯರ್ ಉನ್ನತ ಕಲಿಕಾ ಕೇಂದ್ರದ ಆವರಣದಲ್ಲಿ ಈ ಅತ್ಯಾಧುನಿಕ ತಾರಾಲಯ ನಿರ್ಮಿಸಲಾಗಿದೆ. ಇದಕ್ಕಾಗಿ ಮೈಸೂರು ವಿಶ್ವವಿದ್ಯಾನಿಲಯ ಮೂರು ಎಕರೆ ಭೂಮಿ ನೀಡಿದ್ದು, ಸುಮಾರು 91 ಕೋಟಿ ರೂಪಾಯಿ ವೆಚ್ಚದಲ್ಲಿ ಯೋಜನೆ ಸಾಕಾರಗೊಂಡಿದೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿ ಸೇರಿದಂತೆ ಕೇಂದ್ರದ ವಿವಿಧ ಇಲಾಖೆಗಳ ಸಹಯೋಗದಲ್ಲಿ ಈ ಯೋಜನೆ ಅನುಷ್ಠಾನಗೊಂಡಿದೆ.

ತಾರಾಲಯದ ವಿಶೇಷ

ತಾರಾಲಯದ ವಿಶೇಷವೆಂದರೆ 15 ಮೀಟರ್ ವ್ಯಾಪ್ತಿಯ ಗುಮ್ಮಟವನ್ನು ಸಂಪೂರ್ಣ ಎಲ್‌ಇಡಿ ಪ್ಯಾನೆಲ್‌ಗಳಿಂದ





ನಿರ್ಮಿಸಲಾಗಿದೆ. ಸಾಮಾನ್ಯ ಪ್ರೊಜೆಕ್ಟರ್ ತಂತ್ರಜ್ಞಾನದ ಬದಲಾಗಿ ಎಲ್‌ಇಡಿ ಪರದೆಯ ಮೇಲೆಯೇ ಆಕಾಶದ ದೃಶ್ಯಾವಳಿಗಳನ್ನು ನೇರವಾಗಿ ಪ್ರದರ್ಶಿಸಲಾಗುತ್ತದೆ. 15 ಡಿಗ್ರಿ ಓರೆಯಾದ ವಿನ್ಯಾಸ ಹಾಗೂ 8ಕೆ ರೆಸಲ್ಯೂಶನ್ ತಂತ್ರಜ್ಞಾನದಿಂದ ಗ್ರಹ, ನಕ್ಷತ್ರಗಳ ವೀಕ್ಷಣೆ ಹೊಸ ಅನುಭವ ನೀಡಲಿದೆ. ಫ್ರಾನ್ಸ್‌ನ ಆರ್‌ಎಸ್‌ಎ ಕಾಸ್ಮೋಸ್ ಮತ್ತು ಜಪಾನ್‌ನ ಕೊನಿಕಾ ಮಿನೋಲ್ಟಾ ಸಂಸ್ಥೆಗಳ ಸಹಯೋಗದಲ್ಲಿ ಅಭಿವೃದ್ಧಿಪಡಿಸಿರುವ ಸ್ಕೈ ಎಕ್ಸ್‌ಪ್ಲೋರರ್ ತಂತ್ರಾಂಶವನ್ನು ಇಲ್ಲಿ ಬಳಸಲಾಗಿದೆ. ಏಕಕಾಲದಲ್ಲಿ 150 ಮಂದಿ ಕುಳಿತು ವೀಕ್ಷಣೆ ಮಾಡುವ ಸಾಮರ್ಥ್ಯ ಹೊಂದಿದೆ. ಇದರೊಂದಿಗೆ ವಿದ್ಯಾರ್ಥಿಗಳು ಹಾಗೂ ಯುವ ವಿಜ್ಞಾನಿಗಳಿಗೆ ಖಗೋಳ ವಿಜ್ಞಾನದಲ್ಲಿ ತರಬೇತಿ ನೀಡುವ ಉದ್ದೇಶವೂ ಇದೆ. ಬೆಂಗಳೂರಿನ ಭಾರತೀಯ ಖಗೋಳ ಭೌತಶಾಸ್ತ್ರ ಸಂಸ್ಥೆ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಸಹಯೋಗದಲ್ಲಿ ಕಾಸ್ಮೋಸ್ ಕಾಸ್ಮಾಲಜಿ ತರಬೇತಿ ಕೇಂದ್ರ ಕಾರ್ಯನಿರ್ವಹಿಸಲಿದೆ. ಭಾರತದ ಅತ್ಯಾಧುನಿಕ ದೂರದರ್ಶಕಗಳಿಂದ ಸಂಗ್ರಹವಾಗುವ ದತ್ತಾಂಶಗಳ ವಿಶ್ಲೇಷಣೆ ಕುರಿತು ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗುತ್ತದೆ.

ಕನ್ನಡಿಗರಿಗೆ ಹೆಚ್ಚಿನ ಉದ್ಯೋಗ ನೀಡಿ: ಐಕಿಯಾ ಸಂಸ್ಥೆಗೆ ಸಿಎಂ ಸಲಹೆ

ಕರ್ನಾಟಕದ ಸಣ್ಣ ಉದ್ಯಮಗಳನ್ನು ಬಳಸಿಕೊಂಡು ಪ್ರೋತ್ಸಾಹಿಸಲು ಸೂಚನೆ

ಬೆಂಗಳೂರು, ನ.05: ಕರ್ನಾಟಕ ಸಣ್ಣ ಉದ್ಯಮಗಳು ಗುಣಮಟ್ಟದ ಪೀಠೋಪಕರಣ ತಯಾರಿಸುವ ಸಾಮರ್ಥ್ಯ ಹೊಂದಿದ್ದು, ಅವುಗಳನ್ನು ಬಳಸಿಕೊಂಡು ಪ್ರೋತ್ಸಾಹಿಸಿ. ಆ ಮೂಲಕ ಕರ್ನಾಟಕಕ್ಕೆ ಹೆಚ್ಚಿನ ಆದ್ಯತೆ ನೀಡಿ. ಐಕಿಯಾ ಸಂಸ್ಥೆಯಲ್ಲಿ ಕನ್ನಡಿಗರಿಗೆ ಹೆಚ್ಚಿನ ಉದ್ಯೋಗ ನೀಡಿ ಎಂದು ಸಿಎಂ ಡಿ.ಕೆ.ಶಿವಕುಮಾರ್ ಅವರು ಸಲಹೆ ನೀಡಿದರು.

ಕನಕಪುರ ರಸ್ತೆಯ ಐಕಿಯಾ ಮಳಿಗೆಯನ್ನು ಶಿವಕುಮಾರ್ ಅವರು ಗುರುವಾರ ಉದ್ಘಾಟಿಸಿ ಮಾತನಾಡಿದರು. 'ನಾನು ಇದುವರೆಗೂ ಯಾವುದೇ ಮಳಿಗೆ ಉದ್ಘಾಟನೆಗೆ ಹೋಗಿಲ್ಲ. ನನ್ನ ಮಕ್ಕಳು ಆರಂಭಿಸುವ ಕಟ್ಟಡಗಳ ಉದ್ಘಾಟನೆಗೆ ನಾನು ಹೆಚ್ಚಾಗಿ ಹೋಗುವುದಿಲ್ಲ.



ಇದೇ ಮೊದಲ ಬಾರಿಗೆ ಮಳಿಗೆ ಉದ್ಘಾಟನೆಗೆ ಬಂದಿರುವೆ ಎಂದರು.

ನಮ್ಮ ಯುವಕರು, ಪ್ರತಿಭಾವಂತರು, ಸುಸಂಸ್ಕೃತರು

ನಾವು ಜಾಗತಿಕ ಬಂಡವಾಳ ಹೂಡಿಕೆದಾರರನ್ನು ಕರ್ನಾಟಕಕ್ಕೆ ಆಹ್ವಾನಿಸುತ್ತಿದ್ದು, ಇಲ್ಲಿ ಅನೇಕ ಅವಕಾಶಗಳನ್ನು ಕಲ್ಪಿಸಿದ್ದೇವೆ. ಬೆಂಗಳೂರಿನ ದಕ್ಷಿಣ ಭಾಗದಲ್ಲಿದ್ದೇವೆ. ಐಕಿಯಾ ಗುಣಮಟ್ಟದ ಉತ್ಪನ್ನಗಳಿಗೆ ಹೆಸರುವಾಸಿಯಾಗಿದ್ದು, ಐಕಿಯಾ ಸಂಸ್ಥೆ ಕರ್ನಾಟಕಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಸ್ವೀಡನ್, ಭಾರತ ಹಾಗೂ ಕರ್ನಾಟಕದೊಂದಿಗೆ ಉತ್ತಮ ಬಾಂದವ್ಯ ಹೊಂದಿದ್ದು, ಸ್ಥಳೀಯ ಕನ್ನಡಿಗರಿಗೆ ಹೆಚ್ಚಿನ ಉದ್ಯೋಗ ನೀಡಿ. ನಮ್ಮ ಯುವಕರು, ಪ್ರತಿಭಾವಂತರು, ಸುಸಂಸ್ಕೃತರು. ಅವರಿಗೆ ಗ್ರಾಹಕರನ್ನು ಸೆಳೆಯುವ ಮಾರುಕಟ್ಟೆ ಕೌಶಲ್ಯವಿದೆ ಎಂದು ಭರವಸೆ ನೀಡಿದರು.

ಐಕಿಯಾ ಎಲ್ಲ ವರ್ಗದವರಿಗೂ ಕೈಗೆಟುಕಲಿದ್ದು, ಗುಣಮಟ್ಟ ಕಾಯ್ದುಕೊಂಡಿದೆ. ನಿಮಗೆ ಉತ್ತೇಜನ ನೀಡಬೇಕು, ನಿಮ್ಮೊಂದಿಗೆ ಕರ್ನಾಟಕ ಸರ್ಕಾರ ಇದೆ ಎಂದು ಭರವಸೆ ನೀಡಲು ಈ ಕಾರ್ಯಕ್ರಮಕ್ಕೆ ನಾನು ಹಾಗೂ ನಮ್ಮ ಸಚಿವ ಪ್ರಿಯಾಂಕ್ ಖರ್ಗೆ ಆಗಮಿಸಿದ್ದೇವೆ. ನಿಮಗೆ ಭವಿಷ್ಯದಲ್ಲಿ ಮತ್ತಷ್ಟು ಒಳ್ಳೆಯದಾಗಲಿ ಎಂದು ಶುಭಕೋರುವೆ ಎಂದು ತಿಳಿಸಿದರು.

20 ಸಾವಿರ ಕೋಟಿ ರೂ ವೆಚ್ಚದಲ್ಲಿ ರಾಜ್ಯ, ಜಿಲ್ಲಾ ಹೆದ್ದಾರಿ ಅಭಿವೃದ್ಧಿ

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಸಂಪುಟ ಸಭೆಯಲ್ಲಿ ಹಲವು ಕಾಮಗಾರಿಗೆ ಒಪ್ಪಿಗೆ

ಬೆಂಗಳೂರು, ನ.5: ಲೋಕೋಪಯೋಗಿ ಇಲಾಖೆಯಿಂದ ವಿವಿಧ ಯೋಜನೆಗಳಡಿ ಒಟ್ಟು 20,000 ಕೋಟಿ ರೂ. ವೆಚ್ಚದಲ್ಲಿ ವಿವಿಧ ರಾಜ್ಯ ಹೆದ್ದಾರಿಗಳು, ಜಿಲ್ಲಾ ಪ್ರಮುಖ ರಸ್ತೆಗಳು, ಸೇತುವೆಗಳ ನಿರ್ಮಾಣಕ್ಕೆ ಸಚಿವ ಸಂಪುಟ ಅನುಮೋದನೆ ನೀಡಿದೆ.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ. ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಹಂತ 5, ಘಟ್ಟ 2ರಲ್ಲಿ, ಒಟ್ಟು 1897 ಕಿ.ಮೀ. ಉದ್ದದ ರಸ್ತೆಗಳ ಅಭಿವೃದ್ಧಿ ಕೈಗೊಳ್ಳಲಾಗುತ್ತಿದೆ. ಅಪೆಂಡಿಕ್ಸ್ ಇ ಅಡಿಯಲ್ಲಿ 6000 ಕೋಟಿ ರೂ. ಅಂದಾಜು ವೆಚ್ಚದಲ್ಲಿ ವಿವಿಧ ವಿಧಾನ ಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ರಸ್ತೆ, ಸೇತುವೆ ಮತ್ತು ಕಟ್ಟಡ ಕಾಮಗಾರಿ ಕೈಗೊಳ್ಳಲಾಗುತ್ತಿದೆ.

3000 ಕೋಟಿ ರೂ ಹೆಚ್ಚುವರಿ ಅನುದಾನದಲ್ಲಿ ರಸ್ತೆ ಅಭಿವೃದ್ಧಿ



ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಜಿಲ್ಲಾ ಕೇಂದ್ರದಿಂದ ಜಿಲ್ಲಾ ಕೇಂದ್ರ , ಜಿಲ್ಲಾ ಕೇಂದ್ರದಿಂದ ತಾಲ್ಲೂಕು ಕೇಂದ್ರ ಮತ್ತು ತಾಲ್ಲೂಕು ಕೇಂದ್ರದಿಂದ ತಾಲ್ಲೂಕು ಕೇಂದ್ರಕ್ಕೆ ಸಂಪರ್ಕ ಕಲ್ಪಿಸುವ 3986 ಕಿ.ಮೀ. ರಸ್ತೆ ಅಭಿವೃದ್ಧಿಯನ್ನು 6000 ಕೋಟಿ ರೂ. ವೆಚ್ಚದಲ್ಲಿ ಕೈಗೆತ್ತಿಕೊಳ್ಳುವ ಹೊಸ ಯೋಜನೆಗೆ ಅನುಮೋದನೆ ನೀಡಲಾಗಿದೆ.

ರೊಬೋಟಿಕ್ ಸರ್ಜರಿ ಉಪಕರಣ ಖರೀದಿಗೆ ಒಪ್ಪಿಗೆ

ರಾಜ್ಯ ಮತ್ತು ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನದ ನಿಟ್ಟಿನಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನ ಅಡಿಯಲ್ಲಿ 28.01 ಕೋಟಿ ರೂ. ವೆಚ್ಚದ ಸಮಗ್ರ ಕ್ರಿಯಾಯೋಜನೆಗೆ ಸಂಪುಟ ಅನುಮೋದನೆ ನೀಡಿದೆ. ಬೆಂಗಳೂರಿನ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಹಾಗೂ ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಗೆ ತಲಾ 20 ಕೋಟಿ ರೂ. ಅಂದಾಜು ವೆಚ್ಚದಲ್ಲಿ ರೊಬೋಟಿಕ್ ಸರ್ಜರಿ ಉಪಕರಣ ಖರೀದಿಗೆ ಆಡಳಿತಾತ್ಮಕ ಅನುಮೋದನೆ. ಇದರಲ್ಲಿ 5 ಕೋಟಿ ರೂ. ಆಯಾ ಸಂಸ್ಥೆಗಳ ಆಂತರಿಕ ಸಂಪನ್ಮೂಲದಿಂದ ಹಾಗೂ 15 ಕೋಟಿ ರೂ. ಸರ್ಕಾರದ ಅನುದಾನದ ಮೂಲಕ ವೆಚ್ಚ ಭರಿಸಲು ತೀರ್ಮಾನಿಸಲಾಗಿದೆ

6 ಬೆಂಗಳೂರು ಸುತ್ತಮುತ್ತ 10 ಪ್ಯಾಕೇಜ್‌ಗಳಲ್ಲಿ ಅಭಿವೃದ್ಧಿ ಕಾಮಗಾರಿ

ಬೆಂಗಳೂರು ಹಾಗೂ ಸುತ್ತಮುತ್ತಲಿನ ಸಂಚಾರದಟ್ಟಣೆ ಹಾಗೂ ರಾಜಧಾನಿಯ ರಸ್ತೆ ಜಾಲವನ್ನು ಬಲಪಡಿಸಲು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದಿಂದ ಬೆಂಗಳೂರು ಸುತ್ತಮುತ್ತಲಿನ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳನ್ನು 10 ಪ್ಯಾಕೇಜ್‌ಗಳಲ್ಲಿ ಕೈಗೊಳ್ಳಲು 3409.02 ಕೋಟಿ ರೂ. ಪರಿಷ್ಕೃತ ಅಂದಾಜು ವೆಚ್ಚಕ್ಕೆ ಸಚಿವ ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿದೆ. ಬೆಂಗಳೂರು ಸುತ್ತಮುತ್ತ ಲಿನ 155 ಕಿ.ಮೀ. ರಸ್ತೆ ಗಳ ಅಭಿವೃದ್ಧಿ ಕಾಮಗಾರಿಯನ್ನು ಪಿಪಿಪಿ ಮಾದರಿಯಲ್ಲಿ 2095 ಕೋಟಿ ರೂ. ಗಳಲ್ಲಿ ಕೈಗೆತ್ತಿಕೊಳ್ಳಲು 2017 ರಲ್ಲಿ ಅನುಮೋದನೆ ನೀಡಲಾಗಿತ್ತು. ಈ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು 2019ರಲ್ಲಿ ಪ್ರಾರಂಭಿಸಲಾಗಿದ್ದು, ಪರಿಷ್ಕೃತ 142.27 ಕಿ.ಮೀ. ಉದ್ದದ ರಸ್ತೆ ಅಭಿವೃದ್ಧಿ ಕಾಮಗಾರಿಗಳ ಪೈಕಿ 121.78 ಕಿ.ಮೀ. ರಸ್ತೆ ಪೂರ್ಣಗೊಂಡಿದೆ.

ಸನ್ನತಿ ಅಭಿವೃದ್ಧಿ ಪ್ರಾಧಿಕಾರ ರಚನೆಗೆ ಒಪ್ಪಿಗೆ

ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಐತಿಹಾಸಿಕ ಹಾಗೂ ಪುರಾತತ್ವ ಮಹತ್ವದ ಸನ್ನತಿಯನ್ನು ಅಂತರರಾಷ್ಟ್ರೀಯ ಪಾರಂಪರಿಕ, ಸಾಂಸ್ಕೃತಿಕ ಮತ್ತು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವ ಉದ್ದೇಶದಿಂದ ಸನ್ನತಿ ಅಭಿವೃದ್ಧಿ ಪ್ರಾಧಿಕಾರ ರಚನೆಗೆ ಸಂಬಂಧಿಸಿದ 2026ನೇ ಸಾಲಿನ ವಿಧೇಯಕಕ್ಕೆ ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

ಇತರ ಪ್ರಮುಖ ನಿರ್ಣಯಗಳು

ಎಂಎಂ ಹಿಲ್ಸ್ ವಿಭಾಗದಲ್ಲಿ 10.60 ಕಿ.ಮೀ. ರೈಲ್ವೆ ಬ್ಯಾರಿಕೇಡ್

* **2942 ರೈತ ಕುಟುಂಬಗಳ ಸುರಕ್ಷತೆಯ ದೃಷ್ಟಿಯಿಂದ ಚಾಮರಾಜನಗರ ವೃತ್ತದ ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ಪಿ.ಜಿ. ಪಾಳ್ಯ ವನ್ಯಜೀವಿ ವಲಯದಲ್ಲಿ ಪಿ.ಜಿ. ಪಾಳ್ಯದಿಂದ ಕುಡುವಲೆ ಕ್ರಾಸ್‌ವರೆಗೆ 16.83 ಕೋಟಿ ರೂ. ವೆಚ್ಚದಲ್ಲಿ 10.60 ಕಿ.ಮೀ. ಉದ್ದದ ರೈಲ್ವೆ ಬ್ಯಾರಿಕೇಡ್ ನಿರ್ಮಾಣ**
* **ಶಿವಮೊಗ್ಗ ನಗರದಲ್ಲಿರುವ ಬಾಗಲಕೋಟೆ-ಬಿಳಿಗಿರಿರಂಗನಬೆಟ್ಟ ರಾಜ್ಯ ಹೆದ್ದಾರಿ 57ರಲ್ಲಿರುವ ಹಳೆಯ ತುಂಗಾ ಸೇತುವೆಯು ಶಿಥಿಲಗೊಂಡಿದ್ದು 40 ಕೋಟಿ ರೂ. ವೆಚ್ಚದಲ್ಲಿ ಮರುನಿರ್ಮಾಣ**
* **ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕು ಧರ್ಮಪುರ ಕೆರೆಯಿಂದ ಹಲಗಲದ್ದಿ, ಮದ್ದಿಹಳ್ಳಿ, ಖಂಡೇನಹಳ್ಳಿ, ಬೇತೂರು ಮತ್ತು ಇತರ ಕೆರೆಗಳನ್ನು ತುಂಬಿಸುವ 35 ಕೋಟಿ ರೂ. ವೆಚ್ಚದ ಏತ ನೀರಾವರಿ ಕಾಮಗಾರಿ**
* **ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ನಗರಸಭೆ ವ್ಯಾಪ್ತಿಯಲ್ಲಿ 35.04 ಕೋಟಿ ರೂ. ವೆಚ್ಚದ ಉದ್ದೇಶಿತ ವಾಣಿಜ್ಯ ಸಂಕೀರ್ಣದ ಕಾಮಗಾರಿ**
* **ಉಡುಪಿ ಜಿಲ್ಲೆಯ ಮಲ್ಪೆ ಮೀನುಗಾರಿಕಾ ಬಂದರಿನಲ್ಲಿ 1800 ಚದರ ಅಡಿ ಜಾಗದಲ್ಲಿ ಸಾರ್ವಜನಿಕ/ಖಾಸಗಿ ಮಾದರಿಯಲ್ಲಿ ಬಹುಮಹಡಿ ಪಾರ್ಕಿಂಗ್ ಸೌಲಭ್ಯ ಕಲ್ಪಿಸಲು ತೀರ್ಮಾನ**
* **ಸ್ಥಳೀಯ ಕೈಗಾರಿಕೋದ್ಯಮಿಗಳಿಗೆ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಿಸಲು ಹಾಗೂ ಯುವ ಸಣ್ಣ ಕೈಗಾರಿಕೋದ್ಯಮಿಗಳನ್ನು ಉತ್ತೇಜಿಸಲು ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ಮತ್ತು ಬಳ್ಳಾರಿ ಜಿಲ್ಲೆ ಕಂಪ್ಲಿ ಹೋಬಳಿಯ ಹರಳಹಳ್ಳಿಯಲ್ಲಿ ಒಟ್ಟು 26.10 ಕೋಟಿ ರೂ. ವೆಚ್ಚದಲ್ಲಿ ನೂತನ ಕೈಗಾರಿಕಾ ವಸಾಹತು ನಿರ್ಮಾಣ ಕೌಶಲ್ಯಾಭಿವೃದ್ಧಿ ಹಾಗೂ ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಕೈಗಾರಿಕಾ ಅಭಿವೃದ್ಧಿಗೆ ಪೂರಕವಾಗಿ ಸ್ಥಳೀಯರಿಗೆ ಉದ್ಯೋಗ ಒದಗಿಸಲು ಅನುಕೂಲವಾಗಲಿದೆ.**

ಮುಂದಿನ 5 ವರ್ಷಗಳಲ್ಲಿ 30 ಗೀಗಾವ್ಯಾಟ್ ನವೀಕರಿಸಬಹುದಾದ ಇಂಧನ ಸಾಮರ್ಥ್ಯ ಸೇರ್ಪಡೆ ಗುರಿ

ಕರ್ನಾಟಕದಲ್ಲಿ ಹೂಡಿಕೆಗೆ ವಿಫುಲ ಅವಕಾಶವಿದೆ: ಉದ್ಯಮಿಗಳಿಗೆ ಗೌರವ್ ಗುಪ್ತ ಆಹ್ವಾನ

ಹೊಸದಿಲ್ಲಿ, ನ.5: ನವೀಕರಿಸಬಹುದಾದ ಇಂಧನ ವಲಯಕ್ಕೆ ಪೂರಕ ಪರಿಸರ ವ್ಯವಸ್ಥೆ ಹಾಗೂ ಹೂಡಿಕೆದಾರಸ್ನೇಹಿ ನೀತಿಗಳನ್ನು ಹೊಂದಿರುವ ಕರ್ನಾಟಕಕ್ಕೆ ಬನ್ನಿ, ಹೂಡಿಕೆ ಮಾಡಿ ಎಂದು ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಅವರು ದೇಶ– ವಿದೇಶಗಳ ಹೂಡಿಕೆದಾರರಿಗೆ ಆಹ್ವಾನ ನೀಡಿದ್ದಾರೆ.

ಹೊಸದಿಲ್ಲಿಯ ಭಾರತ್ ಮಂಟಪದಲ್ಲಿ ನಡೆಯುತ್ತಿರುವ ಭಾರತ್ ನವೀಕರಿಸಬಹುದಾದ ಇಂಧನ ಶೃಂಗಸಭೆ ಮತ್ತು ಎಕ್ಸ್‌ಪೋ 2026ದ ಸಮಾವೇಶದಲ್ಲಿ ಮಾತನಾಡಿದ ಅವರು,



ಕರ್ನಾಟಕದಲ್ಲಿ ಪವನ ಮತ್ತು ಸೌರ ವಿದ್ಯುತ್ ಉತ್ಪಾದನೆಗೆ ಹೆಚ್ಚಿನ ಅವಕಾಶಗಳಿದ್ದು, ಹೂಡಿಕೆದಾರ ಸ್ನೇಹಿ ನೀತಿಗಳು, ಭೂ ಪರಿವರ್ತನೆಗೆ ಸ್ವಯಂಚಾಲಿತ ಅನುಮತಿ ವ್ಯವಸ್ಥೆ ಹಾಗೂ ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಹೂಡಿಕೆಗೆ ಅಪಾರ ಅವಕಾಶಗಳಿವೆ ಎಂದು ತಿಳಿಸಿದರು.

ರಾಜ್ಯದ ನವೀಕರಿಸಬಹುದಾದ ಇಂಧನ ಸಾಮರ್ಥ್ಯವು 2022ರಲ್ಲಿ 16 ಗೀಗಾವ್ಯಾಟ್‌ನಿಂದ


ಕರ್ನಾಟಕ ಪೆವಿಲಿಯನ್

ಶೃಂಗಸಭೆಯ ಪ್ರಮುಖ ಆಕರ್ಷಣೆಗಳಲ್ಲಿ ಕ್ರೆಡಲ್ ನ ಸ್ಥಾಪಿಸಿದ್ದ ಕರ್ನಾಟಕ ಪೆವಿಲಿಯನ್ ಕೂಡ ಒಂದಾಗಿತ್ತು. ಐತಿಹಾಸಿಕ ಮೈಸೂರು ಅರಮನೆಯ ಭವ್ಯ ವಾಸ್ತುಶಿಲ್ಪದ ಪರಿಕಲ್ಪನೆಯಡಿ ಪೆವಿಲಿಯನ್ ಅನ್ನು ವಿನ್ಯಾಸಗೊಳಿಸಲಾಗಿತ್ತು. ವಿದ್ಯುತ್ ಕ್ಷೇತ್ರದಲ್ಲಿ ಕರ್ನಾಟಕ ಸಾಧಿಸಿರುವ ಮಹತ್ವದ ಮೈಲಿಗಲ್ಲುಗಳು ಮತ್ತು ಪ್ರಗತಿಯ ಪಯಣವನ್ನು ಇಲ್ಲಿ ಪ್ರದರ್ಶಿಸಲಾಗಿತ್ತು.

ಪ್ರಸ್ತುತ 23 ಗೀಗಾವ್ಯಾಟ್‌ಗೆ ಏರಿಕೆಯಾಗಿದೆ. ಮುಂದಿನ ದಿನಗಳಲ್ಲಿ ಪ್ರತಿವರ್ಷ 5ರಿಂದ 7 ಗೀಗಾವ್ಯಾಟ್ ನವೀಕರಿಸಬಹುದಾದ ಇಂಧನ ಸಾಮರ್ಥ್ಯವನ್ನು ಸೇರ್ಪಡೆಗೊಳಿಸುವ ಗುರಿ ಹೊಂದಿದ್ದು, ಬರುವ 5 ವರ್ಷಗಳಲ್ಲಿ ಸುಮಾರು 30 ಗೀಗಾವ್ಯಾಟ್ ಸಾಮರ್ಥ್ಯ ಸೇರ್ಪಡೆಗೊಳಿಸುವ ಮಹತ್ವಾಕಾಂಕ್ಷೆಯ ಮಾರ್ಗಸೂಚಿಯನ್ನು ರೂಪಿಸಲಾಗಿದೆ. 2024–25ನೇ ಸಾಲಿನಲ್ಲಿ 1,331 ಮೆಗಾವ್ಯಾಟ್ ಪವನ ವಿದ್ಯುತ್ ಸಾಮರ್ಥ್ಯ ಸೇರ್ಪಡೆಗೊಳಿಸಿ ಕರ್ನಾಟಕವು ದೇಶದಲ್ಲೇ ಮೊದಲ ಸ್ಥಾನಕ್ಕೇರಿದೆ. 2035ರ ವೇಳೆಗೆ ನಮ್ಮ ಗುರಿ ಕೇವಲ ಇಂಧನ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸುವುದಷ್ಟೇ ಅಲ್ಲ. ಬದಲಾಗಿ, ವಿಶ್ವಾಸಾರ್ಹ ನವೀಕರಿಸಬಹುದಾದ ಇಂಧನ ವ್ಯವಸ್ಥೆಯನ್ನು ನಿರ್ಮಿಸುವುದಾಗಿದೆ. ರಾಜ್ಯದ ಸಂಪನ್ಮೂಲ ಸಮರ್ಪಕತೆ ಯೋಜನೆಯಡಿ 2034–35ರ ವೇಳೆಗೆ 41.5 ಗೀಗಾವ್ಯಾಟ್ ಹೊಸ ಪವನ ಮತ್ತು ಸೌರ ವಿದ್ಯುತ್ ಸಾಮರ್ಥ್ಯ ಹಾಗೂ ಸುಮಾರು 11,000 ಮೆಗಾವ್ಯಾಟ್ ಗಂಟೆಗಳ ಬ್ಯಾಟರಿ ಇಂಧನ ಸಂಗ್ರಹ ಸಾಮರ್ಥ್ಯವನ್ನು ಸೇರ್ಪಡೆಗೊಳಿಸುವ ಗುರಿ ಹೊಂದಲಾಗಿದೆ ಎಂದು ಎಂದು ಗೌರವ್ ಗುಪ್ತ ಹೇಳಿದರು.

ಕರ್ನಾಟಕದ ಒಟ್ಟು ವಿದ್ಯುತ್ ಸಾಮರ್ಥ್ಯದಲ್ಲಿ ನವೀಕರಿಸಬಹುದಾದ ಇಂಧನದ ಪಾಲು ಶೇ.67: ದಿವ್ಯಾ ಪ್ರಭು

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕಿ ದಿವ್ಯಾ ಪ್ರಭು ಜಿ.ಆರ್.ಜೆ. ಮಾತನಾಡಿ, ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಹೂಡಿಕೆಗೆ ಪ್ರಮುಖ ತಾಣವಾಗಿ ರಾಜ್ಯದ ಸ್ಥಾನವನ್ನು ಮತ್ತಷ್ಟು ಬಲಪಡಿಸುವ ಗುರಿ ನಮ್ಮದು. ಸುಮಾರು 27 ಗೀಗಾವ್ಯಾಟ್ ಸ್ಥಾಪಿತ ನವೀಕರಿಸಬಹುದಾದ ಇಂಧನ ಸಾಮರ್ಥ್ಯ ಹೊಂದಿರುವ ಕರ್ನಾಟಕವು, ರಾಜ್ಯದ ಒಟ್ಟು ಸ್ಥಾಪಿತ ವಿದ್ಯುತ್ ಸಾಮರ್ಥ್ಯದ ಶೇ.67ರಷ್ಟು ಪಾಲನ್ನು ಹೊಂದಿದೆ. ನೈಸರ್ಗಿಕ ಸಂಪನ್ಮೂಲ, ಪ್ರಗತಿಪರ ನೀತಿಗಳು, ಉತ್ತಮ ಮೂಲಸೌಕರ್ಯ ಹಾಗೂ ಹೂಡಿಕೆಗೆ ಪೂರಕವಾದ ವ್ಯವಸ್ಥೆ ಇರುವುದರಿಂದ ಹೂಡಿಕೆದಾರರ ನೆಚ್ಚಿನ ರಾಜ್ಯ ಎನಿಸಿಕೊಂಡಿದೆ ಎಂದು ಹೇಳಿದರು.



ಭಾರತ್ ನವೀಕರಿಸಬಹುದಾದ ಇಂಧನ ಶೃಂಗಸಭೆ– 2026ರಲ್ಲಿ ಕರ್ನಾಟಕವು ಪಾಲುದಾರ ರಾಜ್ಯವಾಗಿ ಭಾಗವಹಿಸಿದ್ದು ಸಂತಸದ ವಿಚಾರ. ಇಂಧನ ಕ್ಷೇತ್ರದಲ್ಲಿ ನಮ್ಮ ರಾಜ್ಯದ ಅಗ್ರ ಸ್ಥಾನ, ನವೀಕರಿಸಬಹುದಾದ ಇಂಧನದ ವಲಯದ ಅಗಾಧ ಸಾಮರ್ಥ್ಯ ಹಾಗೂ ಪ್ರಗತಿಪರ ನೀತಿಗಳನ್ನು ಹೂಡಿಕೆದಾರರ ಮುಂದಿಡಲು ಇದು ಅತ್ಯುತ್ತಮ ವೇದಿಕೆಯಾಗಿತ್ತು. ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಹೂಡಿಕೆಗೆ ಇರುವ ಅಪಾರ ಅವಕಾಶಗಳನ್ನು ಅನ್ವೇಷಿಸಲು ಹೂಡಿಕೆದಾರರು, ಉದ್ಯಮದ ನಾಯಕರು ಹಾಗೂ ಜಾಗತಿಕ ಪಾಲುದಾರರನ್ನು ಕರನಾಟಕಕ್ಕೆ ಸ್ವಾಗತಿಸುತ್ತೇವೆ.

ಕೆ.ಜೆ. ಜಾರ್ಜ್, ಇಂಧನ ಮತ್ತು ಪ್ರವಾಸೋದ್ಯಮ ಸಚಿವ

ನ.30ರವರೆಗೆ ಕೃಷ್ಣಾ ಅಚ್ಚುಕಟ್ಟು ಪ್ರದೇಶದ ಕಾಲುವೆಗಳಿಗೆ ನೀರು ಹರಿಸಿ

ಜಲಾಶಯಗಳಲ್ಲಿ ಕುಡಿಯುವ ನೀರಿನ ಅಗತ್ಯ ಕಾಯ್ದಿರಿಸಿ, ಬೆಳೆಗಳ ರಕ್ಷಣೆಗೆ ಕ್ರಮ ಕೈಗೊಳ್ಳುವಂತೆ ಸಿಎಂಗೆ ಸಚಿವ ಡಾ.ಅಜಯ್‌ಸಿಂಗ್ ಮನವಿ

ಬೆಂಗಳೂರು, ನ.5: ಕೃಷ್ಣಾ ಅಚ್ಚುಕಟ್ಟು ಪ್ರದೇಶದಲ್ಲಿ ತೀವ್ರ ಬರ ಪರಿಸ್ಥಿತಿಯಿಂದ ರೈತರು ಸಂಕಷ್ಟಕ್ಕೆ ಸಿಲುಕಿರುವ ಹಿನ್ನೆಲೆಯಲ್ಲಿ, ಜಲಾಶಯಗಳಲ್ಲಿ ಲಭ್ಯವಿರುವ ನೀರಿನಲ್ಲಿ ಕುಡಿಯುವ ನೀರಿನ ಅಗತ್ಯವನ್ನು ಕಾಯ್ದಿರಿಸಿ, ಉಳಿದ ನೀರನ್ನು ನವೆಂಬರ್ 30ರವರೆಗೆ ಕಾಲುವೆಗಳಿಗೆ ಹರಿಸಿ ಬೆಳೆಗಳನ್ನು ರಕ್ಷಿಸಲು ಕ್ರಮ ಕೈಗೊಳ್ಳುವಂತೆ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಅಜಯ್ ಧರ್ಮಸಿಂಗ್ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಮಾಡಿದ್ದಾರೆ.

ಆಲಮಟ್ಟಿ ಮತ್ತು ನಾರಾಯಣಪುರ ಜಲಾಶಯಗಳಲ್ಲಿ ಪ್ರಸ್ತುತ ಒಟ್ಟಾರೆ 53 ಟಿಎಂಸಿ ನೀರು ಲಭ್ಯವಿದ್ದು, ಅಕ್ಟೋಬರ್ 15ರಂದು ನಡೆದ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ನವೆಂಬರ್ 12ರವರೆಗೆ ವಾರಾಬಂದಿ ಪದ್ಧತಿಯಲ್ಲಿ ಕಾಲುವೆಗಳಿಗೆ ನೀರು ಹರಿಸಲು ತೀರ್ಮಾನಿಸಲಾಗಿತ್ತು. ಆದರೆ ಕೃಷ್ಣಾ ಅಚ್ಚುಕಟ್ಟು ಪ್ರದೇಶದಲ್ಲಿ ಬೆಳೆದಿರುವ ಹತ್ತಿ, ತೊಗರಿ ಮತ್ತು ಮೆಣಸಿನಕಾಯಿ ಬೆಳೆಗಳು ನಿರ್ಣಾಯಕ ಹಂತದಲ್ಲಿದ್ದು, ನೀರಿನ ಕೊರತೆಯಿಂದ ರೈತರು ಬೆಳೆ ಕಳೆದುಕೊಳ್ಳುವ ಆತಂಕ ಎದುರಿಸುತ್ತಿದ್ದಾರೆ. ಕೈಗೆ ಬಂದ ಬೆಳೆ ಹಾಳಾದರೆ ರೈತರು ಮತ್ತಷ್ಟು ಸಾಲದ ಸಂಕಷ್ಟಕ್ಕೆ ಸಿಲುಕುತ್ತಾರೆ.



ಈಗಿನ ಪರಿಸ್ಥಿತಿಯಲ್ಲಿ ಲಭ್ಯವಿರುವ ನೀರನ್ನು ಅತ್ಯಂತ ವೈಜ್ಞಾನಿಕವಾಗಿ ಮತ್ತು ಸಮರ್ಪಕವಾಗಿ ನಿರ್ವಹಿಸಿ, ಕುಡಿಯುವ ನೀರಿನ ಅಗತ್ಯವನ್ನು ಸುರಕ್ಷಿತವಾಗಿರಿಸಿಕೊಂಡು ಬೆಳೆ ರಕ್ಷಣೆಗೆ ಸಾಧ್ಯವಾದಷ್ಟು ನೀರು ಒದಗಿಸಬೇಕು. ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ಕೋರಿದ್ದಾರೆ.

ರಾಯಚೂರು ಸೇರಿದಂತೆ ಕೃಷ್ಣಾ ಅಚ್ಚುಕಟ್ಟು ಪ್ರದೇಶದ ರೈತರ ಬೆಳೆಗಳನ್ನು ರಕ್ಷಿಸಲು ತುರ್ತು ಕ್ರಮ ಅಗತ್ಯವಿದ್ದು, ನೀರಿನ ಲಭ್ಯತೆ ಮತ್ತು ಮುಂದಿನ ಬೇಸಿಗೆಯ ಕುಡಿಯುವ ನೀರಿನ ಅಗತ್ಯವನ್ನು ಸಮತೋಲನಗೊಳಿಸಿ ನಿರ್ಧಾರ ಕೈಗೊಳ್ಳುವಂತೆ ಡಾ. ಅಜಯ್ ಧರ್ಮಸಿಂಗ್ ಮನವಿ ಮಾಡಿದ್ದಾರೆ. ಈ ಸಂದರ್ಭದಲ್ಲಿ ಶಹಾಪುರ ಶಾಸಕ ಶರಣಬಸಪ್ಪ ದರ್ಶನಾಪುರ ಹಾಗು ಸುರಪುರ ಶಾಸಕ ವೇಣುಗೋಪಾಲ್ ನಾಯಕ್ ಹಾಜರಿದ್ದರು.

ಹಸಿರು ಇಂಧನ: 400 ಶತಕೋಟಿ ಡಾಲರ್ ಹೂಡಿಕೆ ಹರಿವಿನ ನಿರೀಕ್ಷೆ

ನವದೆಹಲಿ,ನ.5: ನವೀಕರಿಸಬಹುದಾದ ಇಂಧನ ವಲಯದಲ್ಲಿ ಭಾರತ ವಿಶ್ವದ ಪ್ರಮುಖ ಶಕ್ತಿಯಾಗಿ ಹೊರ ಹೊಮ್ಮಿದ್ದು, ಹಸಿರು ಇಂಧನ ವಲಯಕ್ಕೆ 400 ಶತಕೋಟಿ ಡಾಲರ್ ಹೂಡಿಕೆಯ ಹರಿವು ನಿರೀಕ್ಷಿಸಲಾಗಿದೆ ಎಂದು ಕೇಂದ್ರ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ ತಿಳಿಸಿದರು.

ದೆಹಲಿಯಲ್ಲಿ ಗುರುವಾರ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಸಚಿವರು, ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ವಿಶ್ವದ 135ಕ್ಕೂ ಹೆಚ್ಚು ರಾಷ್ಟ್ರಗಳು ಭಾರತವನ್ನು ಮಾದರಿಯಾಗಿ ಅನುಸರಿಸುತ್ತಿವೆ ಎಂದು ಹೇಳಿದರು. ಪ್ರಧಾನಿ ನರೇಂದ್ರ ಮೋದಿ ಅವರ ಆಶಯದಂತೆ ಸೌರಶಕ್ತಿ ಭಾರತದಲ್ಲಿ ಒಂದು ಬೃಹತ್ ಜನಾಂದೋಲನವಾಗಿ ರೂಪುಗೊಂಡಿದೆ. ಇದು ಜಾಗತಿಕ ಮಟ್ಟದಲ್ಲಿ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ಹೇಳಿದರು.

ದೇಶದಲ್ಲಿ ಪ್ರಸ್ತುತ 65 ಲಕ್ಷ ಮನೆಗಳ ಮೇಲೆ ಸೌರ ಮೇಲ್ಚಾವಣಿ ಅಳವಡಿಸಿದ್ದು, ಈಗಾಗಲೇ 21 ಲಕ್ಷ ಕುಟುಂಬಗಳು ಶೂನ್ಯ ವಿದ್ಯುತ್ ಬಿಲ್ ಪಡೆಯುತ್ತಿವೆ. ಹೆಚ್ಚುವರಿ ವಿದ್ಯುತ್ ಅನ್ನು ಗ್ರಿಡ್ ಗೆ ಮಾರಾಟ



ಮಾಡುವುದರಿಂದ ಒಟ್ಟಾರೆ 700 ಕೋಟಿ ಆದಾಯವನ್ನೂ ಪಡೆದಿದ್ದಾರೆ ಸೌರಶಕ್ತಿ ಫಾನುಭವಿಗಳು ಎಂದು ಸಚಿವರು ಅಂಕಿ ಅಂಶ ಸಹಿತ ವಿವರಿಸಿದರು.

800 GW ಶುದ್ಧ ಇಂಧನ ಉತ್ಪಾದನೆ ಗುರಿ: 2030-35ರ ವೇಳೆಗೆ ಭಾರತ ಮಹತ್ವಾಕಾಂಕ್ಷೆಯ 800 ಉಫ ಶುದ್ಧ ಇಂಧನ ಉತ್ಪಾದನೆ ಗುರಿ ಹೊಂದಿದೆ. ಈ ಹಿಂದಿನ 500 Gw ಗುರಿಯನ್ನು ನಿಗದಿತ ಅವಧಿಗೂ ಮುನ್ನವೇ ಸಾಧಿಸುವ ವಿಶ್ವಾಸ ವ್ಯಕ್ತಪಡಿಸಿದರು.

ಭಾರತ 100 GW ನವೀಕರಿಸಬಹುದಾದ ಇಂಧನ ಸಾಮರ್ಥ್ಯ ಸಾಧಿಸಲು ಈ ಹಿಂದೆ ದಶಕಗಳನ್ನೇ ತೆಗೆದುಕೊಂಡಿತ್ತು. ಆದರೆ ಈಗ 2024 ರಿಂದ 2026ರವರೆಗೆ ಕೇವಲ ಎರಡೇ ವರ್ಷದಲ್ಲಿ 3ನೇ 100 gw ಸಾಮರ್ಥ್ಯವನ್ನು ಸಾಧಿಸಿದೆ. ಅಗಾಧ ವಿಸ್ತರಣೆ ವೇಗವನ್ನು ಹೆಚ್ಚಿಸಿಕೊಂಡಿದೆ ಎಂದು ಹೇಳಿದರು.

ಜಾಗತಿಕ ಶೃಂಗಸಭೆ ಅಭೂತಪೂರ್ವ ಯಶಸ್ಸು: ದೆಹಲಿಯ ಭಾರತ್ ಮಂಟಪದಲ್ಲಿ ನಾಲ್ಕು ದಿನಗಳ ಕಾಲ ನಡೆದ BRES ಸಮ್ಮೇಳನ ಅಭೂತಪೂರ್ವ ಯಶಸ್ಸು ಕಂಡಿದೆ. ವಿಶ್ವದಾದ್ಯಂತದ ಹೂಡಿಕೆದಾರರು, 135 ರಾಷ್ಟ್ರಗಳ ಪ್ರತಿನಿಧಿಗಳು ಮತ್ತು ಉದ್ಯಮ ದಿಗ್ಗಜರು ಭಾಗವಹಿಸಿದ್ದರು. 75,000ಕ್ಕೂ ಹೆಚ್ಚು ಸಂದರ್ಶಕರು, 8 ಪಾಲುದಾರ ದೇಶಗಳು ಮತ್ತು 32 ಅಂತಾರಾಷ್ಟ್ರೀಯ ಸಚಿವರು ಈ ಸಮಾವೇಶದಲ್ಲಿ ಭಾಗಿಯಾಗಿದ್ದು ಹಸಿರು ಇಂಧನ ಬದ್ಧತೆಯಲ್ಲಿ ಭಾರತ ಜಾಗತಿಕ ಮನ್ನಣೆ ಗಳಿಸಿರುವುದಕ್ಕೆ ಸಾಕ್ಷಿಯಾಗಿತ್ತು ಎಂದು ಸಂತಸ ಹಂಚಿಕೊಂಡರು.

ಅತಿದೊಡ್ಡ ಸಮಾವೇಶ: BRES 2026 ಭಾರತದಲ್ಲಿ ಈವರೆಗೆ ನಡೆದ ನವೀಕರಿಸಬಹುದಾದ ಇಂಧನ ವಲಯದ ಅತಿದೊಡ್ಡ ಕಾರ್ಯಕ್ರಮವಾಗಿದೆ ಎಂದ ಸಚಿವರು ಪರ್ಯಾಯ ಇಂಧನ ವಲಯದಲ್ಲಿ ಭಾರತದ ಮಹತ್ಸಾಧನೆಗೆ ಬೆರಗಾಗಿ 400

- 220 ಬಿಲಿಯನ್ ಡಾಲರ್ ಹೂಡಿಕೆ ಒಪ್ಪಂದ; ನವೀಕರಿಸಬಹುದಾದ ಇಂಧನದಲ್ಲಿ ಜಾಗತಿಕ ಶಕ್ತಿಯಾದ ಭಾರತ
- ಸುದ್ದಿಗೋಷ್ಠಿಯಲ್ಲಿ ಮಾಹಿತಿ ಹಂಚಿಕೊಂಡ ಕೇಂದ್ರ ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ

ಶತಕೋಟಿ ಡಾಲರ್ ಅಷ್ಟು ಹೂಡಿಕೆ ಹರಿವು ಬರುವ ನಿರೀಕ್ಷೆಯಿದೆ. ಈಗಾಗಲೇ 220 ಶತಕೋಟಿ ಡಾಲರ್ ಅಷ್ಟು ಒಪ್ಪಂದಗಳು ಆಗಿವೆ ಎಂದು ಹೇಳಿದರು.

ಭಾರತದ ಸೌರಶಕ್ತಿ ಸಾಮರ್ಥ್ಯಕ್ಕೆ ನಿಬ್ಬೆರಗಾದ ವಿದೇಶಗಳು ಪಾಲುದಾರಿಕೆ ಹೆಚ್ಚಿಸಿಕೊಳ್ಳುತ್ತಿವೆ. ಈಗಾಗಲೇ 8 ಲಕ್ಷ ಟನ್ ಹೈಡ್ರೋಜನ್‌ಗೆ ಬೇಡಿಕೆಯಿಟ್ಟಿವೆ. ಯುರೋಪಿಯನ್ ರಾಷ್ಟ್ರಗಳ ಜತೆ ಇತರ ದೇಶಗಳೂ ಹಸಿರು ಇಂಧನದ ಭಾರತದ ಬದ್ಧತೆಗೆ ಪೂರಕವಾಗಿ ಕೈಜೋಡಿಸುತ್ತಿವೆ ಎಂದು ತಿಳಿಸಿದರು.

ಕಸ್ಟಡಿ ಹೆಸರಿನಲ್ಲಿ ಕಾಲಹರಣ ಬೇಡ: ಸುಪ್ರೀಂ ಕೋರ್ಟ್ ತಾಕೀತು

ನವದೆಹಲಿ, ನ. 5: ಪೊಲೀಸ್ ಅಥವಾ ತನಿಖಾ ಸಂಸ್ಥೆಗಳು ಒಬ್ಬ ವ್ಯಕ್ತಿಯನ್ನು ವಶಕ್ಕೆ ಪಡೆದ ಕ್ಷಣದಿಂದಲೇ 24 ಗಂಟೆಗಳ ಕಾಲಮಿತಿ ಪ್ರಾರಂಭವಾಗುತ್ತದೆಯೇ ವಿನಃ, ಅಧಿಕೃತವಾಗಿ ಬಂಧನ ದಾಖಲಿಸಿದ ಸಮಯದಿಂದ ಅಲ್ಲ ಎಂದು ಸುಪ್ರೀಂ ಕೋರ್ಟ್ ಗುರುವಾರ ಮಹತ್ವದ ತೀರ್ಪು ನೀಡಿದೆ.

ನ್ಯಾಯಮೂರ್ತಿ ಉಜ್ಜಲ್ ಭೂಯಾನ್ ಮತ್ತು ನ್ಯಾಯಮೂರ್ತಿ ಅತುಲ್ ಎಸ್. ಚಂದೂರ್ಕರ್ ಅವರಿದ್ದ ಪೀಠವು, ಸುಜಿತ್ ದಾಸ್ ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದ ಮೇಲ್ಮನವಿ ವಿಚಾರಣೆ ನಡೆಸಿ ಈ ತೀರ್ಪು ಪ್ರಕಟಿಸಿದೆ.

ಸಂವಿಧಾನದ ವಿಧಿ 22(2) ರಲ್ಲಿ ಬಳಸಿರುವ ಬಂಧನ ಮತ್ತು ವಶ ಎಂಬ ಪದಗಳು ಒಂದಕ್ಕೊಂದು ಪೂರಕವಾಗಿವೆ. ವ್ಯಕ್ತಿಯೊಬ್ಬನ ಸ್ವತಂತ್ರ ಹಕ್ಕನ್ನು ಮೊಟಕುಗೊಳಿಸಿದ ಕ್ಷಣದಿಂದಲೇ ಬಂಧನದ ಅವಧಿ ಲೆಕ್ಕಕ್ಕೆ ಬರುತ್ತದೆ. ವ್ಯಕ್ತಿಯನ್ನು ವಶಕ್ಕೆ ಪಡೆದ 24 ಗಂಟೆಗಳ ಒಳಗೆ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸದಿದ್ದರೆ, ಅವರನ್ನು ತಕ್ಷಣವೇ ಬಂಧನದಿಂದ ಮುಕ್ತಗೊಳಿಸಬೇಕು. ವಶಕ್ಕೆ ಪಡೆದ ಸ್ಥಳದಿಂದ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ಕರೆದೊಯ್ಯಲು ತಗಲುವ ಅಗತ್ಯ ಪ್ರಯಾಣದ ಸಮಯವನ್ನು ಹೊರತುಪಡಿಸಿ, ತನಿಖೆ ಅಥವಾ ವಿಚಾರಣೆಯ ನೆಪದಲ್ಲಿ ಹೆಚ್ಚುವರಿ ಸಮಯವನ್ನು 24 ಗಂಟೆಗಳ ಮಿತಿಯಿಂದ ಹೊರಗಿಡಲು ಸಂವಿಧಾನ ಅವಕಾಶ ನೀಡುವುದಿಲ್ಲ.



ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದಾಗ, ಮ್ಯಾಜಿಸ್ಟ್ರೇಟ್ಗಳು ವ್ಯಕ್ತಿಯನ್ನು ವಶಕ್ಕೆ ಪಡೆದ ನಿಜವಾದ ದಿನಾಂಕ ಮತ್ತು ಸಮಯವನ್ನು ದಾಖಲಿಸಿಕೊಳ್ಳಬೇಕು. 24 ಗಂಟೆಗಳ ನಿಯಮ ಪಾಲನೆಯಾಗಿದೆಯೇ ಎಂದು ಪರಿಶೀಲಿಸುವುದು ಅವರ ಕರ್ತವ್ಯವಾಗಿದೆ. ಯುಎಪಿಎ, ಪಿಎಂಎಲ್ಎ ಅಥವಾ ಎನ್‌ಡಿಪಿಎಸ್ ನಂತಹ ಕಠಿಣ ಕಾಯ್ದೆಗಳ ಜಾಮೀನು ನಿಯಮಗಳಿಗಿಂತ ಸಂವಿಧಾನದ ವಿಧಿ 21 ರ ಅಡಿಯಲ್ಲಿ ಸಿಗುವ ವ್ಯಕ್ತಿ ಸ್ವಾತಂತ್ರ್ಯ ಮತ್ತು ಜೀವಿಸುವ ಮೂಲಭೂತ ಹಕ್ಕುಗಳು ಮೇಲ್ಮಟ್ಟದಲ್ಲಿರುತ್ತವೆ ಎಂದು ತೀರ್ಪು ನೀಡಿಯೇ. ತ್ರಿಪುರಾದಲ್ಲಿ 11.03 ಕೆಜಿ ಮಾದಕ ದ್ರವ್ಯ ಕಳ್ಳಸಾಗಣೆ ಪ್ರಕರಣದಲ್ಲಿ ನಾಲ್ವರು ಆರೋಪಿಗಳನ್ನು 2025 ರ ಸ.29ರಂದು ಮಧ್ಯಾಹ್ನ 2 ಗಂಟೆಗೆ ಶೋಧ ಮತ್ತು ಜಪ್ತಿ ಪ್ರಕ್ರಿಯೆಯ ಭಾಗವಾಗಿ ವಶಕ್ಕೆ ಪಡೆಯಲಾಗಿತ್ತು. ಆದರೆ, ತನಿಖಾ ಸಂಸ್ಥೆಯು ಅವರನ್ನು ಸೆಪ್ಟೆಂಬರ್ 30ರ ಬೆಳಿಗ್ಗೆ 11 ಗಂಟೆಗೆ ಅಧಿಕೃತವಾಗಿ ಬಂಧಿಸಲಾಗಿದೆ ಎಂದು ತೋರಿಸಿತ್ತು. ಆ ಮೂಲಕ 18 ಗಂಟೆಗಳ ಕಾಲ ಯಾವುದೇ ನ್ಯಾಯಾಂಗ ಮೇಲ್ವಿಚಾರಣೆಯಿಲ್ಲದೆ ಅವರನ್ನು ವಶದಲ್ಲಿಡಲಾಗಿತ್ತು.

ತ್ರಿಪುರಾ ಹೈಕೋರ್ಟ್ ಇವರಿಗೆ ಜಾಮೀನು ನಿರಾಕರಿಸಿತ್ತು. ಇದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಲಾದ ಮೇಲ್ಮನವಿಯನ್ನು ಪುರಸ್ಕರಿಸಿದ ಪೀಠವು, ಆರೋಪಿಗಳ ಹಕ್ಕಿನ ಉಲ್ಲಂಘನೆಯಾಗಿದೆ ಎಂದು ಸ್ಪಷ್ಟಪಡಿಸಿ ಅವರನ್ನು ತಕ್ಷಣವೇ ಬಿಡುಗಡೆ ಮಾಡಲು ಆದೇಶಿಸಿದೆ.

ನಮ್ಮ ದೇಶದಲ್ಲಿ ವಶದಲ್ಲಿದ್ದಾಗ ನಡೆಯುವ ದೌರ್ಜನ್ಯಗಳು ಹಾಗೂ ಕಸ್ಟಡಿ ಹಿಂಸಾಚಾರಗಳು ದುರದೃಷ್ಟಕರ ವಾಸ್ತವ. ತನಿಖೆಯ ನೆಪದಲ್ಲಿ ಪೊಲೀಸ್ ಅಥವಾ ತನಿಖಾ ಸಂಸ್ಥೆಗಳು ಅಧಿಕೃತ ಬಂಧನವನ್ನು ದಾಖಲಿಸದೆ ಸುದೀರ್ಘ ವಿಚಾರಣೆ ನಡೆಸುವುದು ಮೂಲಭೂತ ಹಕ್ಕುಗಳ ತೀವ್ರ ಉಲ್ಲಂಘನೆಯಾಗಿದೆ, ಎಂದು ನ್ಯಾಯಮೂರ್ತಿ ಉಜ್ಜಲ್ ಭೂಯಾನ್ ಆತಂಕ ವ್ಯಕ್ತಪಡಿಸಿದ್ದಾರೆ.

ಈ ತೀರ್ಪಿನ ಮೂಲಕ ಒಡಿಶಾ, ಮದ್ರಾಸ್ ಮತ್ತು ಕೇರಳ ಹೈಕೋರ್ಟ್‌ಗಳ ಹಳೆಯ ಕೆಲವು ತೀರ್ಪುಗಳನ್ನು ಸುಪ್ರೀಂ ಕೋರ್ಟ್ ತಳ್ಳಿಹಾಕಿದ್ದು, ಪೊಲೀಸ್ ಅಕ್ರಮ ಬಂಧನಕ್ಕೆ ಸಂಪೂರ್ಣ ತಡೆ ನೀಡಿದೆ.

ಮಹಾರಾಷ್ಟ್ರ ಸರ್ಕಾರದ ಆದ್ಯತೆಗೆ ತೀವ್ರ ಆಕ್ರೋಶ

ಮುಂಬೈ, ನ. 5: ಮಹಾರಾಷ್ಟ್ರದಾದ್ಯಂತ ಭೀಕರ ಬರಗಾಲದ ಕರಿನೆರಳು ಆವರಿಸಿದೆ. ಕಳೆದ ಐದು ದಶಕಗಳಲ್ಲೇ ಕಾಣದಂತಹ ಘನಘೋರ ಪರಿಸ್ಥಿತಿಯನ್ನು ರಾಜ್ಯ ಇಂದು ಎದುರಿಸುತ್ತಿದ್ದು, ಲಕ್ಷಾಂತರ ರೈತ ಕುಟುಂಬಗಳು ಬೆಳೆ ನಷ್ಟ ಮತ್ತು ಸಾಲದ ಹೊರೆಯಿಂದ ಕಂಗೆಟ್ಟು ಹೋಗಿವೆ. ಒಂದೆಡೆ ಬೆಳೆಗಳು, ಇನ್ನೊಂದೆಡೆ ಸತತ ಆತ್ಮಹತ್ಯೆಗಳಿಂದ ಗದ್ದೆಗಳು ಮಸಣವಾಗುತ್ತಿದ್ದರೆ, ಮತ್ತೊಂದೆಡೆ ಸರ್ಕಾರದ ಅದ್ದೂರಿ ಉದ್ಘಾಟನೆಗಳು ಮತ್ತು ಸಡಗರದ ವೆಚ್ಚಗಳು ಆಡಳಿತಾರೂಢರ ಆದ್ಯತೆಯನ್ನೇ ಬತ್ತಿಸಿವೆ.

ಅಕ್ಟೋಬರ್ 31ರಂದು ನಾಸಿಕ್‌ನಲ್ಲಿ ಸಿಂಹಸ್ಥ ಕುಂಭಮೇಳದ ಧ್ವಜಾರೋಹಣ ಮತ್ತು ಉದ್ಘಾಟನಾ ಸಮಾರಂಭವು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು. ಮಹಾರಾಷ್ಟ್ರ ಸರ್ಕಾರದ ಇಡೀ ಆಡಳಿತ ಯಂತ್ರವೇ ಈ ಸಮಾರಂಭದಲ್ಲಿ ಹಾಜರಿತ್ತು. ಈ ಏಕೈಕ ಕಾರ್ಯಕ್ರಮಕ್ಕಾಗಿ ಸರ್ಕಾರ ಬೊಕ್ಕಸದಿಂದ ಖರ್ಚು ಮಾಡಿದ ಮೊತ್ತ ಬರೋಬ್ಬರಿ 20 ಕೋಟಿ ರೂಪಾಯಿ. ಅಂದು ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಅವರು ಮಾಡಿದ 23 ಟ್ವೀಟ್‌ಗಳ ಪೈಕಿ 19 ಈ ಸಮಾರಂಭದ ವೈಭವ ಹಾಗೂ ಸಂಭ್ರಮವನ್ನೇ ಹೊಗಳುತ್ತಿದ್ದವು. ಆದರೆ, ಇಡೀ ರಾಜ್ಯವನ್ನು ದಹಿಸುತ್ತಿರುವ ಭೀಕರ ಬರದ ಬಗ್ಗೆ ಅವರ ಖಾತೆಯಲ್ಲಿ ಒಂದೇ ಒಂದು ಸಾಲೂ ಇರಲಿಲ್ಲ.

ರಾತ್ರಿ 11:08ಕ್ಕೆ ಪೋಸ್ಟ್ ಮಾಡಿದ ಕೊನೆಯ ಟ್ವೀಟ್‌ನಲ್ಲಿ, ಗೋದಾ ಆರತಿ ಬೆಳಗಿ ಗಿನ್ನಿಸ್ ದಾಖಲೆ ಬರೆದ 6,233 ಬುಡಕಟ್ಟು ಜನರಿಗೆ ಶುಭಾಶಯ ಕೋರಿ ಹರ್ ಹರ್ ಮಹಾದೇವ್ ಎಂದಿದ್ದರು.

ಸರ್ಕಾರ ಗಿನ್ನಿಸ್ ದಾಖಲೆಯ ಸಂಭ್ರಮದಲ್ಲಿ ತೇಲುತ್ತಿದ್ದ ಅದೇ ರಾತ್ರಿ, ಯವತಮಾಳ್ ಜಿಲ್ಲೆಯ ಕೃಷಿಕ, 45 ವರ್ಷದ ಟೀಕಾರಾಮ್ ಚವಾಣ್ ತಮ್ಮ ಬದುಕಿಗೆ ತಾವೇ ಅಂತ್ಯ ಹಾಡಿಕೊಂಡರು. ತಮ್ಮ 8 ಎಕರೆ ಜಮೀನಿನಲ್ಲಿ ಈ ಬಾರಿ ಬೆಳೆ ತೆಗೆಯಲು ಅವರು ಬ್ಯಾಂಕ್‌ನಿಂದ 3 ಲಕ್ಷ ರೂಪಾಯಿ ಸಾಲ ಮಾಡಿದ್ದರು. ಆದರೆ, ಒಣಹವೆ ಹಾಗೂ ಮಳೆಯ ಅಭಾವ ಅವರ ನಿರೀಕ್ಷೆಗಳನ್ನೆಲ್ಲ ಸುಟ್ಟು ಬೂದಿ ಮಾಡಿತು. ಜಮೀನಿನಲ್ಲಿ ಬೆಳೆ ಒಣಗಿ ನಿಂತಾಗ, ಸಾಲ ತೀರಿಸಲು ದಾರಿಕಾಣದೆ ಚವಾಣ್ ಆತ್ಮಹತ್ಯೆಗೆ ಶರಣಾದರು. ರೈತ ಹೋರಾಟಗಾರ ಕಿಶೋರ್ ತಿವಾರಿ ಹೇಳುವಂತೆ, ವಿದರ್ಭ ವಿಭಾಗ ಒಂದರಲ್ಲೇ ಕೇವಲ 6 ದಿನಗಳಲ್ಲಿ 10 ರೈತರು ಜೀವ ಕಳೆದುಕೊಂಡಿದ್ದಾರೆ. ಅಮರಾವತಿ ವಿಭಾಗದಲ್ಲಿ ಈ ವರ್ಷದ ಜನವರಿಯಿಂದ ಜೂನ್ ಅವಧಿಯಲ್ಲೇ 815 ರೈತರ ಆತ್ಮಹತ್ಯೆ ದಾಖಲಾಗಿದೆ. ಇತ್ತ ಮರಾಠವಾಡದ ಕಥೆಯೂ ಬೇರೆಯಾಗಿಲ್ಲ. ಜನವರಿಯಿಂದ ಸೆಪ್ಟೆಂಬರ್ ನಡುವೆ 760 ಕೃಷಿಕರು ಪ್ರಾಣ ಕಳೆದುಕೊಂಡಿದ್ದು, ಸೆಪ್ಟೆಂಬರ್ ಒಂದೇ ತಿಂಗಳಿನಲ್ಲಿ 108 ಸಾವುಗಳು ಸಂಭವಿಸಿವೆ.

ಸರ್ಕಾರದ ಈ ನಡವಳಿಕೆಗೆ ಆಕ್ರೋಶ ವ್ಯಕ್ತಪಡಿಸಿರುವ ಕಾಂಗ್ರೆಸ್ ನಾಯಕ ವಿಜಯ್ ವಾಡೆಟ್ಟಿವಾರ್, ಕುಂಭಮೇಳದ ದೀಪಾಲಂಕಾರಕ್ಕೆ ಕೋಟಿ ಕೋಟಿ ಸುರಿಯುವ ಬದಲು, ಅನ್ನದಾತನ ಮನೆಯಲ್ಲಿ ದೀಪಾವಳಿ ಬೆಳಕಾಗುವಂತೆ ನೋಡಿ. ಪ್ರಾಣ ಬಿಡುತ್ತಿರುವ ಈ ರೈತರು ಹಿಂದೂಗಳಲ್ಲವೇ ಎಂದು ನೇರವಾಗಿ ಪ್ರಶ್ನಿಸಿದ್ದಾರೆ.


ರಾಜ್ಯದ ಜಲಾಶಯಗಳಲ್ಲಿ ಪ್ರಸ್ತುತ ಶೇಕಡಾ 67ರಷ್ಟು ಮಾತ್ರ ನೀರಿದ್ದು, ಅಮರಾವತಿ (55%) ಮತ್ತು ಮರಾಠವಾಡದಲ್ಲಿ (54%) ಪರಿಸ್ಥಿತಿ ತೀರಾ ಹದಗೆಟ್ಟಿದೆ. ಅಂತರ್ಜಲ ಸಮೀಕ್ಷೆ (ಉಖಆಂ) ವರದಿ ಪ್ರಕಾರ, ಮರಾಠವಾಡದ ಬಾವಿಗಳಲ್ಲಿ ಅಕ್ಟೋಬರ್ ಒಂದೇ ತಿಂಗಳಿನಲ್ಲಿ ಅಂತರ್ಜಲ ಮಟ್ಟ 4.39 ಮೀಟರ್‌ನಷ್ಟು ಕುಸಿದಿದೆ. ಧಾರಾಶಿವ್‌ನಲ್ಲಿ 8.86 ಮೀಟರ್‌ಗೆ ತಲುಪಿದೆ. ಹಬ್ಬದ ದಿನಗಳಲ್ಲಿ ಕೈಯಲ್ಲಿ ಹಣವಿಲ್ಲದೆ, ಹೊಟ್ಟೆಗೆ ಅನ್ನವಿಲ್ಲದೆ ಮಹಾರಾಷ್ಟ್ರದ ರೈತಾಪಿ ವರ್ಗ ಕತ್ತಲಲ್ಲಿ ತಳಮಳಿಸುತ್ತಿದೆ. ಆಡಳಿತ ಮಂಡಳಿಗೆ ಶೋಕದಲ್ಲಿರುವ ರೈತನ ಕಣ್ಣೀರಿಗಿಂತ ಉತ್ಸವಗಳೇ ಮುಖ್ಯವಾಯಿತೇ ಎನ್ನುವುದು ಇಡೀ ರಾಜ್ಯವನ್ನು ಕಾಡುತ್ತಿರುವ ಯಕ್ಷ ಪ್ರಶ್ನೆ.

ಹೆಸರಾಂತ ಸಾಹಿತಿ, ವಿಜ್ಞಾನಿ, ಪತ್ರಕರ್ತ ಡಾ.ವ್ಯಾಸರಾಯ ನಿಂಜೂರು ನಿಧನ

ಮುಂಬಯಿ, ನ.5: ಉಡುಪಿಯಲ್ಲಿ ಸಾಹಿತ್ಯಾಸಕ್ತರ ಹೃದಯಗೆದ್ದ ಮುಂಬಯಿ ಕನ್ನಡಿಗರ ಹೃದಯ ಸಾಮ್ರಾಟ ಪ್ರಸಿದ್ಧ ನಾಡಿನ ಶ್ರೇಷ್ಠ ವಿಜ್ಞಾನಿ, ಸಂಶೋಧಕ, ಪ್ರಸಿದ್ಧ ಸಾಹಿತಿ, ಕಾದಂಬರಿಕಾರ, ನಾಟಕಕಾರ, ಹಿರಿಯ ಪತ್ರಕರ್ತ, ಬಾಂಬೇ ಸೌತ್ ಕೆನರಾ ಬ್ರಾಹ್ಮಿಣ್ಸ್ ಅಸೋಸಿಯೇಶನ್ (ಬಿಎಸ್‌ಕೆಬಿಎ-ಗೋಕುಲ) ಇದರ ಗೋಕುಲವಾಣಿ ಮುಖವಾಣಿಯ (ವಿಶ್ರಾಂತ) ಗೌರವ ಸಂಪಾದಕ ಡಾ। ವ್ಯಾಸರಾವ್ ನಿಂಜೂರ್ (86.) ಮಂಗಳವಾರ ಮುಂಜಾನೆ ಬೃಹನ್ಮುಂಬಯಿ ಇಲ್ಲಿನ ಚೆಂಬೂರು ದೇವ್‌ನಾರ್‌ನಲ್ಲಿನ ಆಸ್ಪತ್ರೆಯಲ್ಲಿ ನಿಧನರಾದರು.

ಮೃದು ಮಧುರ ಮಾತು, ಮಂದಸ್ಮಿತ ಮುಖಭಾವ ಹಾಗೂ ಸರಳ ಸಜ್ಜನಿಕೆಗಳಿಂದ ಸರ್ವರಿಗೂ ಆಪ್ತರಾಗಿರುವ ತಾವು ಮುಂಬಯಿ ಕನ್ನಡಿಗರ ಆತ್ಮೀಯ ಬಂಧುವಾಗಿದ್ದ ಮೃತರು ಸುಪುತ್ರ, ಸುಪುತ್ರಿ ಸೇರಿದಂತೆ ಅಪಾರ ಬಂಧು-ಬಳಗ, ಸಾಹಿತ್ಯ ಲೋಕವನ್ನು ಆಗಲಿದ್ದಾರೆ.

ನಿಂಜೂರು ನಿಧನಕ್ಕೆ ಕಲ್ಲೂರ ಫೌಂಡೇಶನ್ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಮಾಜಿ ಅಧ್ಯಕ್ಷ ಪ್ರದೀಪ್‌ಕುಮಾರ್ ಕಲ್ಕೂರ, ಕನ್ನಡ ಸಾಹಿತ್ಯ ಪರಿಷತ್ತ್‌ನ ಮಾಜಿ ಅಧ್ಯಕ್ಷ ಡಾ। ಹರಿಕೃಷ್ಣ ಪುನರೂರು, ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಪ್ರೊ ಎಂ.ಪಿ.ಶ್ರೀನಾಥ್, ಹಿರಿಯ ಸಾಹಿತಿ ಡಾ। ಸುನೀತಾ ಎಂ.ಶೆಟ್ಟಿ, ಬಿಎಸ್‌ಕೆಬಿ ಅಸೋಸಿಯೇಶನ್‌ನ ನಿಕಟಪೂರ್ವ ಅಧ್ಯಕ್ಷ ಡಾ। ಸುರೇಶ್ ಎಸ್.ರಾವ್ ಕಟೀಲು, ಅಧ್ಯಕ್ಷೆ ಶೈಲಿನಿ ಎ.ರಾವ್, ಗೌರವ ಕಾರ್ಯದರ್ಶಿ ಎ.ಪಿ.ಕೆ ಪೋತಿ, ಗೋಪಾಲಕೃಷ್ಣ ಪಬ್ಲಿಕ್ ಟ್ರಸ್ಟ್‌ನ ಮಾಜಿ ಟ್ರಸ್ಟಿ ಬಡನಿಡಿಯೂರು ರಮಾನಂದ ರಾವ್, ಕನ್ನಡಿಗ ಪತ್ರಕರ್ತರ ಸಂಘ ಮಹಾರಾಷ್ಟ್ರ ಇದರ ನಿಕಟಪೂರ್ವ ಅಧ್ಯಕ್ಷ ರೋನ್ಸ್ ಬಂಟ್ವಾಳ್, ಗೌರವ ಸಂಪಾದಕ



ಶ್ರೀನಿವಾಸ ಜೋಕಟ್ಟೆ, ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥ ಡಾ। ಜಿ.ಎನ್ ಉಪಾಧ್ಯ, ವಾಮನ ಹೊಳ್ಳ, ಬಿ.ಆರ್ ಮಧುಸೂದನ್, ಮೋಹನ್ ಮಾರ್ನಾಡ್, ಡಾ। ಭರತ್‌ಕುಮಾರ್ ಪೊಲಿಪು ಸೇರಿದಂತೆ ರಾಷ್ಟ್ರದಾದ್ಯಂತದ ಹಲವಾರು ಸಂಘ ಸಂಸ್ಥೆಗಳ ಮುಖ್ಯಸ್ಥರು ಸಂತಾಪ ಸೂಚಿಸಿ ಶ್ರದ್ಧಾಂಜಲಿ ಅರ್ಪಿಸಿದ್ದಾರೆ.

ಡಾ। ವ್ಯಾಸರಾಯ ನಿಂಜೂರು:

ಉಡುಪಿ ತೆಂಕ ನಿಡಿಯೂರು ಅಲ್ಲಿನ ಪರಮ ಸಾತ್ವಿಕರಾದ ಸೀತಮ್ಮ ಮತ್ತು ಶ್ರೀನಿವಾಸ ರಾವ್ ನಿಂಜೂರು ದಂಪತಿ ಪುತ್ರನಾಗಿದ್ದು, ತೆಂಕನಿಡಿಯೂರಿನಲ್ಲಿ ಬಾಲ್ಯವನ್ನು ಕಳೆದು ಸ್ಥಾನೀಯ ಮುಟ್ಟದ ಕಾವು ಶಾಲೆಯಲ್ಲಿ ಪ್ರಾಥಮಿಕ, ಕಲ್ಯಾಣಪುರದ ಮಿಲಾಗ್ರಿಸ್ ಶಾಲೆಯಲ್ಲಿ ಪ್ರೌಢಶಾಲೆ, ಎಂಜಿಎಂ ಕಾಲೇಜ್ ಉಡುಪಿಯಲ್ಲಿ ವಿಜ್ಞಾನದಲ್ಲಿ ಪದವೀಧರರಾಗಿದ್ದರು.

ವಿದ್ಯಾರ್ಥಿ ದೆಸೆಯಲ್ಲೇ ಕಲೆ, ಸಾಹಿತ್ಯ, ಸಂಸ್ಕೃತಿಯ ಕುರಿತು ಆಸಕ್ತಿ, ಅಭಿರುಚಿಯನ್ನು ಬೆಳೆಸಿಕೊಂಡಿದ್ದು, ನಾಲ್ಕು ವರ್ಷ ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜ್‌ನಲ್ಲಿ ವೈದ್ಯಕೀಯ ವಿದ್ಯಾರ್ಥಿಗಳಿಗೆ ಟ್ಯೂಟರ್ ಆಗಿ ಸೇವೆ ಸಲ್ಲಿಸಿದ್ದರು. 1963ರಲ್ಲಿ ಮೊದಲ ಕಥಾ ಸಂಕಲನ "ಕುಂಕುಮ" ಪ್ರಕಟಿಸಿ ಅಧಿಕೃತವಾಗಿ ಸಾಹಿತ್ಯಲೋಕಕ್ಕೆ ಪಾದಾರ್ಪಣ ಮಾಡಿದ್ದರು.

ವಿಜ್ಞಾನದಲ್ಲಿ ಜೀವರಸಾಯನ ಮತ್ತು ಆಹಾರ ತಂತ್ರಜ್ಞಾನದಲ್ಲಿ ಸ್ನಾತಕೋತ್ತರ ಪದವಿಧರನಾಗಿದ್ದ ಇವರು ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಸಹಕಾರದೊಂದಿಗೆ ಮುಂಬಯಿ ವಿಶ್ವವಿದ್ಯಾಲಯದಲ್ಲಿ ಪಿ.ಹೆಚ್‌ಡಿ. (ಡಾಕ್ಟರೇಟ್) ಪದವಿಧಾರರಾಗಿದ್ದು, ವಿದೇಶಗಳ ವಿಶ್ವವಿದ್ಯಾಲಯಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿದ್ದು, ಇವರ ಮಾರ್ಗದರ್ಶನದಲ್ಲಿ ಏಳೆಂಟು ವಿದ್ಯಾರ್ಥಿಗಳು ಸಂಶೋಧನೆ ನಡೆಸಿ ಪಿ.ಎಚ್‌ಡಿ. ಪದವಿ ಗಳಿಸಿಸಿದ್ದರು. 1965ರಲ್ಲಿ ಮುಂಬಯಿ ಮಹಾನಗರಿ ಸೇರಿ ವಿಶ್ವ ವಿಖ್ಯಾತ ಬಾಬಾ ಅಣುಶಕ್ತಿ ಸಂಶೋಧನಾ ಕೇಂದ್ರ (ಬಿಎಆರ್‌ಸಿ) ವೈಜ್ಞಾನಿಕ ಅಧಿಕಾರಿ ಆಗಿದ್ದು ರಾಷ್ಟ್ರೀಯ, ಅಂತರಾಷ್ಟ್ರೀಯ ಮಟ್ಟದಲ್ಲಿ ಶ್ರಮಿಸಿದ್ದರು. ಬಿಎಆರ್‌ಸಿನಲ್ಲಿ ಜೀವರಸಾಯನ ಮತ್ತು ಆಹಾರ ತಂತ್ರಜ್ಞಾನ ವಿಭಾಗದಲ್ಲಿ ಸಂಶೋಧಕರಾಗಿ, ಸುದೀರ್ಘಕಾಲ ದುಡಿದು ನಿವೃತ್ತರಾಗಿದ್ದರು. ಕಥಾ ಲೇಖಕರಾಗಿ ಸಾಹಿತ್ಯ ಲೋಕದಲ್ಲಿ ಹೆಜ್ಜೆಯೂರಿ ಕಾದಂಬರಿಕಾರರಾಗಿ, ನಾಟಕಕಾರರಾಗಿ, ಸಮರ್ಥ ಸಂಪಾದಕರಾಗಿ ಪ್ರಸಿದ್ಧರಾಗಿದ್ದರು. ಕುಂಕುಮ ದಿಂದ ಆರಂಭವಾದ ಬರಹಗಳು ಕ್ರಮೇಣ ಮಂಚ ಕಥಾ ಸಂಕಲನದಲ್ಲಿ ಪರಿಪಕತೆಯ ಸೀಮೋಲ್ಲಂಘನೆ ಮಾಡಿತ್ತು.ದೂಜ ಮಾಸ್ತರರ ಮಗಳು ಬಸಿರಾದುದು ಇತ್ಯಾದಿ ಪ್ರಸಿದ್ಧ ಕಥಾ ಸಂಕಲನಗಳು. ಉಸಿರು ಕಾದಂಬರಿಯನ್ನು ಪ್ರಸಿದ್ಧ ಹಿಂದಿ ಲೇಖಕ ಕಮಲೇಶ್ವರ್ ಗೌರವಿಸಿದ್ದರು. ಉಸಿರು ಕಾದಂಬರಿ ಕನ್ನಡ ಸಾಹಿತ್ಯ ಪರಿಷತ್ತ್‌ನಿಂದ ಪುನಃರ್ ಮುದ್ರಣಗೊಂಡಿದ್ದು, ಮುಂಬಯಿ ಆಕಾಶವಾಣಿಗಾಗಿ ಬರೆದ ಸೌಖ್ಯವಿಲ್ಲ, ಆರಣ್ಯಕೊಬ್ಬ ಅರಸು, ಪ್ರೇಮಾಂತರಿಕ್ಷ ಮೊದಲಾದ ಕಿರುನಾಟಕಗಳು ಶೋತೃಗಳಿಂದ ಅಪಾರ ಮೆಚ್ಚುಗೆ ಗಳಿಸಿವೆ. ಕನ್ನಡ ರಂಗಭೂಮಿಯಲ್ಲಿ ಬಣ್ಣ ಹಚ್ಚಿ ರಂಗಮಂಟದಲ್ಲಿ ಮಿಂಚಿದ ಅವರು ಪ್ರಸಿದ್ಧ ನಾಟಕಗಳನ್ನೂ ಬರೆದಿರುವರು. ಯಕ್ಷಗಾನ ವೇಷಧಾರಿ ಆಗಿದ್ದು, ಯಕ್ಷಗಾನ ಭಾಗವತಿಕೆಯ ಮಟ್ಟು ಹಾಗೂ ಹೆಜ್ಜೆ ಕುಣಿತಗಳನ್ನು ಶಾಸ್ತ್ರೋಕ್ತವಾಗಿ ಪರಿಣತರಾಗಿದ್ದು ಪ್ರಸಿದ್ಧ ರಂಗಕೃತಿ ನಲ್ವತ್ತರ ನಲುಗು ಅನೇಕ ಪ್ರದರ್ಶನಗಳನ್ನು ಕಂಡಿವೆ.

ಮರಾಠಿಗರ ಕಾಲನಿರ್ಣಯ ಕ್ಯಾಲೆಂಡರನ್ನು ಪ್ರತಿವರ್ಷವೂ ಅಚ್ಚುಕಟ್ಟಾಗಿ ಕನ್ನಡದಲ್ಲಿ ತರುತ್ತಿದ್ದರು. 82ಕ್ಕೂ ಮಿಕ್ಕಿದ ಸಂಶೋಧನಾ ಲೇಖನಗಳನ್ನು ದೇಶ ವಿದೇಶಗಳ ಪ್ರತಿಷ್ಠಿತ ವೈಜ್ಞಾನಿಕ ನಿಯತಕಾಲಿಕೆಗಳಲ್ಲಿ ಪ್ರಕಟಪಡಿಸಿದ್ದ ಇವರು ಕಳೆದ ಸುಮಾರು ಮೂರು ದಶಕಗಳಿಂದ ಗೋಕುಲ ಪತ್ರಿಕೆಯ ಸ್ಥಾಪಕ ಸಂಪಾದಕ ಆಗಿ ಸಮರ್ಪಕವಾಗಿ ಹೊರತರುತ್ತಾ ಸರ್ವರ ಶ್ಲಾಘನೆಗೆ ಪಾತ್ರರಾಗಿದ್ದರು.

ಅವರ ನಲ್ವತ್ತರ ನಲುಗು ನಾಟಕಕ್ಕೆ ಕರ್ನಾಟಕ ನಾಟಕ ಅಕಾಡೆಮಿ ಫೆಲೋಶಿಪ್, ಚಾಮುಂಡೇಶ್ವರಿ ಭವನ ಕಾದಂಬರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ವರ್ಧಮಾನ ಪ್ರಶಸ್ತಿ ದೊರೆತಿವೆ. ಮೂಡಬಿದ್ರಿಯಲ್ಲಿ ಜರಗಿದ 71ನೆ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕರ್ನಾಟಕ ಶ್ರೀ ಪ್ರಶಸ್ತಿ, ಜಯಂತಿ ಬಿ.ಎಸ್ ಕುರ್ಕಾಲ್ ಸಾಹಿತ್ಯ ಪ್ರಶಸ್ತಿ-2006 ಲಭಿಸಿದ್ದು, ಉಡುಪಿ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿಯೂ ಗೌರವಿಸಲ್ಪಟ್ಟಿದ್ದರು. 70ನೇ ಗಣರಾಜ್ಯೋತ್ಸವ ಸಮಾರಂಭದಲ್ಲಿ ಬಿಎಸ್‌ಕೆಬಿ ಅಸೋಸಿಯೇಶನ್ ಸಂಸ್ಥೆಯ ಗೋಕುಲ ರತ್ನ ಪ್ರಶಸ್ತಿ, ಕನ್ನಡಿಗ ಪತ್ರಕರ್ತರ ಸಂಘ ಮಹಾರಾಷ್ಟ್ರ ಇದರ ಸದಸ್ಯರಾಗಿದ್ದು, ಚೆಂಬೂರು ಕರ್ನಾಟಕ ಸಂಘ ಸಾಹಿತ್ಯ ಸಹವಾಸ 2007ರ ಸಮಾರಂಭದಲ್ಲಿ ಸನ್ಮಾನಿಸಲ್ಪಟ್ಟಿದ್ದರು.

ಮೆಟಾ ಇಂಡಿಯಾ ವಿರುದ್ಧ ಎಫ್‌ಐಆರ್

ನವದೆಹಲಿ, ನ.5: ಸಾಮಾಜಿಕ ಜಾಲತಾಣ ದೈತ್ಯ ಸಂಸ್ಥೆಯಾದ ಮೆಟಾ ಒಡೆತನದ ವೇದಿಕೆಗಳಲ್ಲಿ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಮತ್ತು ಶೋಷಣೆಗೆ ಸಂಬಂಧಿಸಿದ ಅಪರಾಧಿಕ ವಿಷಯ ವಸ್ತುಗಳು ಲಭ್ಯವಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಪೊಲೀಸರು ಮೆಟಾ ಇಂಡಿಯಾ ಸಂಸ್ಥೆಯ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಸ್ಪಷ್ಟ ಮತ್ತು ಕಟ್ಟುನಿಟ್ಟಿನ ನಿರ್ದೇಶನ, ಆದೇಶಗಳ ಹಿನ್ನೆಲೆಯಲ್ಲಿ ದೆಹಲಿ ಪೊಲೀಸರ ಸೈಬರ್ ಕ್ರೈಮ್ ವಿಭಾಗವು ಈ ಕಾನೂನು ಕ್ರಮ ಕೈಗೊಂಡಿದೆ.

ಮೆಟಾಗೆ ಸೇರಿದ ಇನ್ಸ್ಟಾಗ್ರಾಮ್ ಸೇರಿದಂತೆ ಪ್ರಮುಖ ವೇದಿಕೆಗಳಲ್ಲಿ ಹಣ ನೀಡಿ ಪ್ರದರ್ಶಿಸಲಾಗುವ ಜಾಹೀರಾತುಗಳ ಮೂಲಕವೇ ಇಂತಹ ಕಾನೂನುಬಾಹಿರ ಮತ್ತು ಶೋಷಣೆಯ ವಿಷಯ ವಸ್ತುಗಳನ್ನು ಪ್ರಚಾರ ಮಾಡಲಾಗುತ್ತಿತ್ತು. ಬಳಕೆದಾರರನ್ನು ಅಪರಾಧಿಕ ಕಂಟೆಂಟ್ ಹೊಂದಿರುವ ಟೆಲಿಗ್ರಾಮ್ ಲಿಂಕ್‌ಗಳಿಗೆ ಮರುನಿರ್ದೇಶಿಸುವ ಯತ್ನಗಳು ನಡೆದಿರುವುದು ತನಿಖೆಯಲ್ಲಿ ತಿಳಿದುಬಂದಿದೆ.

ಬಳಕೆದಾರರು ಈ ರೀತಿಯ ಆಕ್ಷೇಪಾರ್ಹ ಜಾಹೀರಾತುಗಳನ್ನು ವರದಿ ಮಾಡಿದರೂ ಮೆಟಾದ ಆಂತರಿಕ ಪರಿಶೀಲನಾ ವ್ಯವಸ್ಥೆಯು ಅವುಗಳನ್ನು ತಕ್ಷಣವೇ ತೆಗೆದುಹಾಕಲು ವಿಫಲವಾಗಿತ್ತು. ಮೆಟಾದ ಸ್ವಯಂಚಾಲಿತ ಆಲ್ಗರಿದಮ್ ಇಂತಹ ಅಪಾಯಕಾರಿ ಕಂಟೆಂಟ್ಗಳನ್ನು ಶಿಫಾರಸು ಮಾಡಲು ಅಥವಾ ವ್ಯಾಪಕವಾಗಿ ಹಂಚಿಕೊಳ್ಳಲು ನೆರವಾಗಿದೆಯೇ ಎಂಬ ಬಗ್ಗೆಯೂ ಆಯೋಗ ಪ್ರಶ್ನೆ ಎತ್ತಿದೆ.

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಸದಸ್ಯ ಪ್ರಿಯಾಂಕ್ ಕಾನೂನ್ಗೋ ಅವರು ಈ ಕುರಿತು ಮಾಹಿತಿ ಹಂಚಿಕೊಂಡಿದ್ದು, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ನೀಡಿರುವ ಕಟ್ಟುನಿಟ್ಟಿನ ನಿರ್ದೇಶನದ ಮೇರೆಗೆ ದೆಹಲಿ ಪೊಲೀಸರು ಮೆಟಾ ಇಂಡಿಯಾ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ ಎಂದು ಸ್ಪಷ್ಟಪಡಿಸಿದ್ದಾರೆ.

ಮಕ್ಕಳ ಮೇಲಿನ ಲೈಂಗಿಕ ಶೋಷಣೆ ತಡೆ ಕಾಯ್ದೆ ಪ್ರಕಾರ ಇಂತಹ ಅಪರಾಧಗಳು ಕಂಡುಬಂದಲ್ಲಿ ಅದನ್ನು ತಕ್ಷಣವೇ ಸಂಬಂಧಪಟ್ಟ ಕಾನೂನು ಜಾರಿ ಸಂಸ್ಥೆಗಳಿಗೆ ವರದಿ ಮಾಡುವುದು ಕಡ್ಡಾಯವಾಗಿದೆ. ಈ ನಿಯಮವನ್ನು ಉಲ್ಲಂಘಿಸಿರುವ ಮತ್ತು ಮಾಹಿತಿ ಮರೆಮಾಚಿರುವ ಸಾಧ್ಯತೆಗಳ ಕುರಿತು ದೆಹಲಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ಸಹ ಈ ಪ್ರಕರಣದ ಬಗ್ಗೆ ಮೆಟಾ ಸಂಸ್ಥೆಯಿಂದ ಸ್ಪಷ್ಟೀಕರಣ ಕೋರಿದ್ದು, ಯಾವುದೇ ವಿಳಂಬವಿಲ್ಲದೆ ಅಂತಹ ವಿಷಯ ವಸ್ತುಗಳನ್ನು ಪ್ಲಾಟ್‌ಫಾರ್ಮ್‌ನಿಂದ ತೆಗೆದುಹಾಕುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದೆ. ಇಂತಹ ಪ್ರಕರಣಗಳಲ್ಲಿ ಎಲೆಕ್ಟ್ರಾನಿಕ್ ಸಾಕ್ಷ್ಯಗಳನ್ನು ರಕ್ಷಿಸುವುದು ಮತ್ತು ಸಂತ್ರಸ್ತ ಮಕ್ಕಳ ಗುರುತನ್ನು ಗೌಪ್ಯವಾಗಿಟ್ಟು ತಕ್ಷಣವೇ ಕ್ರಮ ಕೈಗೊಳ್ಳಬೇಕು ಎಂಬ ಸುಪ್ರೀಂ ಕೋರ್ಟ್ ಮಾರ್ಗದರ್ಶಿ ಸೂತ್ರಗಳನ್ನು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಈ ಸಂದರ್ಭದಲ್ಲಿ ಉಲ್ಲೇಖಿಸಿದೆ.

ಈ ಗಂಭೀರ ಬೆಳವಣಿಗೆಯ ಬೆನ್ನಲ್ಲೇ ಮೆಟಾ ಸಂಸ್ಥೆಯು ತನ್ನ ವೇದಿಕೆಗಳಲ್ಲಿ ಇಂತಹ ಕಂಟೆಂಟ್ ಪತ್ತೆಹಚ್ಚಲು ಕೃತಕ ಬುದ್ಧಿಮತ್ತೆ ಆಧಾರಿತ ವ್ಯವಸ್ಥೆಯನ್ನು ಬಲಪಡಿಸುವುದಾಗಿ ತಿಳಿಸಿದೆ. ಅಲ್ಲದೆ, ಕೇಂದ್ರ ಗೃಹ ಸಚಿವಾಲಯದ ಅಡಿಯಲ್ಲಿ ಕಾರ್ಯಾಚರಿಸುವ ರಾಷ್ಟ್ರೀಯ ಸೈಬರ್ ಕ್ರೈಮ್ ವರದಿ ಪೋರ್ಟಲ್ ಮತ್ತು ನ್ಯಾಷನಲ್ ಸೆಂಟರ್ ಫಾರ್ ಮಿಸ್ಸಿಂಗ್ ಅಂಡ್ ಎಕ್ಸ್‌ಪ್ಲಾಯ್ಟೆಡ್ ಚಿಕನ್ ಜತೆಗೂಡಿ ಇಂತಹ ಅಪರಾಧಗಳ ಕುರಿತು ನೇರವಾಗಿ ಮಾಹಿತಿ ಹಂಚಿಕೊಳ್ಳಲು ಬದ್ಧವಾಗಿರುವುದಾಗಿ ಸಂಸ್ಥೆ ಸ್ಪಷ್ಟನೆ ನೀಡಿದೆ.

100 ರೂ.ಗೆ 10 ಬಗೆ ತರಕಾರಿ: ತಮಿಳುನಾಡು ಸರ್ಕಾರದಿಂದ ವೆಟ್ರಿ ಕಿಟ್

ಚೆನ್ನೈ, ನ.5: ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ಜನಸಾಮಾನ್ಯರಿಗೆ ಕಡಿಮೆ ದರದಲ್ಲಿ ಅಗತ್ಯ ತರಕಾರಿಗಳನ್ನು ಒದಗಿಸುವ ಉದ್ದೇಶದಿಂದ ತಮಿಳುನಾಡು ಸರ್ಕಾರವು ವೆಟ್ರಿ ವಿಶೇಷ ತರಕಾರಿ ಕಿಟ್ ಯೋಜನೆ ಪರಿಚಯಿಸಿದೆ. ಈ ಯೋಜನೆಯಡಿ ಕೇವಲ 100 ರೂ.ಗೆ 10 ಬಗೆಯ ತರಕಾರಿಗಳು ಮತ್ತು ಅಡುಗೆ ಪದಾರ್ಥಗಳನ್ನು ಒಳಗೊಂಡ ವಿಶೇಷ ಕಿಟ್ ಮಾರಾಟ ಮಾಡಲಾಗುತ್ತಿದೆ.



ಈ ವಿಶೇಷ ಯೋಜನೆಯು ನವೆಂಬರ್ 5ರಿಂದ 7ರವರೆಗೆ ಮೂರು ದಿನಗಳ ಕಾಲ ಜಾರಿಯಲ್ಲಿರುತ್ತದೆ. ರಾಜ್ಯದಾದ್ಯಂತ ಆಯ್ದ 218 ಸಹಕಾರ ಸಗಟು ಮತ್ತು ಚಿಲ್ಲರೆ ಮಾರಾಟ ಕೇಂದ್ರಗಳಲ್ಲಿ ಕಿಟ್ ಲಭ್ಯ. ಇದಲ್ಲದೆ, ಚೆನ್ನೈ ನಗರದಲ್ಲಿ ನಾಲ್ಕು ಸಂಚಾರಿ ತರಕಾರಿ ಮಾರಾಟ ಮಳಿಗೆಗಳ ಮೂಲಕವೂ ಕಿಟ್ಗಳನ್ನು ಮಾರಾಟ ಮಾಡಲು ಸರ್ಕಾರ ವ್ಯವಸ್ಥೆ ಮಾಡಿದೆ.

ಸಹಕಾರ ಇಲಾಖೆಯು ನಿರ್ವಹಿಸುತ್ತಿರುವ ಈ 100 ರೂ. ಕಿಟ್‌ನಲ್ಲಿ 2.55ರಿಂದ 2.60 ಕೆ.ಜಿ. ತರಕಾರಿಗಳು ಮತ್ತು ಅಡುಗೆ ಪದಾರ್ಥಗಳು ಇರಲಿವೆ. ಈ ಪೈಕಿ, 500 ಗ್ರಾಂ ಈರುಳ್ಳಿ, 500 ಗ್ರಾಂ ಟೊಮ್ಯಾಟೊ, 250 ಗ್ರಾಂ ಬದನೆಕಾಯಿ, 200 ಗ್ರಾಂ ಕ್ಯಾರಟ್, 200 ಗ್ರಾಂ ಬೀನ್ಸ್, 100 ಗ್ರಾಂ ಹಸಿಮೆಣಸಿನ ಕಾಯಿ, 100 ಗ್ರಾಂ ನಿಂಬೆಹಣ್ಣು, 50 ಗ್ರಾಂ ಶುಂಠಿ ಹಾಗೂ ಒಂದು ತೆಂಗಿನಕಾಯಿ (400-450 ಗ್ರಾಂ) ಇರಲಿವೆ.

ಈ ವಿಶೇಷ ತರಕಾರಿ ಕಿಟ್ ಮಾರಾಟಕ್ಕೆ ಸಂಬಂಧಿಸಿದಂತೆ ತಮಿಳುನಾಡು ಸಹಕಾರ ಇಲಾಖೆಯು ನವೆಂಬರ್ 3ರಂದು ಮಾರ್ಗಸೂಚಿಗಳನ್ನೂ ಹೊರಡಿಸಿದೆ. ಅದರ ಪ್ರಕಾರ, ಒಬ್ಬ ಗ್ರಾಹಕರಿಗೆ ಒಂದು ಕಿಟ್ ಮಾತ್ರ ಮಾರಾಟ ಮಾಡಬೇಕು. ನಿಗದಿತ 100 ರೂ.ಗಿಂತ ಹೆಚ್ಚು ಅಥವಾ ಕಡಿಮೆ ದರ ವಿಧಿಸುವಂತಿಲ್ಲ. ಕಿಟ್‌ನಲ್ಲಿರುವ ತರಕಾರಿಗಳನ್ನು ಪ್ರತ್ಯೇಕವಾಗಿ ಮಾರಾಟ ಮಾಡಲು ಅವಕಾಶವಿಲ್ಲ.

ಮಾರಾಟ ಕೇಂದ್ರಗಳು ಪ್ರತಿದಿನ ತಾಜಾ ತರಕಾರಿಗಳನ್ನು ಖರೀದಿಸಬೇಕು. ಅವುಗಳ ಗುಣಮಟ್ಟವನ್ನು ಕಾಪಾಡುವುದರ ಜೊತೆಗೆ ಖರೀದಿ ಮತ್ತು ಮಾರಾಟದ ಲೆಕ್ಕಪತ್ರಗಳನ್ನು ನಿರ್ವಹಿಸಬೇಕು ಎಂದು ಇಲಾಖೆ ಸೂಚಿಸಿದೆ. ತರಕಾರಿಗಳ ಖರೀದಿ ವೆಚ್ಚ ಮತ್ತು 100 ರೂ.ರ ನಿಗದಿತ ಮಾರಾಟ ದರದ ನಡುವಿನ ಕೊರತೆ ಹಣವನ್ನು ಸರ್ಕಾರ ಪಾವತಿಲಿದೆ. ಪರಿಸರಸ್ನೇಹಿ ಪ್ಯಾಕಿಂಗ್ ಚೀಲಕ್ಕಾಗಿ ಪ್ರತಿ ಕಿಟ್ಗೆ 2.50 ರೂ. ವೆಚ್ಚವನ್ನೂ ಲೆಕ್ಕಹಾಕಲಾಗಿದೆ. ಇದರಿಂದ ಗ್ರಾಹಕರಿಗೆ ನಿಗದಿತ ದರದಲ್ಲಿ ತರಕಾರಿ ಒದಗಿಸುವುದರ ಜೊತೆಗೆ ಸಹಕಾರ ಮಾರಾಟ ಕೇಂದ್ರಗಳಿಗೆ ಉಂಟಾಗುವ ಹೆಚ್ಚುವರಿ ವೆಚ್ಚವನ್ನು ಸರಿದೂಗಿಸಲು ಸರ್ಕಾರ ಮುಂದಾಗಿದೆ. ದೀಪಾವಳಿ ಹಬ್ಬದ ಸಂದರ್ಭದಲ್ಲಿ ಮನೆಗಳ ಅಡುಗೆ ವೆಚ್ಚವನ್ನು ತಗ್ಗಿಸುವುದು ಮತ್ತು ಅಗತ್ಯ ತರಕಾರಿಗಳು ಸಮಂಜಸ ದರದಲ್ಲಿ ದೊರೆಯುವಂತೆ ಮಾಡುವುದು ಯೋಜನೆಯ ಉದ್ದೇಶವಾಗಿದೆ. ಮೂರು ದಿನಗಳ ಅವಧಿಗೆ ಮಾತ್ರ ಸೀಮಿತವಾಗಿರುವ ಈ ವಿಶೇಷ ಮಾರಾಟವು ನವೆಂಬರ್ 7ರಂದು ಮುಕ್ತಾಯಗೊಳ್ಳಲಿದೆ.

ವಂಚಿತ ಮಹಿಳೆಗೆ ಬಡ್ಡಿ ಸಮೇತ ಹಣ ನೀಡಲು ಬ್ಯಾಂಕ್‌ಗೆ ಸೂಚನೆ

ನವದೆಹಲಿ, ನ. 5: ಸೈಬರ್ ವಂಚನೆಗೊಳಗಾಗಿ ಹಣ ಕಳೆದುಕೊಂಡಿದ್ದ ಮಹಿಳಾ ಗ್ರಾಹಕಿಯೊಬ್ಬರಿಗೆ ಕಳೆದುಕೊಂಡ ಹಣ ಹಾಗೂ ಪರಿಹಾರವನ್ನು ಪಾವತಿಸುವಂತೆ ದೆಹಲಿಯ ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗವು ಕೆನರಾ ಬ್ಯಾಂಕ್‌ಗೆ ಮಹತ್ವದ ಆದೇಶ ನೀಡಿದೆ. ವಂಚನೆಗೆ ಒಳಗಾದ ಮಹಿಳೆಗೆ 4.14 ಲಕ್ಷ ಹಣವನ್ನು ಮರುಪಾವತಿಸುವ ಜೊತೆಗೆ, 1 ಲಕ್ಷ ಪರಿಹಾರ ಮತ್ತು 50,000 ಕಾನೂನು ಹೋರಾಟದ ವೆಚ್ಚವನ್ನು ನೀಡುವಂತೆ ಆಯೋಗವು ಬ್ಯಾಂಕ್‌ಗೆ ಸೂಚಿಸಿದೆ.



ಕೆನರಾ ಬ್ಯಾಂಕ್‌ನಲ್ಲಿ ಉಳಿತಾಯ ಖಾತೆ ಹೊಂದಿದ್ದ ಮಹಿಳೆಗೆ ಏಪ್ರಿಲ್ 7, 2024 ರಂದು ವಂಚಕರಿಂದ ಕರೆ ಬಂದಿತ್ತು, ಮರುದಿನ ಬೆಳಗ್ಗೆ ಐಎಂಪಿಎಸ್ ಮೂಲಕ 5 ಲಕ್ಷ ಹಾಗೂ 44,488 ಸೇರಿದಂತೆ ಒಟ್ಟು 5.44 ಲಕ್ಷ ಹಣವನ್ನು ಅವರ ಖಾತೆಯಿಂದ ಅನಧಿಕೃತವಾಗಿ ವರ್ಗಾಯಿಸಲಾಗಿತ್ತು. ಮಹಿಳೆಯು ತಕ್ಷಣ ಸಮೀಪದ ಬ್ಯಾಂಕ್ ಶಾಖೆಗೆ ತೆರಳಿದರೂ, ಸಿಬ್ಬಂದಿ ಸಕಾಲದಲ್ಲಿ ಸ್ಪಂದಿಸದೆ ವಿಳಂಬ ಮಾಡಿದ್ದರು. ಖಾತೆಯನ್ನು ಬ್ಲಾಕ್ ಮಾಡುವಷ್ಟರಲ್ಲಿ ಖಾತೆಯಲ್ಲಿದ್ದ ಹಣ ಕಡಿತಗೊಂಡಿದ್ದು, ಕೇವಲ 1.30 ಲಕ್ಷವನ್ನು ಮಾತ್ರ ಹಿಂಪಡೆಯಲು ಸಾಧ್ಯವಾಗಿತ್ತು. ಉಳಿದ 4.14 ಲಕ್ಷ ಹಣ ಮರುಪಾವತಿಯಾಗದ ಕಾರಣ ಮಹಿಳೆಯು ಬ್ಯಾಂಕ್ ಸೇವೆಯಲ್ಲಿನ ನ್ಯೂನತೆಯನ್ನು ಪ್ರಶ್ನಿಸಿ ಆಯೋಗದ ಮೆಟ್ಟಿಲೇರಿದ್ದರು. ವಿಚಾರಣೆ ವೇಳೆ ಬ್ಯಾಂಕ್, ಗ್ರಾಹಕಿಯೇ ವಂಚಕರೊಂದಿಗೆ ಮೊಬೈಲ್ ಸ್ಕ್ರೀನ್ ಹಂಚಿಕೊಂಡಿದ್ದಾರೆ ಹಾಗೂ ಎಂ-ಪಿನ್ , ಒಟಿಪಿ ಬಳಸಿ ವ್ಯವಹಾರ ನಡೆಸಲಾಗಿದೆ, ಹೀಗಾಗಿ 2017ರ ಆರ್‌ಬಿಐ ನಿಯಮಾವಳಿಯಂತೆ ಗ್ರಾಹಕರ ನಿರ್ಲಕ್ಷ್ಯದಿಂದಾದ ನಷ್ಟಕ್ಕೆ ಬ್ಯಾಂಕ್ ಹೊಣೆಯಲ್ಲ ಎಂದು ವಾದಿಸಿತ್ತು.

ಆದರೆ ಬ್ಯಾಂಕ್‌ನ ವಾದವನ್ನು ತಳ್ಳಿಹಾಕಿದ ಆಯೋಗದ ಪೀಠ, ಲಾಗಿನ್ ವಿವರಗಳ ಮೂಲಕ ದೃಢೀಕರಣ ಆಗಿರುವುದನ್ನೇ ಗ್ರಾಹಕರೇ ಖುದ್ದಾಗಿ ಒಪ್ಪಿಗೆ ನೀಡಿದ್ದಾರೆ ಎಂದು ಪರಿಗಣಿಸಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದೆ. ವಹಿವಾಟುಗಳಿಗೆ ಸಂಬಂಧಿಸಿದ ಐಪಿ ಲಾಗ್‌ಗಳು, ಸಾಧನ ಪರಿಶೀಲನಾ ದಾಖಲೆಗಳು, ಫಲಾನುಭವಿ ಸೇರ್ಪಡೆಯ ವಿವರಗಳು ಹಾಗೂ ವ್ಯವಹಾರದ ಆಡಿಟ್ ವಿಚಾರಣೆಯಂತಹ ಕನಿಷ್ಠ ತಾಂತ್ರಿಕ ದಾಖಲೆಗಳನ್ನು ಒದಗಿಸುವಲ್ಲಿಯೂ ಬ್ಯಾಂಕ್ ವಿಫಲವಾಗಿದೆ ಎಂದು ಆಯೋಗ ಅಸಮಾಧಾನ ವ್ಯಕ್ತಪಡಿಸಿದೆ. ಗ್ರಾಹಕಿಯು ತಕ್ಷಣವೇ ವ್ಯವಹಾರದ ಬಗ್ಗೆ ವರದಿ ಮಾಡಿ ಬ್ಯಾಂಕ್‌ಗೆ ದೂರು ನೀಡಿದ್ದರು. ಆರ್‌ಬಿಐ ನಿಯಮಾವಳಿಯಡಿ ಮೊಬೈಲ್ ಸ್ಕ್ರೀನ್ ಹಂಚಿಕೊಳ್ಳುವುದು ನಿರ್ಲಕ್ಷ್ಯವೆಂದು ಪರಿಗಣಿಸಿದರೂ, ಕೇವಲ ದೃಢೀಕರಣವನ್ನು ನೆಪವಾಗಿಟ್ಟುಕೊಂಡು ನಿಖರ ಸನ್ನಿವೇಶಗಳನ್ನು ಸಾಬೀತುಪಡಿಸದೆ ಬ್ಯಾಂಕ್ ನುಣುಚಿಕೊಳ್ಳುವಂತಿಲ್ಲ. ಅಲ್ಲದೆ, ಸೈಬರ್ ಕ್ರೈಮ್ ತನಿಖೆ ಬಾಕಿ ಇರುವ ಕಾರಣ ನೀಡಿ ಗ್ರಾಹಕರ ದೂರಿನ ವಿಚಾರಣೆ ತಡೆಯಲು ಸಾಧ್ಯವಿಲ್ಲ, ಕ್ರಿಮಿನಲ್ ಪ್ರಕ್ರಿಯೆ ಮತ್ತು ಬ್ಯಾಂಕಿಂಗ್ ಸೇವೆಯ ನ್ಯೂನತೆ ಎರಡೂ ಭಿನ್ನ ವಿಚಾರಗಳಾಗಿವೆ ಎಂದು ಆಯೋಗ ಅಭಿಪ್ರಾಯಪಟ್ಟಿದೆ.

ಅಕ್ಟೋಬರ್ 28 ರಂದು ಅಂತಿಮ ಆದೇಶ ಹೊರಡಿಸಿರುವ ಆಯೋಗ, ಸಂಪೂರ್ಣ ನಷ್ಟವು ಕೇವಲ ಮಹಿಳೆಯ ನಿರ್ಲಕ್ಷ್ಯದಿಂದಲೇ ಆಗಿದೆ ಎಂಬುದನ್ನು ಸಾಬೀತುಪಡಿಸಲು ಬ್ಯಾಂಕ್ ವಿಫಲವಾಗಿರುವುದರಿಂದ ಇದು ಸೇವೆಯ ನ್ಯೂನತೆಯೇ ಸರಿ ಎಂದು ತೀರ್ಮಾನಿಸಿದೆ. ಮುಂದಿನ 45 ದಿನಗಳ ಒಳಗೆ ಏಪ್ರಿಲ್ 8, 2024 ರಿಂದ ಅನ್ವಯವಾಗುವಂತೆ ಶೇ 9ರ ಬಡ್ಡಿಯೊಂದಿಗೆ 4,14,488 ಮರುಪಾವತಿಸಬೇಕು, ಜೊತೆಗೆ ಪರಿಹಾರ ಮತ್ತು ವೆಚ್ಚವನ್ನು ಭರಿಸಬೇಕು; ತಪ್ಪಿದಲ್ಲಿ ಶೇ 12ರ ದಂಡದ ಬಡ್ಡಿ ಪಾವತಿಸಬೇಕಾಗುತ್ತದೆ ಎಂದು ಎಚ್ಚರಿಸಿದೆ.

ಜನರ ಅರಮನೆಯಲ್ಲಿ ಕನ್ನಡದ ಕಂಪು: ವಿಧಾನಸೌಧದಲ್ಲಿ 110 ಕನ್ನಡ ನುಡಿಫಲಕಗಳ ಲೋಕಾರ್ಪಣೆ



ಕರ್ನಾಟಕದ ಆಡಳಿತ ಕೇಂದ್ರವಾದ ವಿಧಾನಸೌಧದಲ್ಲಿ ಕನ್ನಡ ಭಾಷೆಯ ಘನತೆ, ಕನ್ನಡ ನಾಡಿನ ಸಾಂಸ್ಕೃತಿಕ ಶ್ರೀಮಂತಿಕೆ ಹಾಗೂ ಕನ್ನಡದ ಚಿಂತನಾ ಪರಂಪರೆಯನ್ನು ಸಾರುವ 110 ಕನ್ನಡ ನುಡಿ ಫಲಕಗಳನ್ನು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಗುರುವಾರ ಲೋಕಾರ್ಪಣೆಗೊಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಅವರು, ಕರ್ನಾಟಕದ ಹೆಮ್ಮೆಯ ಪ್ರತೀಕವಾಗಿರುವ ವಿಧಾನಸೌಧವು ಕೇವಲ ಆಡಳಿತದ ಕಟ್ಟಡವಲ್ಲ. ಅದು ಕನ್ನಡ ನಾಡಿನ ಸ್ವಾಭಿಮಾನ, ಇತಿಹಾಸ ಮತ್ತು ಸಾಂಸ್ಕೃತಿಕ ಅಸ್ಮಿತೆಯ ಪ್ರತೀಕವೂ ಹೌದು. ಇಂತಹ ಜನರ ಅರಮನೆಯ ಆಯ್ದ ಸ್ಥಳಗಳಲ್ಲಿ ಕನ್ನಡದ ಮಹತ್ವದ ಚಿಂತನೆಗಳು ಮತ್ತು ಮೌಲ್ಯಗಳನ್ನು ಸಾರುವ ನುಡಿ ಫಲಕಗಳನ್ನು ಅಳವಡಿಸಿರುವುದು ಅತ್ಯಂತ ಸಂತಸದ ಸಂಗತಿಯಾಗಿದ್ದು, ಆಡಳಿತ ಕೇಂದ್ರದಲ್ಲಿ ಕನ್ನಡದ ಧ್ವನಿ ನಿರಂತರವಾಗಿ ಮೊಳಗಬೇಕೆಂಬ ಆಶಯ ಈ ಯೋಜನೆಯ ಹಿಂದಿದೆ. ರಾಜ್ಯದ ಎರಡನೆಯ ಮುಖ್ಯಮಂತ್ರಿಗಳಾಗಿದ್ದ ಕೆಂಗಲ್ ಹನುಮಂತಯ್ಯನವರ ದೂರದೃಷ್ಟಿ ಮತ್ತು ಸಂಕಲ್ಪದ ಫಲವಾಗಿ ಬೆಂಗಳೂರಿನಲ್ಲಿ ನಿರ್ಮಾಣಗೊಂಡಿರುವ ವಿಧಾನಸೌಧವು ಹಲವು ಐತಿಹಾಸಿಕ ಘಟನೆಗಳಿಗೆ ಸಾಕ್ಷಿಯಾಗಿದೆ. ಭಾರತದ ಮೊದಲ ಪ್ರಧಾನಮಂತ್ರಿ ಪಂಡಿತ್ ಜವಾಹರಲಾಲ್ ನೆಹರು ಅವರು 1951ರ ಜುಲೈ 13ರಂದು ಶಂಕು ಸ್ಥಾಪನೆ ನೆರವೇರಿಸಿದ ಈ ಭವ್ಯ ಕಟ್ಟಡವು 1956ರಲ್ಲಿ ಉದ್ಘಾಟನೆಗೊಂಡಿತು. ದ್ರಾವಿಡ ವಾಸ್ತುಶಿಲ್ಪದ ಗುಣಗಳೊಂದಿಗೆ ತಂಜಾವೂರಿನ ಬೃಹದೀಶ್ವರ ದೇವಾಲಯ ಮತ್ತು ಕರ್ನಾಟಕದ ಸೋಮನಾಥಪುರ ದೇವಾಲಯಗಳ ವಾಸ್ತುಶಿಲ್ಪಗಳ ಪ್ರೇರಣೆಯನ್ನು ಮೈಗೂಡಿಸಿಕೊಂಡಿರುವ ವಿಧಾನಸೌಧದಲ್ಲಿ ಅಭಿಜಾತ ಯುರೋಪಿಯನ್ ಮತ್ತು ಇಂಡೋ ಸಾರ್ಸೆನಿಕ್ ಶೈಲಿಗಳ ಸೊಬಗನ್ನು ಕಾಣಬಹುದು ಎಂದು ತಿಳಿಸಿದರು.

ಕಲ್ಲಿನಲ್ಲಿ ಕೆತ್ತಿದ ಮಹಾಕಾವ್ಯದಂತಿರುವ ಜನರ ಅರಮನೆಯ ಆಯ್ದ 110 ಸ್ಥಳಗಳಲ್ಲಿ ಕನ್ನಡದ ನುಡಿ ಫಲಕಗಳನ್ನು ಅಳವಡಿಸಲಾಗಿದೆ. ಪಂಪ, ಅಲ್ಲಮ, ಬಸವಣ್ಣ, ಕುವೆಂಪು, ಶಾಂತವೇರಿ ಗೋಪಾಲಗೌಡ, ದೇವರಾಜ ಅರಸು, ಕೆಂಗಲ್ ಹನುಮಂತಯ್ಯ, ಸಿದ್ದಲಿಂಗಯ್ಯ, ಜಯದೇವಿತಾಯಿ ಲಿಗಾಡೆ, ಆರ್.ಕಲ್ಯಾಣಮ್ಮ ಸೇರಿದಂತೆ 55 ಹಿರಿಯ ಸಾಹಿತಿಗಳು, ಚಿಂತಕರು ಹಾಗೂ ಮಹನೀಯರ ಬರಹಗಳಿಂದ ಈ ಘೋಷವಾಕ್ಯಗಳನ್ನು ಆಯ್ಕೆ ಮಾಡಿದೆ. ಇವು ಕೇವಲ ಅಲಂಕಾರಿಕ ಫಲಕಗಳಲ್ಲ. ಕನ್ನಡ ನಾಡಿನ ಚಿಂತನೆ, ಮಾನವೀಯ ಮೌಲ್ಯ, ಸಾಮಾಜಿಕ ನ್ಯಾಯ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಪ್ರತಿನಿಧಿಸುವ ಸಂದೇಶಗಳಾಗಿವೆ ಎಂದು ಬಿಳಿಮಲೆ ತಿಳಿಸಿದರು.

ವಿಧಾನಸೌಧಕ್ಕೆ ಭೇಟಿ ನೀಡುವ ಪ್ರತಿಯೊಬ್ಬರಿಗೂ ಕನ್ನಡದ ಮಹತ್ವದ ಚಿಂತನೆಗಳು ಪರಿಚಯವಾಗಬೇಕು. ಆಡಳಿತಸೌಧಗಳ ಗೋಡೆಗಳು ಕನ್ನಡ ನುಡಿ, ನಾಡಿನ ಮೌಲ್ಯಗಳ ಕುರಿತಂತೆ ಮಾತನಾಡುವಂತಾಗಬೇಕು. ಕನ್ನಡದ ಸಾರ್ವಭೌಮತ್ವವನ್ನು ಸಾರ್ವಜನಿಕ ಬದುಕಿನ ಪ್ರತಿಯೊಂದು ವಲಯದಲ್ಲಿಯೂ ಪ್ರತಿಪಾದಿಸುವುದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಇಂತಹ ಪ್ರಯತ್ನಗಳ ಉದ್ದೇಶವಾಗಿದೆ. ಇದೇ ಸಂದರ್ಭದಲ್ಲಿ ಈ ಯೋಜನೆಯನ್ನು ಲೋರ್ಕಾಪಣೆಗೊಳಿಸಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಕೃತಜ್ಞತೆ ಸಲ್ಲಿಸಿದ ಬಿಳಿಮಲೆ, ಈ ಯೋಜನೆಗೆ ಅನುಮೋದನೆಯನ್ನು ನೀಡಿದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಹಕಾರವನ್ನು ಸ್ಮರಿಸಿದರು. ಮುಂದಿನ ದಿನಗಳಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳ ಹಾಗೂ ತಾಲೂಕುಸೌಧಗಳ ಪಡಸಾಲೆಗಳಲ್ಲಿ ಕನ್ನಡದ ನುಡಿ ಫಲಕಗಳನ್ನು ಅಳವಡಿಸಲು ಸರ್ಕಾರದ ವತಿಯಿಂದ ಸೂಕ್ತ ನಿರ್ದೇಶನವನ್ನು ನೀಡಲಾಗುವುದೆಂದು ತಿಳಿಸಿದ ಬಿಳಿಮಲೆ, ಈ ಬಗ್ಗೆ ಪ್ರಾಧಿಕಾರವು ಮುದ್ರಿಸುತ್ತಿರುವ ಕನ್ನಡ ನುಡಿ ಫಲಕಗಳ ಕಿರುಹೊತ್ತಿಗೆಯನ್ನು ರಾಜ್ಯದ ಎಲ್ಲಾ ಸರ್ಕಾರಿ ಕಚೇರಿಗಳಿಗೆ ತಲುಪಿಸುವ ವ್ಯವಸ್ಥೆ ಮಾಡಲಾಗುವುದು ಎಂದರು.

ಹಾಲು, ಅಕ್ಕಿ ಸೇರಿ ಕಚ್ಚಾವಸ್ತುಗಳ ಬೆಲೆ ಏರಿಕೆ

ಹೋಟೆಲ್ ಆಹಾರ ಪದಾರ್ಥಗಳ ಬೆಲೆ ಶೇ.10–15ರಷ್ಟು ಏರಿಕೆ



ಬೆಂಗಳೂರು, ನ.5: ಕಚ್ಚಾ ವಸ್ತುಗಳ ಬೆಲೆ ಏರಿಕೆಯ ಬಿಸಿಯಿಂದಾಗಿ ರಾಜಧಾನಿ ಬೆಂಗಳೂರಿನಾದ್ಯಂತ ಹೋಟೆಲ್ ಮತ್ತು ದರ್ಶಿನಿಗಳಲ್ಲಿ ಆಹಾರ ಪದಾರ್ಥಗಳ ಬೆಲೆಯನ್ನು ಶೇ.10ರಿಂದ 15ರಷ್ಟು ಹೆಚ್ಚಿಸಲಾಗಿದೆ. ಹಾಲು, ಅಕ್ಕಿ ಹಾಗೂ ಇತರೆ ಅಗತ್ಯ ದಿನಸಿ ವಸ್ತುಗಳ ದರ ದುಬಾರಿಯಾಗಿರುವುದರಿಂದ ತಿಂಡಿಗಳ ಬೆಲೆ ಏರಿಸುವುದು ಅನಿವಾರ್ಯವಾಗಿದೆ ಎಂದು ಹೋಟೆಲ್ ಉದ್ಯಮಿಗಳು ತಿಳಿಸಿದ್ದಾರೆ. ಇದರಿಂದಾಗಿ ಪ್ರತಿದಿನ ಹೋಟೆಲ್ ಅವಲಂಬಿಸಿರುವ ಸಾಮಾನ್ಯ ಗ್ರಾಹಕರಿಗೆ ಊಟದ ಬಿಲ್‌ನ ಹೊರೆ ಮತ್ತಷ್ಟು ಹೆಚ್ಚಾಗಿದೆ.

ಕಳೆದ ಒಂದು ತಿಂಗಳ ಅಂತರದಲ್ಲಿ ಪ್ರತಿ ಕೆ.ಜಿ. ಅಕ್ಕಿಯ ಬೆಲೆ ರೂ.65ರಿಂದ ರೂ.95ರವರೆಗೆ ಏರಿಕೆಯಾಗಿದೆ. ಬೇಳೆಕಾಳುಗಳ ದರವೂ ಹೆಚ್ಚಾಗಿದ್ದು, ಇದರ ಜೊತೆಗೆ ಹಾಲು ಮತ್ತು ಮೊಸರಿನ ಬೆಲೆ ಏರಿಕೆಯು ಪರಿಸ್ಥಿತಿಯನ್ನು ಮತ್ತಷ್ಟು ಬಿಗಡಾಯಿಸುವಂತೆ ಮಾಡಿದೆ. ಈ ನಷ್ಟವನ್ನು ತಪ್ಪಿಸುವ ಉದ್ದೇಶದಿಂದಲೇ ನಗರದ ಹಲವು ಉಪಾಹಾರ ಗೃಹಗಳು ಈಗಾಗಲೇ ತಮ್ಮ ಮೆನುವಿನ ದರವನ್ನು ಶೇ 10–15ರಷ್ಟು ಏರಿಕೆ ಮಾಡಿವೆ ಎಂದು ಬೃಹತ್ ಬೆಂಗಳೂರು ಹೋಟೆಲ್ ಮಾಲೀಕರ ಸಂಘದ ಪದಾಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಸೋದರ ಸತ್ಯನಾರಾಯಣರಾವ್ ಆರೋಗ್ಯ ವಿಚಾರಿಸಿದ ಸೂಪರ್‌ಸ್ಟಾರ್ ರಜನಿಕಾಂತ್



ಬೆಂಗಳೂರು, ನ.5: ರಾಷ್ಟ್ರೋತ್ಥಾನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ತನ್ನ ಹಿರಿಯ ಸಹೋದರ ಸತ್ಯನಾರಾಯಣರಾವ್ ಅವರನ್ನು ಹೆಸರಾಂತ ಚಿತ್ರನಟ ಸೂಪರ್ ಸ್ಟಾರ್ ರಜನಿಕಾಂತ್ ಆಸ್ಪತ್ರೆಗೆ ಭೇಟಿ ನೀಡಿ, ಯೋಗಕ್ಷೇಮ ವಿಚಾರಿಸಿದರು., ತಮ್ಮ ಸಹೋದರನ ಚಿಕಿತ್ಸೆಗೆ ಕೈಗೊಂಡಿರುವ ಕ್ರಮಗಳು, ಆರೋಗ್ಯ ಪರಿಸ್ಥಿತಿ ಬಗ್ಗೆ ಮಾಹಿತಿ ಪಡೆದು ಶೀಘ್ರ ಗುಣಮುಖರಾಗುವಂತೆ ಪ್ರಾರ್ಥಿಸಿದರು.

ಜೈಲಿನೊಳಗಿನ ವೀಡಿಯೋ ವೈರಲ್ ಮಾಡಿದ ನಂತರ ಮೊಬೈಲ್ ರೀಸೆಟ್:

ಎಫ್‌ಎಸ್‌ಎಲ್ ವರದಿಯಲ್ಲಿ ಬಯಲು: ನಟ ಧನ್ವೀರ್‌ಗೆ ಬಿಗ್ ಶಾಕ್



ಬೆಂಗಳೂರು, ನ.5: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ವಿಡಿಯೋ ವೈರಲ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಸಿಬಿ ಪೊಲೀಸರ ತನಿಖೆ ವೇಳೆ ನಟ ಧನ್ವೀರ್ ಗೌಡ ಅವರಿಗೆ ಬಿಗ್ ಶಾಕ್ ಎದುರಾಗಿದೆ. ಜೈಲಿನ ಒಳಗಿನ ವಿಡಿಯೋಗಳನ್ನು ವೈರಲ್ ಮಾಡಿದ ಆರೋಪ ಹೊತ್ತಿರುವ ಧನ್ವೀರ್, ಸಾಕ್ಷ್ಯ ನಾಶಪಡಿಸಲು ತಮ್ಮ ಮೊಬೈಲ್ ಫೋನ್ ಅನ್ನು ರಿಸೆಟ್ ಮಾಡಿದ್ದರು ಎನ್ನಲಾದ ರಹಸ್ಯ ಈಗ ವಿಧಿವಿಜ್ಞಾನ ಪ್ರಯೋಗಾಲಯದ ವರದಿಯಿಂದ ಬಯಲಾಗಿದೆ. ಈ ತನಿಖೆಯ ವೇಳೆ, ನಟ ದರ್ಶನ್ ಅವರ ಆಪ್ತರಾಗಿದ್ದ ನಟ ಧನ್ವೀರ್ ಗೌಡ ಅವರ ಮೊಬೈಲ್ ಮೂಲಕವೇ ಈ ವಿಡಿಯೋಗಳು ಮತ್ತು ದತ್ತಾಂಶಗಳು ಹರಿದಾಡಿವೆ ಎಂಬ ಅನುಮಾನದ ಮೇಲೆ, 2025ರ ನವೆಂಬರ್‌ನಲ್ಲಿ ಪೊಲೀಸರು ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದರು. ಈ ವೇಳೆ, ಪೊಲೀಸರು ಧನ್ವೀರ್ ಮೊಬೈಲ್ ಫೋನ್ ಅನ್ನು ವಶಪಡಿಸಿಕೊಂಡಾಗ, ಅದರಲ್ಲಿ ಜೈಲಿಗೆ ಸಂಬಂಧಿಸಿದ ಯಾವುದೇ ಫೋಟೋ ಅಥವಾ ವಿಡಿಯೋಗಳು ಇರಲಿಲ್ಲ. ಈ ಬಗ್ಗೆ ಪೊಲೀಸರು ಕೇಳಿದಾಗ, ತಾವು ಯಾವುದೇ ತಪ್ಪು ಮಾಡಿಲ್ಲವೆಂದೂ, ಮೊಬೈಲ್ನಲ್ಲಿ ಅಂತಹ ಯಾವುದೇ ದತ್ತಾಂಶ ಇರಲಿಲ್ಲವೆಂದೂ ಧನ್ವೀರ್ ಪೊಲೀಸರ ಸಮ್ಮುಖದಲ್ಲೇ ಸುಳ್ಳು ಹೇಳಿಕೆ ನೀಡಿದ್ದರು. ಆದರೆ, ಧನ್ವೀರ್ ಅವರ ಮೊಬೈಲ್ನಲ್ಲಿದ್ದ ಹಳೆಯ ದತ್ತಾಂಶವನ್ನು ಮರುಪಡೆಯಲು ಸಿಸಿಬಿ ಪೊಲೀಸರು ಫೋನ್ ಅನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದರು. ಇದೀಗ ಬಂದಿರುವ ಎಫ್‌ಎಸ್‌ಎಲ್ ವರದಿಯಲ್ಲಿ, ಧನ್ವೀರ್ ಪೊಲೀಸರಿಗೆ ಫೋನ್ ನೀಡುವ ಮುನ್ನವೇ ಉದ್ದೇಶಪೂರ್ವಕವಾಗಿ ಇಡೀ ಮೊಬೈಲ್ ಅನ್ನು 'ಫ್ಯಾಕ್ಟರಿ ರಿಸೆಟ್' ಮಾಡಿ, ಪ್ರಕರಣಕ್ಕೆ ಸಂಬಂಧಿಸಿದ ವಿಡಿಯೋಗಳು, ವಾಟ್ಸಾಪ್ ಚಾಟ್‌ಗಳು ಮತ್ತು ಪ್ರಮುಖ ಸಾಕ್ಷ್ಯಗಳನ್ನು ಅಳಿಸಿಹಾಕಿರುವುದು ತಾಂತ್ರಿಕವಾಗಿ ದೃಢಪಟ್ಟಿದೆ. ಧನ್ವೀರ್ ಸಾಕ್ಷ್ಯ ನಾಶಪಡಿಸಿರುವ ಕುರಿತು ಸಿಸಿಬಿ ಪೊಲೀಸರು ಶೀಘ್ರದಲ್ಲೇ ನ್ಯಾಯಾಲಯದ ಗಮನಕ್ಕೆ ತರಲಿದ್ದಾರೆ.

ಯೋಜನೆಯ ಅನುಷ್ಠಾನ ಆಡಳಿತಾತ್ಮಕ ಅನಿವಾರ್ಯತೆ, ಆರ್ಥಿಕ ಪರಿಸ್ಥಿತಿಗೆ ಒಳಪಟ್ಟಿರುತ್ತದೆ: ಸರ್ಕಾರ

ಗೃಹಲಕ್ಷ್ಮೀ ಫಲಾನುಭವಿಗಳು ತಮಗೆ ಸಿಗುವ ಆರ್ಥಿಕ ನೆರವನ್ನು ಹಕ್ಕು ಎಂದು ಪ್ರತಿಪಾದಿಸುವಂತಿಲ್ಲ



ಬೆಂಗಳೂರು, ನ.5: ಗೃಹಲಕ್ಷ್ಮಿ ಯೋಜನೆಯಡಿ ಫಲಾನುಭವಿಗಳು ಮಾಸಿಕ 2,000 ರೂ. ಆರ್ಥಿಕ ನೆರವನ್ನು ತಮ್ಮ ಹಕ್ಕು ಎಂದು ಪ್ರತಿಪಾದಿಸುವಂತಿಲ್ಲ ಎಂದು ರಾಜ್ಯ ಸರ್ಕಾರ ಕರ್ನಾಟಕ ಹೈಕೋರ್ಟ್‌ಗೆ ತಿಳಿಸಿದೆ. ಯೋಜನೆಯ ಅನುಷ್ಠಾನವು ಆಡಳಿತಾತ್ಮಕ ಅನಿವಾರ್ಯ ಹಾಗೂ ರಾಜ್ಯದ ಆರ್ಥಿಕ ಪರಿಸ್ಥಿತಿಗೆ ಒಳಪಟ್ಟಿರುತ್ತದೆ ಎಂದು ಸರ್ಕಾರ ವಾದಿಸಿದೆ.

ಗೃಹಲಕ್ಷ್ಮಿ ಯೋಜನೆಯಡಿ 1.26 ಕೋಟಿ ಮಹಿಳಾ ಫಲಾನುಭವಿಗಳಿಗೆ 2025ರ ಫೆಬ್ರವರಿ ಮತ್ತು ಮಾರ್ಚ್ ಎರಡು ಕಂತುಗಳ ತಲಾ 2,000 ಸಹಾಯಧನದ ಒಟ್ಟು 5,000 ಕೋಟಿ ಬಾಕಿ ಬಿಡುಗಡೆ ಮಾಡಲು ರಾಜ್ಯ ಸರ್ಕಾರ ವಿಫಲವಾಗಿದೆ ಎಂದು ಆಕ್ಷೇಪಿಸಿ ಬೆಂಗಳೂರಿನ ಆರ್. ಗಂಗಾ ಮತ್ತು ಜಿ.ಡಿ. ಪವಿತ್ರಾ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಅನು ಶಿವರಾಮನ್ ಮತ್ತು ಕೆ.ಎಸ್. ಭರತ್ ಕುಮಾರ್ ಅವರ ವಿಭಾಗೀಯ ಪೀಠ ನಡೆಸಿತು. ಯೋಜನೆಯ ಅನುಷ್ಠಾನವು ಆಡಳಿತಾತ್ಮಕ ಅನಿವಾರ್ಯತೆಗಳು ಮತ್ತು ರಾಜ್ಯದ ಆರ್ಥಿಕ ಸಂಕಷ್ಟಗಳಿಗೆ ಒಳಪಟ್ಟಿರುತ್ತದೆ ಎಂದು ರಾಜ್ಯ ಸರ್ಕಾರ ತನ್ನ ಆಕ್ಷೇಪಣೆಯಲ್ಲಿ ತಿಳಿಸಿದೆ.

ಯೋಜನೆಯ ಅನುಷ್ಠಾನವು ಬಹುಮಟ್ಟಿಗೆ ಆಡಳಿತಾತ್ಮಕ ಅನಿವಾರ್ಯತೆಗಳನ್ನು ಅವಲಂಬಿಸಿರುತ್ತದೆ. ಆದ್ದರಿಂದ, ಫಲಾನುಭವಿಗಳು ಇದನ್ನು ತಮ್ಮ ಹಕ್ಕು ಎಂದು ಪರಿಗಣಿಸಿ ನ್ಯಾಯಾಂಗ ಮಧ್ಯಪ್ರವೇಶದ ಮೂಲಕ ಯೋಜನೆಯನ್ನು ಜಾರಿಗೊಳಿಸುವಂತೆ ಕೋರುವಂತಿಲ್ಲ ಎಂದು ಸರ್ಕಾರ ತನ್ನ ಆಕ್ಷೇಪಣೆಯಲ್ಲಿ ತಿಳಿಸಿದೆ.

2025ರ ಫೆಬ್ರವರಿ ಮತ್ತು ಮಾರ್ಚ್ ತಿಂಗಳ ಗೃಹಲಕ್ಷ್ಮಿ ಸಹಾಯಧನವನ್ನು ಆರ್ಥಿಕ ಸಂಕಷ್ಟದ ಕಾರಣದಿಂದ ಬಿಡುಗಡೆ ಮಾಡಿಲ್ಲ ಎಂಬ ಸರ್ಕಾರದ ಒಪ್ಪಿಗೆಯ ಹಿನ್ನೆಲೆಯಲ್ಲಿ ಈ ಆಕ್ಷೇಪಣೆ ಸಲ್ಲಿಸಲಾಗಿದೆ. ಈ ಎರಡು ತಿಂಗಳ ಸಹಾಯಧನ ಬಿಡುಗಡೆಗೆ ಸಂಬಂಧಿಸಿದ ಪ್ರಸ್ತಾವನೆಗಳನ್ನು ಹಣಕಾಸು ಇಲಾಖೆಗೆ ಸಲ್ಲಿಸಲಾಗಿತ್ತು. ಆದರೆ, ಅಗತ್ಯ ಅನುದಾನ ಬಿಡುಗಡೆಯಾಗಿರಲಿಲ್ಲ ಎಂದು ಸರ್ಕಾರ ತನ್ನ ಆಕ್ಷೇಪಣೆಯಲ್ಲಿ ತಿಳಿಸಿದೆ.

ಹೀಗಾಗಿ, ಕಾನೂನಿನ ದೃಷ್ಟಿಯಿಂದ ಅಥವಾ ವಾಸ್ತವಾಂಶಗಳ ಆಧಾರದ ಮೇಲೆ ಅರ್ಜಿ ವಿಚಾರಣೆಗೆ ಯೋಗ್ಯವಲ್ಲ ಎಂದು ವಾದಿಸಿರುವ ರಾಜ್ಯ ಸರ್ಕಾರ, ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ವಜಾಗೊಳಿಸುವಂತೆ ಕೋರಿದೆ. ರಾಜ್ಯ ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ತಾರಾನಾಥ್ ಪೂಜಾರಿ ಆಕ್ಷೇಪಣಾ ಹೇಳಿಕೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದರು.ಸರ್ಕಾರದ ವಾದ ಆಲಿಸಿದ ವಿಭಾಗೀಯ ಪೀಠವು, ಅರ್ಜಿದಾರರ ಪರ ವಕೀಲರಿಗೆ ಸರ್ಕಾರದ ಆಕ್ಷೇಪಣೆಗೆ ಪ್ರತ್ಯುತ್ತರ ಸಲ್ಲಿಸಲು ಎರಡು ವಾರಗಳ ಕಾಲಾವಕಾಶ ನೀಡಿದೆ.

ಗ್ರಾಮೀಣ ಭಾಗದ ಕೋಟ್ಯಂತರ ಜನರಿಗೆ ಅವಮಾನ: ಕ್ಷಮೆಯಾಚಿಸುವಂತೆ ಖರ್ಗೆಗೆ ರವಿಕುಮಾರ್ ಆಗ್ರಹ



ಬೆಂಗಳೂರು, ನ.5: ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ವಿರುದ್ಧ ವಾಗ್ದಾಳಿ ನಡೆಸುವ ಸಂದರ್ಭದಲ್ಲಿ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಬಳಸಿರುವ ಅವಹೇಳನಕಾರಿ ಹೇಳಿಕೆ ಯನ್ನು ತೀವ್ರವಾಗಿ ಖಂಡಿಸುತ್ತೇನೆ. ಗ್ರಾಮೀಣ ಭಾಗದ ಕೋಟ್ಯಂತರ ಜನರಿಗೆ ಅವಮಾನ ಮಾಡಿದ ಪ್ರಿಯಾಂಕ್ ಖರ್ಗೆ ಕ್ಷಮೆಯಾಚಿಸಬೇಕು ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ಆಗ್ರಹಿಸಿದ್ದಾರೆ.

ನೀವು ಹಳ್ಳಿಯ ಗುಗ್ಗುನಾ ಎಂಬ ಪ್ರಶ್ನೆ ಕೇಳಿದ್ದಾರೆ. ಈ ಆಕ್ಷೇಪಾರ್ಹ ಹೇಳಿಕೆಯ ಮೂಲಕ ಪ್ರಿಯಾಂಕ್ ಖರ್ಗೆ ಅವರು ದೇಶದ ಕೋಟ್ಯಂತರ ಗ್ರಾಮೀಣ ಜನರಿಗೆ ಅವಮಾನ ಮಾಡಿದ್ದಾರೆ. ಅವರ ಹೇಳಿಕೆಯ ಅರ್ಥವೇನು ಹಳ್ಳಿಯಲ್ಲಿ ವಾಸಿಸುವವರೆಲ್ಲರೂ ದಡ್ಡರು ಎಂದು ನಿಂದಿಸಿದ್ದಾರೆ. ಇಂತಹ ಹೇಳಿಕೆ ಖಂಡನೀಯವಾಗಿದ್ದು, ಪ್ರಿಯಾಂಕ್ ಖರ್ಗೆ ಅವರು ಸಾರ್ವಜನಿಕವಾಗಿ ತಮ್ಮ ಹೇಳಿಕೆಗೆ ಕ್ಷಮೆಯಾಚಿಸಬೇಕು ಎಂದಿದ್ದಾರೆ.

ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಅವರು, 2023ರಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲು ಇದೇ ಗ್ರಾಮೀಣ ಭಾಗದ ಕೋಟ್ಯಂತರ ಜನರು ಮತ ಚಲಾಯಿಸಿದ್ದಾರೆ ಎಂಬುದನ್ನು ಖರ್ಗೆ ಪುತ್ರ ನೆನಪಿಟ್ಟುಕೊಳ್ಳಲಿ. ಗ್ರಾಮೀಣ ಜನರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ಪ್ರಿಯಾಂಕ್ ಖರ್ಗೆ ಅವರು ಯಾವುದೇ ಷರತ್ತಿಲ್ಲದೆ, ಮುಕ್ತ ಮನಸ್ಸಿನಿಂದ ಕೋಟ್ಯಂತರ ಗ್ರಾಮೀಣ ಜನರ ಕ್ಷಮೆಯಾಚಿಸ ಬೇಕೆಂದು ನಾನು ಆಗ್ರಹಿಸುತ್ತೇನೆ. ನಾನು ಚಿತ್ರದುರ್ಗ ಜಿಲ್ಲೆಯ ದೂರದ ಹಳ್ಳಿಯಿಂದ ಬಂದವನು. ನನ್ನ ಗ್ರಾಮೀಣ ಹಿನ್ನೆಲೆಯ ಬಗ್ಗೆ ನನಗೆ ಹೆಮ್ಮೆಯಿದೆ ಎಂದು ರವಿ ಕುಮಾರ್ ಹೇಳಿದ್ದಾರೆ.

ಶಕ್ತಿವಾಹಿನಿ ಕನ್ನಡ ಬಳಗ-ಕರ್ನಾಟಕ ವಿದ್ಯುತ್ ನಿಗಮದಿಂದ ಕನ್ನಡ ರಾಜ್ಯೋತ್ಸವ

ಮನುಷ್ಯನನ್ನು ಮನುಷ್ಯನಂತೆ ಕಾಣುವ ಏಕೈಕ ಭಾಷೆ ಕನ್ನಡ: ನಾಗಾಭರಣ ಬಣ್ಣನೆ



ಬೆಂಗಳೂರು, ನ.5: ಮನುಷ್ಯನನ್ನು ಮನುಷ್ಯನಂತೆ ಕಾಣುವ ವಿಶ್ವದ ಏಕೈಕ ಭಾಷೆ ಕನ್ನಡ ಎಂದು ಚಲನಚಿತ್ರ ನಿರ್ದೇಶಕ, ರಂಗಕರ್ಮಿ ಟಿ.ಎಸ್.ನಾಗಾಭರಣ ಹೇಳಿದ್ದಾರೆ.

71ನೇ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಮಾತನಾಡಿದ ನಾಗಾಭರಣ, 'ಮಾನವತಾವಾದಿಗಳಾಗಿ ಮನುಷ್ಯತ್ವವನ್ನು ಕಾಪಾಡಿಕೊಂಡು ಬಂದ ಭಾಷೆ ಕನ್ನಡವಾದರೆ, ವಿಶ್ವ ಮಾನವತ್ವ ಹಾಗೂ ಮನುಜ ಮತ ಸಂದೇಶ ಸಾರಿದವರು ಕನ್ನಡ ಭಾಷಿಕರು' ಎಂದು ಅಭಿಪ್ರಾಯಪಟ್ಟರು.

'ಸಾಹಿತ್ಯ, ಸಂಸ್ಕಾರ ಸೇರಿದಂತೆ ಎಲ್ಲವನ್ನೂ ಒಳಗೊಳ್ಳುವ, ಎಲ್ಲರೊಡನೆ ಬೆರೆತು ಜೀವಿಸುವ ಮನಸ್ಥಿತಿಯಲ್ಲಿ ಬೆಳೆದವರು ಕನ್ನಡಿಗರು. ಅದೇ ರೀತಿ ಮನುಷ್ಯತ್ವ ನಿರಂತರವಾಗಿ ಪ್ರವಹಿಸುವ ನದಿ ಕನ್ನಡ ಭಾಷೆ. ಮಾತಾಡುವ ಎಲ್ಲವನ್ನೂ ಪದಗಳಲ್ಲಿ ಜೋಡಿಸಬಹುದಾದ ಭಾಷೆ ಜಗತ್ತಿನಲ್ಲಿ ಇದೆ ಎಂದಾದರೆ ಅದು ಕನ್ನಡ ಮಾತ್ರ' ಎಂದು ಹೇಳಿದರು.

'ಕಚೇರಿಗಳಲ್ಲಿ ಕನ್ನಡ ಬಳಕೆಯನ್ನು ಹೆಚ್ಚಿಸಬೇಕು. ಹೊಸ ಕನ್ನಡ ಪದಗಳನ್ನು ಬಳಸುವ ಮೂಲಕ ಭವಿಷ್ಯದಲ್ಲಿ ಕನ್ನಡವನ್ನು ಇನ್ನಷ್ಟು ಉತ್ತುಂಗಕ್ಕೆ ಕೊಂಡೊಯ್ಯಬೇಕು. ಹಿಂದಿ ಮತ್ತು ಆಂಗ್ಲಭಾಷೆಯಂತೆ ಕನ್ನಡವನ್ನೂ ಸಮಾನ ಅವಕಾಶದ ಭಾಷೆಯಾಗಿ ಬೆಳೆಸಬೇಕು. ಕನ್ನಡದ ಜತೆ ನಮ್ಮ ಬೆಳವಣಿಗೆ ಇರಬೇಕು' ಎಂದು ತಿಳಿಸಿದರು.

ಕಡತಗಳು ಕನ್ನಡದಲ್ಲಿರಬೇಕು: ಅಧ್ಯಕ್ಷತೆ ವಹಿಸಿದ್ದ ಕವಿನಿನಿ ವ್ಯವಸ್ಥಾಪಕ ನಿರ್ದೇಶಕ ರಾಜೇಂದ್ರ ಚೋಳನ್ ಪಿ. ಮಾತನಾಡಿ, 'ನಿಗಮದಲ್ಲಿ ನಿಯಮಿತ ಕಡತಗಳು ಕನ್ನಡದಲ್ಲಿ ಇರುವಂತೆ ಗಮನಹರಿಸಲಾಗುವುದು. ಕನ್ನಡಪರ ಚಟುವಟಿಕೆಗಳಿಗೆ ಹೆಚ್ಚಿನ ಸಹಕಾರ ನೀಡಲಾಗುವುದು' 'ಹೊರರಾಜ್ಯ ಅಥವಾ ರಾಷ್ಟ್ರಗಳಿಂದ ಯಾರೇ ಬಂದರೂ ಅವರನ್ನು ನಮ್ಮವರು ಎಂದು ಪರಿಗಣಿಸಿ ಕನ್ನಡಿಗರು ತೋರುವ ಪ್ರೀತಿಯೇ ಅನ್ಯರು ಕರ್ನಾಟಕವನ್ನು ತಮ್ಮ ಕಾರ್ಯಕ್ಷೇತ್ರವಾಗಿ ಆರಿಸಿಕೊಳ್ಳಲು ಪ್ರಮುಖ ಕಾರಣ. ನನಗೂ ಇದರ ಅನುಭವವಾಗಿದೆ ಎಂದರು.

ಶ್ರೀ ನಾರಾಯಣ ಗುರು ಅಭಿವೃದ್ಧಿ ನಿಗಮದ ನೂತನ ವೆಬ್‌ಸೈಟ್ ಲೋಕಾರ್ಪಣೆ ಮಾಡಿದ ಸಚಿವ ಮಧು ಬಂಗಾರಪ್ಪ



ಬೆಂಗಳೂರು, ನ.5: ಶ್ರೀ ನಾರಾಯಣ ಗುರು ಅಭಿವೃದ್ಧಿ ನಿಗಮದ ಯೋಜನೆ, ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡುವ ನಿಗಮದ ವೆಬ್‌ಸೈಟ್ ಗುರುವಾರ ಲೋಕಾರ್ಪಣೆಗೊಂಡಿದೆ. ಇದರಿಂದ ನಿಗಮದ ಚುಟವಟಿಕೆಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಲು ವೇದಿಕೆ ದೊರೆತಂತಾಗಿದೆ.

ಸರ್ಕಾರದ ವಿವಿಧ ಯೋಜನೆಗಳು ಹಾಗೂ ಕಾರ್ಯಕ್ರಮಗಳ ಮಾಹಿತಿಯನ್ನು ಸಮುದಾಯದ ಜನರಿಗೆ ಸುಲಭವಾಗಿ ತಲುಪಿಸುವ ಉದ್ದೇಶದಿಂದ ನೂತನ ವೆಬ್‌ಸೈಟ್ ಆರಂಭಿಸಲಾಗಿದೆ. ಇನ್ನು ಮುಂದೆ ಸರ್ಕಾರದ ಪ್ರತಿಯೊಂದು ಕಾರ್ಯಕ್ರಮ ಹಾಗೂ ಸೌಲಭ್ಯಗಳ ಮಾಹಿತಿ ಈ ವೆಬ್‌ಸೈಟ್‌ನಲ್ಲಿ ಲಭ್ಯವಾಗಲಿದೆ. ಸಮುದಾಯದ ಜನರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಹಿಂದುಳಿದ ವರ್ಗಗಳ ಕಲ್ಯಾಣಕ್ಕೆ ಸರ್ಕಾರ ಬದ್ಧವಾಗಿದ್ದು, ನಿಗಮಕ್ಕೆ ಅಗತ್ಯ ಅನುದಾನ ಒದಗಿಸಲು ಪ್ರಾಮಾಣಿಕವಾಗಿ ಶ್ರಮಿಸುವೆ. ನಾರಾಯಣ ಗುರುಗಳ ಆಶಯದಂತೆ ಪ್ರತಿಯೊಬ್ಬರೂ ಶಿಕ್ಷಣ ಪಡೆಯಬೇಕು. ಸಮಾಜದಲ್ಲಿ ಸಮಾನತೆ ಮತ್ತು ಸಾಮರಸ್ಯವನ್ನು ಕಾಪಾಡಿ ಕೊಳ್ಳುವುದು ಅತ್ಯಂತ ಮುಖ್ಯವಾಗಿದೆ. ನಾರಾಯಣ ಗುರುಗಳ ಚಿಂತನೆ ಹಾಗೂ ಆದರ್ಶಗಳನ್ನು ಸಾಕಾರ ಗೊಳಿಸಲು ಎಲ್ಲರೂ ಕೈಜೋಡಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ಯು.ಟಿ. ಖಾದರ್, ಶ್ರೀ ನಾರಾಯಣ ಗುರು ಅಭಿವೃದ್ಧಿ ನಿಗಮದ ನೂತನ ವೆಬ್‌ಸೈಟ್ ಮೂಲಕ ಸರ್ಕಾರದ ಯೋಜನೆಗಳು, ಶೈಕ್ಷಣಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳ ಮಾಹಿತಿ ಲಭ್ಯವಾಗಲಿದೆ. ಸಮುದಾಯದ ಜನರು ವೆಬ್‌ಸೈಟ್ ಬಳಸಿಕೊಂಡು ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಳ್ಳಬೇಕು ಎಂದರು. ನಿಗಮದ ಅಧ್ಯಕ್ಷ ಮಂಜುನಾಥ್ ಪೂಜಾರಿ ಮಾತನಾಡಿ, ಸಚಿವ ಮಧು ಬಂಗಾರಪ್ಪ ಹಾಗೂ ಸಚಿವ ಯು.ಟಿ. ಖಾದರ್ ಅವರು ನೂತನ ವೆಬ್‌ಸೈಟ್‌ಗೆ ಚಾಲನೆ ನೀಡಿದ್ದಾರೆ. 26 ಪಂಗಡಗಳನ್ನು ಒಳಗೊಂಡಿರುವ ನಾರಾಯಣ ಗುರು ಅಭಿವೃದ್ಧಿ ನಿಗಮ ಹಮ್ಮಿಕೊಳ್ಳುವ ವಿವಿಧ ಕಾರ್ಯಕ್ರಮಗಳು ಹಾಗೂ ಸರ್ಕಾರದ ಯೋಜನೆಗಳ ಸಂಪೂರ್ಣ ಮಾಹಿತಿ ವೆಬ್‌ಸೈಟ್‌ನಲ್ಲಿ ಲಭ್ಯ ವಾಗಲಿದೆ. ನಿಗಮದ ಕಾರ್ಯಗಳಿಗೆ ಮಧು ಬಂಗಾರಪ್ಪ ಬೆಂಬಲವಾಗಿ ನಿಂತಿದ್ದಾರೆ ಎಂದರು.

ಸರ್ಕಾರಿ ಶಾಲೆಗಳಲ್ಲಿ ದಕ್ಷ ಶಿಕ್ಷಕರು, ಮೂಲಸೌಕರ್ಯ ಕೊರತೆ: ಸರ್ಕಾರಕ್ಕೆ ಚಾಟಿ ಬೀಸಿದ ಸಿಎಂ ಪುತ್ರಿ ಐಶ್ವರ್ಯಾ

ಬೆಂಗಳೂರು, ನ.5: ಸರ್ಕಾರಿ ಶಾಲೆಗಳಲ್ಲಿ ನೈರ್ಮಲೀಕರಣ, ಮೂಲಸೌಕರ್ಯ, ಸಾರಿಗೆ ವ್ಯವಸ್ಥೆ ಹಾಗೂ ದಕ್ಷ ಶಿಕ್ಷಕರ ತೀವ್ರ ಕೊರತೆಯಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪುತ್ರಿ ಹಾಗೂ ನ್ಯಾಷನಲ್ ಎಜುಕೇಷನ್ ಫೌಂಡೇಷನ್ ಟ್ರಸ್ಟಿ ಕಾರ್ಯದರ್ಶಿ ಐಶ್ವರ್ಯಾ ಡಿಕೆಎಸ್ ಹೆಗ್ಡೆ ಸರ್ಕಾರದ ಮುಖಂಡರ ಎದುರಲ್ಲೇ ಖಾರವಾಗಿ ಚಾಟಿ ಬೀಸಿದ್ದಾರೆ.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಆಯೋಜಿಸಿದ್ದ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಪ್ರತಿನಿಧಿಗಳ ಸಭೆಯಲ್ಲಿ ಮಾತನಾಡಿದ ಅವರು, ಸರ್ಕಾರಿ ಶಾಲಾ ವ್ಯವಸ್ಥೆಯ ಕಹಿ ವಾಸ್ತವವನ್ನು ತೆರೆದಿಟ್ಟರು.

ತಮ್ಮ ಅನುಭವವನ್ನು ಹಂಚಿಕೊಂಡ ಐಶ್ವರ್ಯಾ, "ನಾವು ದೊಡ್ಡಾಲಹಳ್ಳಿ ಶಾಲೆಯನ್ನು ದತ್ತು ತೆಗೆದುಕೊಂಡಾಗ 400 ವಿದ್ಯಾರ್ಥಿಗ ಳಿದ್ದರು. ಸಂಘ–ಸಂಸ್ಥೆಗಳು ನೀಡಿದ್ದ ಕಂಪ್ಯೂಟರ್, ರೊಬೊಟಿಕ್ಸ್ ಮತ್ತು ಐಟಿ ಲ್ಯಾಬ್‌ಗಳಿದ್ದರೂ ಅವುಗಳನ್ನು ಬೋಧಿಸಲು ಶಿಕ್ಷಕರೇ ಇರಲಿಲ್ಲ. ಪರಿಣಾಮವಾಗಿ ಕೋಟ್ಯಂತರ ರೂಪಾಯಿ ಮೌಲ್ಯದ ಕಂಪ್ಯೂಟರ್‌ಗಳು ತುಕ್ಕು ಹಿಡಿದಿದ್ದವು. ಸರ್ಕಾರ ಕೇವಲ ಉಪಕರಣಗಳನ್ನು ನೀಡಿ ಸುಮ್ಮನಾದರೆ ಸಾಲದು, ನೀಡಿದ ಸಂಪನ್ಮೂಲಗಳು ಸರಿಯಾಗಿ ಬಳಕೆಯಾಗುತ್ತಿವೆಯೇ ಎಂದು ನಿಯಮಿತವಾಗಿ ಆಡಿಟ್ ಮಾಡಬೇಕು" ಎಂದು ಒತ್ತಾಯಿಸಿದರು.

ಶಾಲೆಗಳಲ್ಲಿ ನೈರ್ಮಲ್ಯ ಹಾಗೂ ಕನಿಷ್ಠ ಸೌಲಭ್ಯಗಳ ಕೊರತೆ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ ಅವರು, "ಶಾಲೆಗಳಲ್ಲಿ ಶೌಚಾಲಯಗಳಿದ್ದರೂ ನೈರ್ಮಲೀಕರಣ ಮಾಡುವ ಸಿಬ್ಬಂದಿ ಯಿಲ್ಲದೆ ಅವು ಬಳಕೆಗೆ ಬಾರದಂತಾಗಿವೆ. ಹೆಣ್ಣು ಮಕ್ಕಳಿಗೆ ಸ್ಯಾನಿಟರಿ ಪ್ಯಾಡ್‌ಗಳನ್ನು ವಿಲೇವಾರಿ ಮಾಡಲು ಸೂಕ್ತ ವ್ಯವಸ್ಥೆ ಯಿಲ್ಲ ಹಾಗೂ ಶುದ್ಧ ಕುಡಿಯುವ ನೀರಿನ ಅಭಾವವಿದೆ. ಸ್ವಚ್ಛತೆ ಹಾಗೂ ಕನಿಷ್ಠ ಸೌಕರ್ಯಗಳನ್ನು ನಿರ್ವಹಿಸು ವುದು ಸರ್ಕಾರದ ಪ್ರಾಥಮಿಕ ಜವಾಬ್ದಾರಿ ಯಾಗಿದೆ. ಸ್ವಂತ ಮನೆಯನ್ನೇ ಸ್ವಚ್ಛಗೊಳಿಸದಿದ್ದರೆ ಹಾಳಾಗುತ್ತದೆ, ಇನ್ನು ಲಕ್ಷಾಂತರ ಮಕ್ಕಳು ಓದುವ ಶಾಲೆಗಳ ಸ್ಥಿತಿ ಏನಾಗಬೇಡ ಎಂದು ಪ್ರಶ್ನಿಸಿದರು.

ಗೌರವಧನಕ್ಕೆ ದುಡಿಯುವ ಅತಿಥಿಶಿಕ್ಷಕರಿಂದ



ದಕ್ಷತೆ ನಿರೀಕ್ಷಿಸುವುದು ಸಾಧ್ಯವಿಲ್ಲ: ಶಿಕ್ಷಕರ ಕಾರ್ಯಕ್ಷಮತೆ ಹಾಗೂ ವೇತನದ ಬಗ್ಗೆ ಮಾತನಾಡಿದ ಅವರು, "ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಕೊರತೆಗಿಂತ ಅವರಲ್ಲಿನ ದಕ್ಷತೆ ಮತ್ತು ಸಂವಹನದ ಕೊರತೆ ದೊಡ್ಡ ಸಮಸ್ಯೆಯಾಗಿದೆ. ಲಕ್ಷಕ್ಕೂ ಹೆಚ್ಚು ಸಂಬಳ ಪಡೆಯುವ ಶಿಕ್ಷಕರು ವಾರದಲ್ಲಿ ಐದು ದಿನ ಸರಿಯಾಗಿ ಶಾಲೆಗೆ ಬರುವುದಿಲ್ಲ. ಇನ್ನೊಂದೆಡೆ, ಸರ್ಕಾರ ನೀಡುವ 11,000 ಗೌರವಧನಕ್ಕೆ ದುಡಿಯುವ ಅತಿಥಿ ಶಿಕ್ಷಕರಿಂದ ಹೆಚ್ಚಿನ ದಕ್ಷತೆ ನಿರೀಕ್ಷಿಸಲು ಸಾಧ್ಯವಿಲ್ಲ. ಹೀಗಾಗಿ, ನಮ್ಮ ಸಂಸ್ಥೆಯಿಂದ ಅತಿಥಿ ಶಿಕ್ಷಕರಿಗೆ ಹೆಚ್ಚುವರಿ ವೇತನ ನೀಡಿದಾಗ ಅವರ ಕಾರ್ಯಕ್ಷಮತೆ ಹೆಚ್ಚಾಯಿತು. ಸಿಬ್ಬಂದಿಗೆ ಸೂಕ್ತ ಪ್ರೋತ್ಸಾಹ ಸಿಕ್ಕಾಗ ಮಾತ್ರ ಅವರು ಶಾಲೆಯನ್ನು ದೇವಾಲಯದಂತೆ ಗೌರವಿಸುತ್ತಾರೆ ಎಂದು ಐಶ್ವರ್ಯಾ ಹೇಳಿದರು. ಕೊನೆಯದಾಗಿ ಸರ್ಕಾರಿ ಶಿಕ್ಷಣ ವ್ಯವಸ್ಥೆಯನ್ನು ಸುಧಾರಿಸಲು ಹಲವು ಮಹತ್ವದ ಸಲಹೆಗಳನ್ನು ನೀಡಿದ ಐಶ್ವರ್ಯಾ, ಶಾಲೆಗಳಲ್ಲಿ ಪಾಠ ಮತ್ತು ಊಟದ ಜೊತೆಗೆ ಆಟಕ್ಕೂ ಆದ್ಯತೆ ನೀಡಬೇಕು ಎಂದರು.

ಶಿಕ್ಷಕರು ಕನಿಷ್ಠ 3 ವರ್ಷಗಳ ಕಾಲ ಒಂದೇ ಶಾಲೆಯಲ್ಲಿ ಸೇವೆ ಸಲ್ಲಿಸುವುದನ್ನು ಕಡ್ಡಾಯಗೊಳಿಸಬೇಕು, ಶಾಲಾ ಸಮಯದ ಕಾರ್ಯಾಚರಣೆ ಯಲ್ಲಿ ನಮ್ಯತೆ ಇರಬೇಕು, ಗ್ರಾಮೀಣ ವಿದ್ಯಾರ್ಥಿಗಳಿಗೆ ಸಾರಿಗೆ ಸೌಕರ್ಯ ಕಲ್ಪಿಸಬೇಕು ಹಾಗೂ ಶಿಕ್ಷಕರಲ್ಲಿ ಉತ್ತರದಾಯಿತ್ವ ಮತ್ತು ಸಂವಹನ ಕೌಶಲ್ಯವನ್ನು ಹೆಚ್ಚಿಸಬೇಕು ಎಂದು ಸರ್ಕಾರಕ್ಕೆ ಮನವಿ ಮಾಡಿದರು.

ರಾಗಿ ಕೃಷಿಗೆ ಲಕ್ಷ್ಮಣಯ್ಯ ಕೊಡುಗೆ ಕುರಿತು ವಿಚಾರ ಸಂಕಿರಣ



ಬೆಂಗಳೂರು, ನ.5:ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಸ್ಯಶಾಸ್ತ್ರ ವಿಭಾಗದ ವತಿಯಿಂದ 'ಜನತಾ ವಿಜ್ಞಾನಿ' ರಾಗಿ ಲಕ್ಷ್ಮಣಯ್ಯನವರ ಕೊಡುಗೆ ಕುರಿತು ವಿಚಾರ ಸಂಕಿರಣ ಆಯೋಜಿಸಲಾಗಿತ್ತು. ಕುಲಪತಿ ಪ್ರೊ. ರಮೇಶ್.ಬಿ. ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿ ಸೆಂಟ್ರಲ್ ಕಾಲೇಜು ಕ್ಯಾಂಪಸ್ ವಿಜ್ಞಾನ ಅಧ್ಯಯನ ಮತ್ತು ಸಂಶೋಧನೆಗೆ ಉತ್ತಮ ಸೌಲಭ್ಯಗಳನ್ನು ಕಲ್ಪಿಸಿದ್ದು ವಿದ್ಯಾರ್ಥಿಗಳು ಸದುಪಯೋಗ ಮಾಡಿಕೊಳ್ಳಬೇಕೆಂದು ಸಲಹೆಯಿತ್ತರು.

ಗ್ರಾಮೀಣ ಪ್ರದೇಶದ ಜನರ ಜೀವನಾಧಾರ ಬೆಳೆಯಾದ ರಾಗಿ ಧಾನ್ಯದ ಮಹತ್ವವನ್ನು ವಿವರಿಸಿದ ಅವರು ರಾಗಿ ಲಕ್ಷ್ಮಣಯ್ಯನವರ ಕೊಡುಗೆಗಳನ್ನು ಸ್ಮರಿಸಿದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಸಾಮಾಜಿಕ ಚಿಂತಕ ಮಾವಳ್ಳಿ ಶಂಕರ್ ರಾಜ್ಯದಲ್ಲಿ ರಾಗಿ ಕೃಷಿ ಮತ್ತು ವಿವಿಧ ತಳಿಗಳ ಅಭಿವೃದ್ಧಿಗೆ ಕರ್ನಾಟಕ ಸರ್ಕಾರ ವಿಶೇಷ ಉತ್ತೇಜನ ನೀಡಬೇಕೆಂದು ಒತ್ತಾಯಿಸಿದರು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿವೃತ್ತ ಅಧಿಕಾರಿಗಳಾದ ಡಾ.ಕೆ. ಪುಟ್ಟಸ್ವಾಮಿ, ಪಶುವೈದ್ಯ ಕಾಲೇಜಿನ ನಿವೃತ್ತ ಡೀನರಾದ ಪ್ರೊ.ಎಂ. ನಾರಾಯಣಸ್ವಾಮಿ ಮತ್ತು ಹಿರಿಯ ಪತ್ರಕರ್ತ ರಘುನಾಥ ಚ.ಹ. ರಾಗಿ ಲಕ್ಷ್ಮಣಯ್ಯನವರ ಜೀವನ ಮತ್ತು ಸಾಧನೆ ಹಾಗೂ ಕೃಷಿ ತಳಿ ಅಭಿವೃದ್ಧಿಯಲ್ಲಿ ಅವರ ಕೊಡುಗೆ ಕುರಿತು ವಿಶೇಷ ಉಪನ್ಯಾಸ ನೀಡಿದರು.

ವಿಜ್ಞಾನ ನಿಕಾಯದ ಡೀನರಾದ ಪ್ರೊ. ಪಿ.ಆರ್. ಚೇತನ ಉಪಸ್ಥಿತರಿದ್ದರು. ಸಸ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ಕೆ. ಶಿವಶಂಕರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ, ನೃಪತುಂಗ ವಿಶ್ವವಿದ್ಯಾಲಯ ಮತ್ತು ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಸಸ್ಯಶಾಸ್ತ್ರ ವಿದ್ಯಾರ್ಥಿಗಳೂ ವಿಚಾರ ಸಂಕಿರಣದಲ್ಲಿ ಪಾಲ್ಗೊಂಡಿದ್ದರು.

ಸಿದ್ಧಸಿರಿ ಎಥೆನಾಲ್‌ಗೆ ಕಬ್ಬು ನುರಿಸಲು ಅನುಮತಿ ನೀಡಲು ರೈತರ ಆಗ್ರಹ



ಕಲಬುರಗಿ ಜಿಲ್ಲೆಯ ಚಿಂಚೋಳಿಯ ಸಿದ್ಧಸಿರಿ ಎಥೆನಾಲ್ ಕಾರ್ಖಾನೆಗೆ ಕಬ್ಬು ನುರಿಸಲು ಅನುಮತಿ ನೀಡುವಂತೆ ಆಗ್ರಹಿಸಿ ಕಬ್ಬು ಬೆಳೆಗಾರರೊಂದಿಗೆ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಕಾರ್ಯಕರ್ತರು ಜಿಲ್ಲಧಿಕಾರಿಗಳ ಕಚೇರಿ ಎದುರು ಧರಣಿ ನಡೆಸಿದರು.

ಕಲಬುರಗಿ, ನ. 5: ಜಿಲ್ಲೆಯ ಚಿಂಚೋಳಿಯ ಸಿದ್ಧಸಿರಿ ಎಥೆನಾಲ್ ಕಾರ್ಖಾನೆಗೆ ಕಬ್ಬು ನುರಿಸಲು ಕೂಡಲೇ ಅನುಮತಿ ನೀಡಬೇಕು ಎಂದು ಒತ್ತಾಯಿಸಿ, ಕರ್ನಾಟಕ ರಾಜ್ಯ ರೈತಸಂಘದ ಹಾಗೂ ಹಸಿರುಸೇನೆಯ ಚಿಂಚೋಳಿ ಹಾಗೂ ಕಾಳಗಿ ತಾಲ್ಲೂಕು ಘಟಕದಿಂದ ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಜಿಲ್ಲಾಧಿಕಾರಿ ಕಚೇರಿ ಎದುರಿನ ರಸ್ತೆಯಲ್ಲಿ ಹಲವು ಗಂಟೆಗಳ ಕಾಲ ರಸ್ತೆ ತಡೆದು ರೈತರು ಧರಣಿ ನಡೆಸಿದರು. ಹೋರಾಟದಲ್ಲಿ ಮಾತನಾಡಿದ ಶ್ರೀನಿವಾಸ ಸರಡಗಿಯ ಅಪ್ಪಾರಾವ ದೇವಿಮುತ್ಯಾ, ಚಿಂಚೋಳಿಯ ಸಿದ್ಧಸಿರಿ ಕಾರ್ಖಾನೆ ನೆಚ್ಚಿಕೊಂಡು ಚಿಂಚೋಳಿ ಹಾಗೂ ಕಾಳಗಿಯ ಸಾವಿರಾರು ರೈತರು 25 ಸಾವಿರಕ್ಕೂ ಅಧಿಕ ಎಕರೆಯಲ್ಲಿ ಕಬ್ಬು ಬೆಳೆದಿದ್ದಾರೆ. ಇದೀಗ ಕೇಂದ್ರ ಸರ್ಕಾರ ಎಥೆನಾಲ್ ತಯಾರಿಕೆಗೆ ಕಬ್ಬು ಉಪಯೋಗಿಸಲು 2026ರ ನವೆಂಬರ್‌ನಿಂದ 2027ರ ಅಕ್ಟೋಬರ್ ತನಕ ನಿರ್ಬಂಧ ವಿಧಿಸಿದೆ. ಕಬ್ಬು ನುರಿಸಲು ಕಾರ್ಖಾನೆಗೆ ಅವಕಾಶವೇ ಸಿಗದಿದ್ದರೆ, ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ಕಬ್ಬು ಬೆಳೆದ ರೈತರ ಗತಿಯೇನು? ಎಂದು ಪ್ರಶ್ನಿಸಿದರು.

ಸಕ್ಕರೆ ಮತ್ತು ಎಥೆನಾಲ್ ಎರಡನ್ನೂ ಉತ್ಪಾದಿಸುವ ಕಾರ್ಖಾನೆಗಳಲ್ಲಿ ಎಥೆನಾಲ್ ಉತ್ಪಾದನೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿ, ಸಕ್ಕರೆ ಉತ್ಪಾದನೆ ಮುಂದುವರಿಸಲು ಅವಕಾಶ ಕೊಡಿ. ಆದರೆ, ಬರೀ ಎಥೆನಾಲ್ ಮಾತ್ರವೇ ಉತ್ಪಾದಿಸುವ ಸಿದ್ಧಸಿರಿ ಕಾರ್ಖಾನೆಗೆ ರೈತರ ಕಬ್ಬು ಖರೀದಿಸಿ ನುರಿಸಲು ಅವಕಾಶ ನೀಡದಿರುವುದು ಯಾವ ನ್ಯಾಯ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಇದಕ್ಕೂ ಮುನ್ನ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅಪ್ಪಾರಾವ ದೇವಿಮುತ್ಯಾ, ಜಿಲ್ಲೆಯಲ್ಲಿ ಬರಗಾಲವಿದ್ದು, ರೈತರು ಸಂಕಷ್ಟದಲ್ಲಿದ್ದಾರೆ. ರಾಜ್ಯ ಸರ್ಕಾರ ರೈತರ ಪಾಲಿಗೆ ತಂದೆ–ತಾಯಿ ಇದ್ದಂತೆ. ಕೇಂದ್ರ ಸರ್ಕಾರ ಅಜ್ಜ–ಅಜ್ಜಿ ಇದ್ದಂತೆ. ಇವರಿಬ್ಬರ ಹಗ್ಗಜಗ್ಗಾಟದಲ್ಲಿ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೂಡಲೇ ಪ್ರತಿ ಟನ್ ಕಬ್ಬಿಗೆ 5,500 ರೂ ದರ ನಿಗದಿ ಮಾಡಬೇಕು ಎಂದು ಒತ್ತಾಯಿಸಿದರು. ಪರಿಗಣಿಸಿ, ಸಿದ್ಧಸಿರಿ ಎಥನಾಲ್ ಕಾರ್ಖಾನೆಗೆ ರೈತರ ಕಬ್ಬು ನುರಿಸಲು ಅನುಮತಿ ನೀಡುವಂತೆ ಕೇಂದ್ರ ಸರ್ಕಾರಕ್ಕೆ ತಕ್ಷಣ ಪ್ರಸ್ತಾವ ಸಲ್ಲಿಸಬೇಕು. ಕೇಂದ್ರ ಸರ್ಕಾರದೊಂದಿಗೆ ಪತ್ರ ವ್ಯವಹಾರ ನಡೆಸಿ ಅನುಮತಿ ದೊರಕಿಸಿಕೊಡಬೇಕು ಎಂದು ಆಗ್ರಹಿಸಿದರು.



ದೀಪಾವಳಿ ಹಬ್ಬ ಹತ್ತಿರವಾಗುತ್ತಿರುವ ಹಿನ್ನೆಲೆಯಲ್ಲಿ, ಗುರುವಾರ ಧಾರವಾಡದ ಸುಭಾಷ್ ರಸ್ತೆಯಲ್ಲಿ ಜನರು ದೀಪಾವಳಿಗಾಗಿ ಶಾಪಿಂಗ್ ಮಾಡುತ್ತಿದ್ದರು.

ನ್ಯಾಯಸಭೆಯಲ್ಲಿ ಮೊಳಗಿದ ಅನ್ಯಾಯದ ವಿರುದ್ಧದ ಧ್ವನಿ



ರಾಯಚೂರು, ನ. 5: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಮೇಲಿನ ದೌರ್ಜನ್ಯ ಪ್ರಕರಣಗಳ ತನಿಖೆಯಲ್ಲಿ ವಿಳಂಬ, ಸಾಕ್ಷ್ಯ ನಾಶ, ಅಸ್ಪೃಶ್ಯತೆ ತಡೆಗೆ ನಿರ್ಲಕ್ಷ್ಯ ಹಾಗೂ ಅಧಿಕಾರಿಗಳ ಹೊಣೆಗಾರಿಕೆಯ ಕೊರತೆ. ಇವು ಮಂಗಳವಾರ ನಡೆದ ಜಿಲ್ಲಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಾಮಾಜಿಕ ನ್ಯಾಯ ಸಭೆಯಲ್ಲಿ ಪ್ರಸ್ತಾಪವಾದ ಗಂಭೀರ ವಿಚಾರಗಳು.

ನ್ಯಾಯ ಒದಗಿಸಬೇಕಾದ ವ್ಯವಸ್ಥೆಯ ಕಾರ್ಯವೈಖರಿಯನ್ನೇ ಪ್ರಶ್ನಿಸಿದ ಮುಖಂಡರು, ಪೊಲೀಸ್ ಮತ್ತು ಆಡಳಿತ ಯಂತ್ರದ ನಿಷ್ಕ್ರಿಯತೆಯ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಜಿಲ್ಲಾಡಳಿತ, ಪೊಲೀಸ್ ಇಲಾಖೆ, ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ (ಡಿಸಿಆರ್‌ಇ) ಹಾಗೂ ಸಮಾಜ ಕಲ್ಯಾಣ ಇಲಾಖೆ ಆಶ್ರಯದಲ್ಲಿ ನಡೆದ ಸಭೆಯಲ್ಲಿ, ದೌರ್ಜನ್ಯ ಪ್ರಕರಣಗಳಲ್ಲಿ ಆರೋಪಿಗಳ ಬಂಧನದಿಂದ ಹಿಡಿದು ಸಾಕ್ಷ್ಯ ಸಂರಕ್ಷಣೆ ಮತ್ತು ತನಿಖೆಯವರೆಗೆ ಹಲವು ಹಂತಗಳಲ್ಲಿ ಲೋಪಗಳಾಗುತ್ತಿವೆ ಎಂಬ ಆರೋಪ ಕೇಳಿಬಂದಿತು.

ದಲಿತ ಯುವತಿಯ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಿದ ಪ್ರಕರಣದ ಆರೋಪಿಗಳ ಬಂಧನದಲ್ಲಿ ವಿಳಂಬ ಮಾಡಲಾಗಿದೆ. ಪೆಟ್ರೋಲ್ ಬಂಕ್‌ನಲ್ಲಿ ದಲಿತ ವ್ಯಕ್ತಿಯ ಹತ್ಯೆ ಪ್ರಕರಣದಲ್ಲಿ ಆರೋಪಿಗಳ ಗುರುತು ಪತ್ತೆಯಾಗದಂತೆ ಸಿಸಿಟಿವಿ ದೃಶ್ಯಾವಳಿಗಳನ್ನು ಅಳಿಸಲಾಗಿದೆ. ಪೊಲೀಸ್ ಇಲಾಖೆಯ ಸಿಬ್ಬಂದಿಯಿಂದಲೇ ಸಾಕ್ಷ್ಯ ನಾಶದಂತಹ ಕೃತ್ಯ ನಡೆದಿರುವ ಆರೋಪಗಳೂ ಸಭೆಯಲ್ಲಿ ಪ್ರಸ್ತಾಪವಾದವು. ಆಡಳಿತ ವ್ಯವಸ್ಥೆಯಲ್ಲಿರುವವರೇ ರಾಜಕೀಯ ಹಿತಾಸಕ್ತಿಗೆ ಆದ್ಯತೆ ನೀಡಿದರೆ ತಳಸಮುದಾಯದವರಿಗೆ ನ್ಯಾಯ ದೊರೆಯುವುದಾದರೂ ಹೇಗೆ ಎಂದು ಮುಖಂಡರು ಪ್ರಶ್ನಿಸಿದರು.

ಡಿಸಿಆರ್‌ಇ ಬಲವರ್ಧನೆಗೆ ಆಗ್ರಹ: ಮಾದಿಗ ಸಮುದಾಯದ ಮುಖಂಡ ಯಲ್ಲಪ್ಪ ಆಲ್ದರ್ತಿ ಮಾತನಾಡಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಇಂದಿಗೂ ಜಾತಿ ವ್ಯವಸ್ಥೆ ಹಾಗೂ ತಾರತಮ್ಯದಿಂದ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಜಾತಿ ವ್ಯವಸ್ಥೆ ಸಂಪೂರ್ಣ ನಿರ್ಮೂಲನೆಗೆ ಅಧಿಕಾರಿಗಳು ಹೊಣೆಗಾರಿಕೆಯಿಂದ ಕಾರ್ಯನಿರ್ವಹಿಸಬೇಕು ಎಂದರು.

ಛಲವಾದಿ ಸಮುದಾಯದ ಮುಖಂಡ ಕೆ.ಇ. ಕುಮಾರ ಮಾತನಾಡಿ, ದೌರ್ಜನ್ಯ ಪ್ರಕರಣಗಳ ತನಿಖೆಯ ಪ್ರಗತಿ ಕುರಿತು ಸಾರ್ವಜನಿಕರಿಗೆ ಕಾಲಕಾಲಕ್ಕೆ ಮಾಹಿತಿ ನೀಡಬೇಕು. ತಾಲ್ಲೂಕು ಮಟ್ಟದ ಡಿಸಿಆರ್‌ಇ ಕಚೇರಿಗಳಿಗೆ ಹೆಚ್ಚಿನ ಸಿಬ್ಬಂದಿ ಮತ್ತು ಮೂಲ ಸೌಕರ್ಯ ಒದಗಿಸಬೇಕು ಎಂದು ಒತ್ತಾಯಿಸಿದರು.

ವಾಲ್ಮೀಕಿ ಸಮುದಾಯದ ಮುಖಂಡ ವೆಂಕಟೇಶ ನಾಯಕ ಮಾತನಾಡಿ, ಡಿಸಿಆರ್‌ಇ ವಿಭಾಗದಲ್ಲಿ ಒಂದೇ ವಾಹನ ಇರುವುದರಿಂದ ಪ್ರಕರಣಗಳ ತನಿಖೆ ಹಾಗೂ ಸ್ಥಳ ಪರಿಶೀಲನೆಗೆ ತೊಂದರೆಯಾಗುತ್ತಿದೆ. ಕನಿಷ್ಠ ಮೂರು ವಾಹನಗಳನ್ನು ಒದಗಿಸಬೇಕು ಎಂದು ಮನವಿ ಮಾಡಿದರು.

ವಾಲ್ಮೀಕಿ ಸಮಾಜದ ಮುಖಂಡ ಎನ್. ರಘುವೀರ್ ನಾಯಕ ಮಾತನಾಡಿ, ಘಟನೆಗಳ ನೈಜ ಕಾರಣಗಳನ್ನು ಪೊಲೀಸ್ ಇಲಾಖೆ ಸಾರ್ವಜನಿಕರಿಗೆ ಸ್ಪಷ್ಟಪಡಿಸಬೇಕು. ವೈಯಕ್ತಿಕ ವಿಚಾರಗಳನ್ನು ಸಮುದಾಯಗಳ ನಡುವಿನ ಸಂಘರ್ಷವಾಗಿ ಬಿಂಬಿಸಬಾರದು. ನಿಷ್ಪಕ್ಷಪಾತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದರು.

ಜಾತಿಗೆ ಸೀಮಿತಗೊಳಿಸಬೇಡಿ: ಸಮಾಜ ಸುಧಾರಕರು ಮತ್ತು ಮಹಾಪುರುಷರ ಜಯಂತಿ ಆಚರಣೆ ಸಂದರ್ಭದಲ್ಲೂ ಜಿಲ್ಲಾಡಳಿತ ತಾರತಮ್ಯದ ಧೋರಣೆ ಅನುಸರಿಸುತ್ತಿದೆ ಎಂಬ ಆಕ್ಷೇಪ ವ್ಯಕ್ತವಾಯಿತು. ಆಯಾ ಸಮುದಾಯದ ಮುಖಂಡರಿಗೆ ಮಾತ್ರ ಆಹ್ವಾನ ನೀಡುವ ಮೂಲಕ ಸಮುದಾಯಗಳ ನಡುವೆ ಬಿರುಕು ಮೂಡಿಸುವ ಕೆಲಸವಾಗುತ್ತಿದೆ. ಮಹಾಪುರುಷರನ್ನು ನಿರ್ದಿಷ್ಟ ಜಾತಿ ಅಥವಾ ಸಮುದಾಯಕ್ಕೆ ಸೀಮಿತಗೊಳಿಸುವ ಪ್ರವೃತ್ತಿಗೆ ಕಡಿವಾಣ ಹಾಕಬೇಕು ಎಂದು ಒತ್ತಾಯಿಸಿದರು.

ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಸಂಖ್ಯೆ ಗಣನೀಯವಾಗಿದ್ದರೂ ಹಲವು ಗ್ರಾಮಗಳಲ್ಲಿ ಅಸ್ಪೃಶ್ಯತೆ ಇನ್ನೂ ಜೀವಂತವಾಗಿದೆ. ಈ ಬಗ್ಗೆ ಅಧಿಕಾರಿಗಳಿಗೆ ಮಾಹಿತಿ ಇದ್ದರೂ ಪರಿಣಾಮಕಾರಿಯಾಗಿ ತಡೆಯಲು ಮುಂದಾಗುತ್ತಿಲ್ಲ ಎಂಬ ಆರೋಪವೂ ಕೇಳಿಬಂದಿತು. ಕಾನೂನು ಇದ್ದರೂ ಸಾಮಾಜಿಕ ತಾರತಮ್ಯ ಮುಂದುವರಿದಿರುವುದು ಆಡಳಿತದ ಕಾರ್ಯಕ್ಷಮತೆಯ ಬಗ್ಗೆ ಪ್ರಶ್ನೆ ಮೂಡಿಸಿದೆ ಎಂದು ಮುಖಂಡರು ಅಭಿಪ್ರಾಯಪಟ್ಟರು.

ಗ್ಯಾರಂಟಿ ಸರ್ಕಾರವಲ್ಲ, ರಾಬರಿ ಸರ್ಕಾರ: ಬೆಲೆ ಏರಿಕೆಗೆ ಶಾಸಕ ಸುನೀಲ್ ಕುಮಾರ್ ಖಂಡನೆ



ಉಡುಪಿ, ನ.5: ರಾಜ್ಯದಲ್ಲಿ ಹಾಲಿನ ದರ ಏರಿಕೆಯ ಬೆನ್ನಲ್ಲೇ ಬಸ್ ಪ್ರಯಾಣ ದರವನ್ನೂ ಶೇ. 23ರಿಂದ 35ರಷ್ಟು ಹೆಚ್ಚಿಸಿರುವುದನ್ನು ಖಂಡಿಸಿರುವ ಕಾರ್ಕಳ ಶಾಸಕ ವಿ. ಸುನಿಲ್ ಕುಮಾರ್, ಕಾಂಗ್ರೆಸ್ ಸರ್ಕಾರವನ್ನು ಗ್ಯಾರಂಟಿ ಸರ್ಕಾರವಲ್ಲ, ರಾಬರಿ ಸರ್ಕಾರ ಎಂದು ಟೀಕಿಸಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ಒಂದು ಲೀಟರ್ ಹಾಲಿಗೆ ರೂ 8 ಹೆಚ್ಚಳ ಮಾಡಿ ವಾರ ಕಳೆಯುವುದರೊಳಗೆ ಬಸ್ ಪ್ರಯಾಣ ದರದಲ್ಲಿ ಶೇ. 23ರಿಂದ 35ರಷ್ಟು ಏರಿಕೆ ಮಾಡಲಾಗಿದೆ ಎಂದು ಆಕ್ಷೇಪಿಸಿದ್ದಾರೆ.

ದರ ಏರಿಕೆಯನ್ನು ಪ್ರಶ್ನಿಸಿದಾಗ ಕೇಂದ್ರ ಸರ್ಕಾರ ಇಂಧನ ಬೆಲೆ ಇಳಿಸಿದರೆ ರಾಜ್ಯದಲ್ಲಿ ಬಸ್ ದರ ಇಳಿಸುವುದಾಗಿ ಮುಖ್ಯಮಂತ್ರಿ ಉತ್ತರಿಸಿರುವುದು ಉಡಾಫೆಯ ಪ್ರತಿಕ್ರಿಯೆ ಎಂದು ಟೀಕಿಸಿರುವ ಅವರು, ಪ್ರತಿಯೊಂದು ಬೆಲೆ ಏರಿಕೆಗೂ ಕೇಂದ್ರ ಸರ್ಕಾರವನ್ನು ಹೊಣೆ ಮಾಡಿ ರಾಜ್ಯ ಸರ್ಕಾರ ಜವಾಬ್ದಾರಿಯಿಂದ ನುಣುಚಿಕೊಳ್ಳುವುದು ಸರಿಯೇ ಎಂದು ಪ್ರಶ್ನಿಸಿದ್ದಾರೆ.

ಗ್ಯಾರಂಟಿ ಯೋಜನೆಗಳ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ, ಹಾಲು ಮತ್ತು ಬಸ್ ಪ್ರಯಾಣ ದರ ಏರಿಕೆ ಮೂಲಕ ಜನರ ಜೇಬಿಗೆ ಕತ್ತರಿ ಹಾಕುತ್ತಿದೆ. ಇದೇನಾ ಕಾಂಗ್ರೆಸ್ ಸರ್ಕಾರದ ಸಾಧನೆ. ಜನರಿಗೆ ಬೆಲೆ ಏರಿಕೆಯ ಹೊರೆ ನೀಡಬಾರದು. ಸರ್ಕಾರದ ಜನವಿರೋಧಿ ನೀತಿಗಳಿಗೆ ಜನರೇ ತಕ್ಕ ಉತ್ತರ ನೀಡಲಿದ್ದಾರೆ ಎಂದು ಸುನಿಲ್ ಕುಮಾರ್ ತಮ್ಮ ಪೋಸ್ಟ್‌ನಲ್ಲಿ ಟೀಕಿಸಿದ್ದಾರೆ.

ಪೇಜಾವರ ವಿಶ್ವೇಶ ತೀರ್ಥ ಶ್ರೀಗಳ ಜನ್ಮ ಶತಮಾನೋತ್ಸವಕ್ಕೆ ವಿಧಾಯಕ ಕಾರ್ಯಕ್ರಮ ಸಂಕಲ್ಪ

ಸೇವಾ ಪ್ರಕಲ್ಪಗಳ ಪುನರುಜ್ಜೀವನ – ಕಲಬುರಗಿಯಲ್ಲಿ ಪೂಜ್ಯಶ್ರೀ ವಿಶ್ವಪ್ರಸನ್ನ ತೀರ್ಥರಿಂದ ಪ್ರಕಟಣೆ



ಕಲಬುರಗಿ, ನ.05–ಉಡುಪಿ ಪೇಜಾವರ ಮಠದ ಪೂಜ್ಯ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿ ಅವರ 100ನೇ ಜನ್ಮ ಜಯಂತಿ 2031 ರಲ್ಲಿ ವಿಧಾಯಕ ಕಾರ್ಯಕ್ರಮಗಳ ಆಯೋಜನೆಯೊಂದಿಗೆ ಶ್ರದ್ಧಾ ಭಕ್ತಿಯೊಂದಿಗೆ ಸಡಗರದಿಂದ ಆಚರಿಸಲು ಯೋಜನೆ ರೂಪಿಸಲಾಗುತ್ತಿದೆ ಎಂದು ಪೇಜಾವರ ಮಠಾಧೀಶರಾದ ಶ್ರೀ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ತಿಳಿಸಿದರು.

ಪೂಜ್ಯ ಪೇಜಾವರ ಶ್ರೀಗಳು 1931 ಏಪ್ರಿಲ್ 27ರಂದು ದಕ್ಷಿಣ ಕನ್ನಡ ಜಿಲ್ಲೆಯ ರಾಮಕುಂಜದಲ್ಲಿ ಜನಿಸಿದ್ದು 1952ರಲ್ಲಿ ಪೇಜಾವರ ಅಧೋಕ್ಷಜ ಮಠದ 32ನೇ ಪೀಠದ ಮಠಾಧಿಪತಿಗಳಾಗಿ ಸುದೀರ್ಘ 82 ವರ್ಷಗಳಷ್ಟು ಕಾಲ ಪೇಜಾವರ ಮಠದ ಮಠಾಧೀಶರಾಗಿ ಆಧ್ಯಾತ್ಮಿಕ, ಶಿಕ್ಷಣ ಹಾಗೂ ಸಾಮಾಜಿಕ ಸೇವಾ ಪ್ರಕಲ್ಪಗಳನ್ನು ಕಟ್ಟಿ ಬೆಳೆಸಿದ್ದಾರೆ. ಪೇಜಾವರಶ್ರೀಗಳು 2018 ರಲ್ಲಿ ಬೃಂದಾವನಸ್ಥರಾದರು . ಅವರ ಆಶೀರ್ವಾದದಿಂದ ರಾಷ್ಟ್ರಾದ್ಯಂತ ಸುಮಾರು 161ಕ್ಕೂ ಹೆಚ್ಚು ಮಠ, ಶಿಕ್ಷಣ ಸಂಸ್ಥೆ ಸೇರಿದಂತೆ ವಿವಿಧ ಸಂಸ್ಥೆಗಳ ಸಮಗ್ರ ಪುನರುಜ್ಜೀವನಕ್ಕೆ ಜನ್ಮ ಶತಾಬ್ದಿಯ ಸಂದರ್ಭದಲ್ಲಿ ಬೃಹತ್ ಕಾರ್ಯ ಯೋಜನೆಗಳನ್ನು ರೂಪಿಸಲಾಗುತ್ತಿದೆ. ಇಂತಹ ವಿಧಾಯಕ ಕಾರ್ಯಕ್ರಮಗಳಲ್ಲಿ ದೇಶದಾದ್ಯಂತ ಇರುವ ಸಂಘ ಸಂಸ್ಥೆಗಳು ಪೂಜ್ಯರು ಕಟ್ಟಿ ಬೆಳೆಸಿದ ಮಠ, ಮಂದಿರ, ಗೋಶಾಲೆ,ಕಲ್ಯಾಣ ಮಂಟಪ, ವೇದ ಪಾಠಶಾಲೆ, ವಿದ್ಯಾರ್ಥಿ ನಿಲಯ, ವಿದ್ಯಾಪೀಠ, ಅಖಿಲ ಭಾರತ ಮಾಧ್ವ ಮಹಾಮಂಡಲ, ಬಾಲನಿಕೇತನ, ಸುಮೇಧ ಪ್ರಜ್ಞಾ ವಿಕಾಸ ಕೇಂದ್ರ, ಸಂಸ್ಕೃತ,ವೇದಾಂತ, ಆಧುನಿಕ ಶಿಕ್ಷಣ ಸಂಸ್ಥೆಗಳು ಸೇರಿದಂತೆ ಎಲ್ಲ ಪ್ರಕಲ್ಪಗಳ ಪುನರುಜ್ಜೀವನ ಹಾಗೂ ಆಧುನಿಕರಣಗೊಳಿಸಿ ಶ್ರೀಗಳ ಕನಸು ಸಾಕಾರಗೊಳಿಸಲು ವಿಸ್ತೃತವಾದ ಯೋಜನೆಯನ್ನು ಸಿದ್ಧಪಡಿಸಲಾಗುತ್ತಿದೆ.

ಇನ್ನು ಐದು ವರ್ಷಗಳಲ್ಲಿ ಪೂರ್ಣ ಪ್ರಮಾಣದ ಕಾರ್ಯಯೋಜನೆಗಳನ್ನು ರೂಪಿಸಿ ಅನುಷ್ಠಾನ ಮಾಡುವ ಸಂಕಲ್ಪವನ್ನು ಹೊಂದಲಾಗಿದೆ. ಕಲ್ಯಾಣ ಕರ್ನಾಟಕ ಸೇರಿದಂತೆ ಹಲವೆಡೆ ಪೇಜಾವರಶ್ರೀಗಳು ಸಂಚಾರ ಮಾಡಿ ಅನೇಕ ಪ್ರಕಲ್ಪಗಳನ್ನು ಆರಂಭಿಸಿ ಕೊಡುಗೆ ನೀಡಿದ್ದಾರೆ.

ಪೇಜಾವರ ಶ್ರೀಗಳ ಭಕ್ತರು ಮತ್ತು ಅಭಿಮಾನಿಗಳು ಈ ವಿಶಿಷ್ಟವಾದ ಶತಾಬ್ದಿ ಸಂಕಲ್ಪ ಯೋಜನೆಯಲ್ಲಿ ಪಾಲ್ಗೊಂಡು ಯತಿಕುಲ ಚಕ್ರವರ್ತಿ ಪೇಜಾವರ ಶ್ರೀಗಳಾದ ವಿಶ್ವೇಶ ತೀರ್ಥ ಶ್ರೀ ಪಾದಂಗಳವರ ಜನ್ಮ ಶತಾಬ್ದಿಯನ್ನು ಅತ್ಯಂತ ಅದ್ದೂರಿಯಾಗಿ ಹಾಗೂ ವಿಧಾಯಕ ಕಾರ್ಯಕ್ರಮಗಳೊಂದಿಗೆ ಅರ್ಥಪೂರ್ಣವಾಗಿ ಆಚರಿಸಲು ಮುಂದಾಗಬೇಕು ಎಂದು ಭಕ್ತರಿಗೆ ಕರೆ ನೀಡಿದರು.

ಈ ಸಂದರ್ಭದಲ್ಲಿ ಉದ್ಯಮಿ ಕೃಷ್ಣಾಜಿ ಕುಲಕರ್ಣಿ,ಕೃಷ್ಣ ಗುಡಿಯ ಅಧ್ಯಕ್ಷರಾದ ರಂಗನಾಥ ದೇಸಾಯಿ, ಕಾರ್ಯದರ್ಶಿಗಳಾದ ಕಿಶೋರ್ ದೇಶಪಾಂಡೆ , ಕೊತ್ತೂರು ನಿಖಿಲ್ ಆಚಾರ್,ವ್ಯಾಸರಾಜ ಸಂತೆಕಲ್ಲೂರು, ರಾಮದಾಸ್, ಮ್ಯಾನೇಜರ್ ಮದನಂತ ರಾವ್, ವಿದ್ಯಾಸಾಗರ್ ನೈನಾ ಜೊತೆಗಿದ್ದರು.

ಕರಾವಳಿ ಭಕ್ತರಿಂದ ಭಕ್ತಿ ಗೌರವದ ವಂದನೆ

ಉಡುಪಿ ಪೇಜಾವರ ಮಠದ ಪೂಜ್ಯರಾದ ಶ್ರೀ ವಿಶ್ವ ಪ್ರಸನ್ನತೀರ್ಥ ಸ್ವಾಮೀಜಿಯವರನ್ನು ಕರಾವಳಿಯ ಭಕ್ತರು ಭೇಟಿಯಾಗಿ ಭಕ್ತಿ ಗೌರವದ ವಂದನೆ ಸಲ್ಲಿಸಿದರು. ಕಲಬುರಗಿಯ ದಕ್ಷಿಣ ಕನ್ನಡ ಸಂಘ ಹಾಗೂ ಜಿಲ್ಲಾ ಹೋಟೆಲ್ ಉದ್ಯಮಿಗಳ ಸಂಘದ ಪರವಾಗಿ ಡಾ. ಸದಾನಂದ ಪೆರ್ಲ ಮತ್ತು ನರಸಿಂಹ ಮೆಂಡನ್ ನೇತೃತ್ವದಲ್ಲಿ ಪೂಜ್ಯರನ್ನು ಭೇಟಿಯಾಗಿ ಭಕ್ತಿಯ ಗೌರವ ಸಲ್ಲಿಸಲಾಯಿತು. ಪೂಜ್ಯರು ಫಲಮಂತ್ರಾಕ್ಷತೆ ನೀಡಿ ಆಶೀರ್ವದಿಸಿ ಎರಡೂ ಸಂಘ ಸಂಸ್ಥೆಗಳು ಈ ಭಾಗದ ಅಭಿವೃದ್ಧಿಗಾಗಿ ಹಾಗೂ ಪೇಜಾವರಶ್ರೀಗಳ ಜನುಮ ಶತಾಬ್ದಿ ಕಾರ್ಯಕ್ರಮದಲ್ಲಿ ಕೈಜೋಡಿಸಿ ಕಾರ್ಯಕ್ರಮವನ್ನು ಪೂರ್ಣ ಯಶಸ್ವಿಗೊಳಿಸಬೇಕು ಎಂದು ಹೇಳಿದರು.

ಮಹಾಕೀರ್ತಿ ಶೆಟ್ಟಿ, ಸುನಿಲ್ ಶೆಟ್ಟಿ, ಕೃಷ್ಣಾಜಿ ಕುಲಕರ್ಣಿ, ಕಿಶೋರ್ ದೇಶಪಾಂಡೆ ಮತ್ತಿತರರು ಜೊತೆಗಿದ್ದರು.

ಮನೆ ಮನೆ ಕವಿಗೋಷ್ಠಿ ಕಾರ್ಯಕ್ರಮ



ಹಾಸನ, ನ 04. ಮನೆಮನೆ 347ನೇ ತಿಂಗಳ ಕಾರ್ಯಕ್ರಮವನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಅತಿಥಿ ಗಣ್ಯರಿಂದ ಹಿರಿಯ ಸಾಹಿತಿಗಳಿಂದ ನಾಡದೇವತೆ ಭುವನೇಶ್ವರಿಗೆ ಪುಷ್ಪಾರ್ಚನೆ ಮಾಡಿ 71ನೇ ಕನ್ನಡ ರಾಜ್ಯೋತ್ಸವ ಆಚರಿಸಿ ಕವಿಗೋಷ್ಠಿಗೆ ಪ್ರಾರ್ಥನೆಯನ್ನು ಸಿಎಂ ಚೆನ್ನೇಗೌಡ ಮಾಡುವುದರೊಂದಿಗೆ ಯೋಗ ಸಾವಿತ್ರಿ ಎಲ್ಲರನ್ನು ಸ್ವಾಗತಿಸಿದರು.

ಹಿರಿಯ ಸಾಹಿತಿ ಹಾಗೂ ಶಿಕ್ಷಕಿ ಶ್ರೀಮತಿ ಕಲಾವತಿ ಮಧುಸೂಧನ್ ರವರು ರಚಿಸಿರುವ ಅರಿವಂತೆ ಗುರು ಕೃತಿಯು ರೈತ ಮಹಿಳಾ ಸಾಧಕಿಯರಿಗೆ ನೈಜ ಜೀವನಕ್ಕೆ ಗುರುವಿನ ಮಹತ್ವ ಯಾವ ರೀತಿ ಮೊದಲು ತಿದ್ದಿಕೊಳ್ಳಬೇಕು. ಸೃಜನಶೀಲ ಸಾಮಾಜಿಕ ಧಾರ್ಮಿಕ ಆಧ್ಯಾತ್ಮಿಕವಾದ ಎಷ್ಟೋ ವಿಷಯಗಳು ಪರಿಸರವನ್ನು ಎಷ್ಟರಮಟ್ಟಿಗೆ ನಾಶಗೊಳಿಸುತ್ತಾ ಇದ್ದೀವಿ ಅದರಿಂದ ನಾವೇ ನಾಶಗೊಂಡಿದ್ದೇವೆ ನಾವು ಶಿಕ್ಷಣವನ್ನು ಗುರುವಿನಿಂದ ಯಾವ ರೀತಿ ಪಡೆದುಕೊಳ್ಳಬೇಕು ಹಾಗೆ ಅಳವಡಿಸಿಕೊಳ್ಳಬೇಕು ಎಂದು ಈ ಕೃತಿಯಲ್ಲಿ ವರ್ಣಿಸಿದ್ದಾರೆ.

ಕೃತಿಯ ವಿಮರ್ಶೆಯನ್ನು ಮನಮುಟ್ಟುವಂತೆ ಚಂದ್ರಕಲಾ ಎಂ ಕವಯತ್ರಿ ಆಲೂರು ವಿಮರ್ಶಿಸಿದರು ದಯಾನಂದ್ ಆಡಿಟ್ ರವರು ಪ್ರಾ ಂ ಓ ೀ ಜ ಕ ತ್ವ ವ ್ ನ ್ ು ವಹಿಸಿಕೊಂಡಿದ್ದರು. ನಿರೂಪಣೆಯನ್ನು ಶಿಕ್ಷಕಿ ಕವಯತ್ರಿ ಶಾಲಿನಿ ಮಾಡಿದರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಮಾಕ್ಷಿ ಕೃಷ್ಣಮೂರ್ತಿ ವಹಿಸಿದ್ದರು ರಮೇಶ್ ದಿಬ್ಬೂರ್ ಕನ್ನಡ ರಾಜ್ಯೋತ್ಸವದ ಗೀತೆಗಳನ್ನು ಹಾಡಿ ವಂದನಾರ್ಪಣೆ ಮಾಡಿದರು.

ಭಾಗವಹಿಸಿದ ಕವಿಗಳು :– ಎಚ್.ಎನ್. ಭಾರತಿ ಎನ್.ಎಲ್ ಚನ್ನೇಗೌಡ ಚಂದ್ರಕಲಾ ಎಂ ಲಕ್ಷ್ಮೀದೇವಿ ದಾಸಪ್ಪ ಪವನ್ ಕುಮಾರ್ ಸಿ ಕೆ ತಿಮ್ಮೇಗೌಡ ಚೆನ್ನಾಗಿಹಳ್ಳಿ ರಮೇಶ್ ದಿಬ್ಬೂರ್ ಸುಂದರೇಶ್ ಡಿ ಉಡುವಾರೆ ಮಂಜುಳ ಪ್ರಸಾದ್ ಜಿಎಸ್ ಕಲಾವತಿ ಮಧುಸೂದನ್ ಡಾಕ್ಟರ್ ಶಾಂತ ಅತ್ನಿ ಬಿಎನ್ ಗಿರಿಜಾಂಬ ಡಾಕ್ಟರ್ ಕೃಷ್ಣಪ್ಪ ಪ್ರೀತಿ ಶಾಲಿನಿ ಸಾವಿತ್ರಿ ಭಾಗವಹಿಸಿದ್ದರು.

ಅನ್ನ, ಶಿಕ್ಷಣ ದಾಸೋಹದಂತೆ ಅಂಗಾಂಗ ದಾನವೂ ಶ್ರೇಷ್ಠವಾದ ಮಾನವೀಯ ಸೇವೆ: ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್



ದಾವಣಗೆರೆ/ಸಾಣೇಹಳ್ಳಿ, ನ.5: ಅನ್ನದಾಸೋಹ, ಶಿಕ್ಷಣ ದಾಸೋಹ ಹಾಗೂ ಆರೋಗ್ಯ ದಾಸೋಹದಂತೆ ಅಂಗಾಂಗ ದಾನವೂ ಅತ್ಯಂತ ಶ್ರೇಷ್ಠವಾದ ಮಾನವೀಯ ಸೇವೆಯಾಗಿದೆ. ಸಾವಿನ ನಂತರವೂ ನಮ್ಮ ಅಂಗಾಂಗಗಳ ಮೂಲಕ ಮತ್ತೊಬ್ಬರ ಬದುಕಿಗೆ ಬೆಳಕಾಗುವ ಅವಕಾಶವಿದೆ. ಈ ಕುರಿತು ಸಮಾಜದಲ್ಲಿ ಹೆಚ್ಚಿನ ಅರಿವು ಮೂಡಿಸುವ ಅಗತ್ಯವಿದೆ ಎಂದು ದಾವಣಗೆರೆ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಸಾಣೇಹಳ್ಳಿಯ ಶ್ರೀ ಶಿವಕುಮಾರ ರಂಗಮಂದಿರದಲ್ಲಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ಆಯೋಜಿಸಿದ್ದ ನಾಟಕೋತ್ಸವ–2026 ರಲ್ಲಿ ಮಾತನಾಡಿ, ಸಾವಿನ ನಂತರವೂ ಮತ್ತೊಬ್ಬರ ಬದುಕಿಗೆ ಬೆಳಕಾಗ ಬಹುದು. ದೇಶದಲ್ಲಿ ಸಾವಿರಾರು ಮಂದಿ ಅಂಗಾಂಗ ಕಸಿಗಾಗಿ ಕಾಯುತ್ತಿದ್ದಾರೆ. ಪ್ರತಿದಿನವೂ ಅಂಗಾಂಗಗಳ ಅವಶ್ಯಕತೆಯಿರುವ ರೋಗಿಗಳು ಹಾಗೂ ಅವರ ಕುಟುಂಬದವರು ನೆರವು ಕೋರಿ ಸಂಪರ್ಕಿಸುತ್ತಾರೆ. ಅಂಗಾಂಗಗಳ ಕೊರತೆಯಿಂದ ಅನೇಕರು ಸಂಕಷ್ಟ ಅನುಭವಿಸುತ್ತಿದ್ದಾರೆ. ಅಂಗಾಂಗ ದಾನದ ಕುರಿತು ಇರುವ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಿ, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಅತ್ಯಂತ ಅಗತ್ಯ ಎಂದು ಹೇಳಿದರು.

ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡುವುದು ಹಿರಿಯರ ಜವಾಬ್ದಾರಿ

ನಾಟಕೋತ್ಸವದಲ್ಲಿ ಪುಟಾಣಿ ಮಕ್ಕಳು ವಚನ ಗಾಯನಕ್ಕೆ ನೃತ್ಯರೂಪಕ ಪ್ರದರ್ಶಿಸಿದ್ದು ಸಂತಸ ತಂದಿದೆ. ಇಂದಿನ ಮಕ್ಕಳಿಗೆ ನಾವು ಯಾವ ರೀತಿಯ ಸಾಮಾಜಿಕ ವಾತಾವರಣ ಕಲ್ಪಿಸುತ್ತಿದ್ದೇವೆ ಎಂಬುದನ್ನು ಪ್ರತಿಯೊಬ್ಬರೂ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ. ಉತ್ತಮ ಶಿಕ್ಷಣ, ಸುರಕ್ಷತೆ, ದುಶ್ಚಟಗಳಿಂದ ರಕ್ಷಣೆ ಹಾಗೂ ಮಾನವೀಯ ಮೌಲ್ಯಗಳನ್ನು ನೀಡುವುದು ಪೋಷಕರು ಮತ್ತು ಸಮಾಜದ ಪ್ರಮುಖ ಜವಾಬ್ದಾರಿಯಾಗಿದೆ ಎಂದರು.

ಸಂಸ್ಕಾರ ಮತ್ತು ಮೌಲ್ಯಗಳೇ ಬದುಕಿನ ಗಟ್ಟಿಯಾದ ಬೇರುಗಳು

ಆಫ್ರಿಕಾದ ಗಾದೆಯೊಂದನ್ನು ಉಲ್ಲೇಖಿಸಿದ ಸಂಸದರು, ಮರದ ಬೇರುಗಳು ಆಳವಾಗಿ ಮತ್ತು ಗಟ್ಟಿಯಾಗಿದ್ದರೆ ಬಿರುಗಾಳಿಗೂ ಹೆದರಬೇಕಾಗಿಲ್ಲ. ಅದೇ ರೀತಿ ನಮ್ಮ ಬದುಕಿನಲ್ಲಿ ಗುರುಗಳ ಮಾರ್ಗದರ್ಶನ, ಪೋಷಕರ ಆಶೀರ್ವಾದ, ಸ್ನೇಹಿತರ ಬೆಂಬಲ ಹಾಗೂ ಸಂಸ್ಕಾರ ಮತ್ತು ಮಾನವೀಯ ಮೌಲ್ಯಗಳೇ ಗಟ್ಟಿಯಾದ ಬೇರುಗಳಾಗಿವೆ. ಇವು ವ್ಯಕ್ತಿಯನ್ನು ಎಂತಹ ಸವಾಲುಗಳನ್ನಾದರೂ ಎದುರಿಸುವಂತೆ ರೂಪಿಸುತ್ತವೆ ಎಂದು ಹೇಳಿದರು.

ಶಿಕ್ಷಣ ಸಂಸ್ಥೆಗಳು ಸಂಶೋಧನಾ ಚಟುವಟಿಕೆಗಳಿಗೆ ಹೆಚ್ಚಿನ ಒತ್ತು ನೀಡಲಿ: ಶಶೀಲ್ ನಮೋಶಿ



ಕಲಬುರಗಿ, ನ. 5: ಶಿಕ್ಷಣ ಕ್ಷೇತ್ರದಲ್ಲಿ ಶ್ರೇಷ್ಠತೆ ಸಾಧಿಸಲು ಹಾಗೂ ಅಂತರಾಷ್ಟ್ರೀಯ ಗುಣಮಟ್ಟದ ಶಿಕ್ಷಣದ ಮಾನದಂಡಗಳ ಗುರಿ ತಲುಪಲು ಶಿಕ್ಷಣ ಸಂಸ್ಥೆಗಳು ಸಂಶೋಧನಾ ಚಟುವಟಿಕೆಗಳು ಮತ್ತು ಸಂಶೋಧನಾ ಫಲಿತಾಂಶಗಳಿಗೆ ಹೆಚ್ಚಿನ ಆದ್ಯತೆ ನೀಡುವ ಅಗತ್ಯವಿದೆ ಎಂದು ವಿಧಾನ ಪರಿಷತ್ ಸದಸ್ಯ ಶಶೀಲ್ ನಮೋಶಿ ಪ್ರತಿಪಾದಿಸಿದರು.

ನಗರದ ಶರಣಬಸವ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ ಭಾರತೀಯ ಎಲೆಕ್ಟ್ರಾನಿಕ್ಸ್ ಮತ್ತು ಟೆಲಿಕಮ್ಯುನಿಕೇಷನ್ಸ್ ಇಂಜಿನಿಯರಿಂಗ್ (ಐಇಟಿಇ) ಸಂಸ್ಥೆಯ 73ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ, ಈಶಾನ್ಯ ಶಿಕ್ಷಕರ ಕ್ಷೇತ್ರದಿಂದ ದಾಖಲೆಯ ಐದನೇ ಬಾರಿಗೆ ಕರ್ನಾಟಕ ವಿಧಾನ ಪರಿಷತ್ತಿಗೆ ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ವತಿಯಿಂದ ಸನ್ಮಾನ ಸ್ವೀಕರಿಸಿ ನಮೋಶಿ ಮಾತನಾಡಿ, ಶಿಕ್ಷಣ ಸಂಸ್ಥೆಗಳ ಶ್ರೇಯಾಂಕವನ್ನು ನಿರ್ಧರಿಸುವಲ್ಲಿ ಗುಣಮಟ್ಟದ ಸಂಶೋಧನಾ ಫಲಿತಾಂಶಗಳು ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳು ಸಂಶೋಧನಾ ಚಟುವಟಿಕೆಗಳಿಗೆ ನೀಡುವ ಆದ್ಯತೆ ಪ್ರಮುಖ ಪಾತ್ರ ವಹಿಸುತ್ತವೆ ಎಂದು ಹೇಳಿದರು.

ಪಿ.ಡಿ.ಎ. ಇಂಜಿನಿಯರಿಂಗ್ ಕಾಲೇಜು ಸೇರಿದಂತೆ ಹಲವು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವ ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಅಧ್ಯಕ್ಷರೂ ಆಗಿರುವ ನಮೋಶಿ, ಪಿ.ಡಿ.ಎ. ಇಂಜಿನಿಯರಿಂಗ್ ಕಾಲೇಜಿನ 35 ಸಾವಿರ ಚದುರ ಅಡಿ ಪ್ರದೇಶದಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಉದ್ಯಾನವನ (ಟೆಕ್‌ಪಾರ್ಕ್) ಸ್ಥಾಪಿಸುವ ಪ್ರಸ್ತಾವನೆಗೆ ಅನುಮೋದನೆ ದೊರೆತಿದ್ದು, ಶೀಘ್ರದಲ್ಲಿಯೇ ಕಾಮಗಾರಿ ಆರಂಭವಾಗಲಿದೆ ಎಂದು ತಿಳಿಸಿದರು.

ಪ್ರಸ್ತಾವಿತ ಟೆಕ್‌ಪಾರ್ಕ್ ವಿದ್ಯಾರ್ಥಿಗಳು ಹಾಗೂ ಸಂಶೋಧನಾ ವಿದ್ಯಾರ್ಥಿಗಳಿಗೆ ತಮ್ಮ ಹೊಸ ಆಲೋಚನೆಗಳನ್ನು ಅನ್ವೇಷಿಸಲು ಮತ್ತು ತಾವು ರೂಪಿಸಿದ ಯೋಜನೆಗಳ ಮೇಲೆ ಕಾರ್ಯನಿರ್ವಹಿಸಲು ಉತ್ತಮ ವೇದಿಕೆಯನ್ನು ಒದಗಿಸಲಿದೆ. ಆರಂಭದಲ್ಲಿ ಎಲ್ಲ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳ ವಿದ್ಯಾರ್ಥಿಗಳಿಗೆ ಈ ಟೆಕ್‌ಪಾರ್ಕ್‌ನ ಬಾಗಿಲು ತೆರೆಯಲಾಗುವುದು. ನಂತರ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಗಳ ವಿದ್ಯಾರ್ಥಿಗಳಿಗೂ ಇಲ್ಲಿನ ಸೌಲಭ್ಯಗಳನ್ನು ಬಳಸಿಕೊಳ್ಳಲು ಅವಕಾಶ ನೀಡುವ ಕುರಿತು ಪರಿಶೀಲಿಸಲಾಗುವುದು ಎಂದು ನಮೋಶಿ ವಿವರಿಸಿದರು.

ಸಂಶೋಧನಾ ಚಟುವಟಿಕೆಗಳನ್ನು ಉತ್ತೇಜಿಸಲು ಹಾಗೂ ಮೂಲ ಸೌಕರ್ಯ ಸೌಲಭ್ಯಗಳನ್ನು ಸುಧಾರಿಸಲು ಎಐಸಿಟಿಇ ಯುಜಿಸಿ ಮತ್ತು ಇತರ ಕೇಂದ್ರ ಮಟ್ಟದ ಪ್ರಮುಖ ಸಂಸ್ಥೆಗಳಲ್ಲಿ ಲಭ್ಯವಿರುವ ಅನುದಾನವನ್ನು ಸದ್ಬಳಕೆ ಮಾಡಿಕೊಳ್ಳಲು ಖಾಸಗಿ ಶಿಕ್ಷಣ ಸಂಸ್ಥೆಗಳು ಪರಸ್ಪರ ಕೈಜೋಡಿಸಬೇಕೆಂದು ನಮೋಶಿ ಅಭಿಪ್ರಾಯ ಪಟ್ಟರು. ಸಂಸ್ಥೆಗಳಲ್ಲಿ ಲಭ್ಯವಿರುವ ಅನುದಾನ ವನ್ನು ಬಳಸಿಕೊಳ್ಳುವಲ್ಲಿ ಕರ್ನಾಟಕ ಹಿಂದುಳಿದಿದ್ದು, ಇಂತಹ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಕೆಲವೇ ರಾಜ್ಯಗಳಲ್ಲಿ ಒಂದಾಗಿರುವ ತಮಿಳುನಾಡಿನ ಮಾದರಿಯನ್ನು ಕರ್ನಾಟಕ ಅನುಸರಿಸಬೇಕು ಎಂದು ಅವರು ಅಭಿಪ್ರಾಯಪಟ್ಟರು. ಈಶಾನ್ಯ ಶಿಕ್ಷಕರ ಕ್ಷೇತ್ರದ ಶಿಕ್ಷಕ ಸಮುದಾಯವು ತಮಗೆ ಅಪಾರ ಬೆಂಬಲ ನೀಡಿ ದಾಖಲೆಯ ಐದನೇ ಬಾರಿಗೆ ಆಯ್ಕೆ ಮಾಡಿದ್ದಕ್ಕಾಗಿ ಕೃತಜ್ಞತೆ ಸಲ್ಲಿಸಿದ ಅವರು, ಖಾಸಗಿ ಶಿಕ್ಷಣ ಸಂಸ್ಥೆಗಳು ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಆಯಾ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಬೇಡಿಕೆಗಳನ್ನು ಈಡೇರಿಸಲು ಆದ್ಯತೆ ನೀಡುವುದಾಗಿ ಭರವಸೆ ನೀಡಿದರು.

ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಬಸವರಾಜ ದೇಶಮುಖ ಅವರು ಮಾತನಾಡಿ, ಚುನಾವಣೆಯಲ್ಲಿ ಯಶಸ್ಸು ಸಾಧಿಸಿದ ನಮೋಶಿ ಅವರನ್ನು ಅಭಿನಂದಿಸಿದರು. ಇದೇ ಸಂದರ್ಭದಲ್ಲಿ, ನಮೋಶಿಯವರ ಅನುಭವ ಹಾಗೂ ಸೇವೆಯನ್ನು ಪರಿಗಣಿಸಿ, ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಲ್ಲಿ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಪಕ್ಷದ ವರಿಷ್ಠರನ್ನು ವೇದಿಕೆ ಮೂಲಕ ಒತ್ತಾಯಿಸಿದರು.

ಗ್ಯಾರಂಟಿ ಯೋಜನೆಗಳ ದುರುಪಯೋಗ ತಡೆಯಲು ಪರಮೇಶ್ವರ ನಾಯ್ಕ ಸೂಚನೆ

ರಾಯಚೂರು, ನ. 5: ಪಂಚ ಗ್ಯಾರಂಟಿ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ತಲುಪುವಂತೆ ನೋಡಿಕೊಳ್ಳಬೇಕು. ಯೋಜನೆಗಳ ದುರುಪಯೋಗವಾಗದಂತೆ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಎಚ್ಚರಿಕೆ ವಹಿಸಬೇಕು ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಪಿ.ಟಿ. ಪರಮೇಶ್ವರ ನಾಯ್ಕ ಸೂಚಿಸಿದರು.

ನಗರದ ಜಿ.ಪಂ ಸಭಾಂಗಣದಲ್ಲಿ ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಶಕ್ತಿ ಯೋಜನೆಯಡಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಪ್ರಯಾಣಿಸುತ್ತಿದ್ದು, ಬಸ್ ನಿಲ್ದಾಣಗಳಲ್ಲಿ ಸಿಸಿಟಿವಿ, ಸ್ವಚ್ಛ ಶೌಚಾಲಯ ಹಾಗೂ ತಾಯಿ ಹಾಲುಣಿಸುವ ಕೊಠಡಿ ಸೇರಿದಂತೆ ಅಗತ್ಯ ಸೌಲಭ್ಯ ಕಲ್ಪಿಸಬೇಕು. ಗುತ್ತಿಗೆದಾರರು ಸಮರ್ಪಕವಾಗಿ ಕಾರ್ಯನಿರ್ವಹಿಸದಿದ್ದರೆ ಟೆಂಡರ್ ರದ್ದುಪಡಿಸುವಂತೆ ಸಾರಿಗೆ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.



ರಾಯಚೂರು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಪಿಟಿ ಪರಮೇಶ್ವರ ನಾಯ್ಕ ಅವರು ಪರಿಶೀಲನಾ ಸಭೆಯಲ್ಲಿ ಮಾತನಾಡಿದರು. ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷ ಪಾಮಯ್ಯ ಮುರಾರಿ, ಜಿ.ಪಂ. ಸಿಇಒ ಈಶ್ವರಕುಮಾರ ಕಾಂದೂ ಸೇರಿದಂತೆ ಸದಸ್ಯರು, ಅಧಿಕಾರಿಗಳು ಹಾಜರಿದ್ದರು.

ಜಿಲ್ಲೆಯ ಎಂಟು ತಾಲ್ಲೂಕುಗಳ ಗ್ರಾ.ಪಂ, ನಗರ ಪ್ರದೇಶ ಹಾಗೂ ಇಲಾಖಾ ವಾರು ಫಲಾನುಭವಿಗಳ ಸಂಪೂರ್ಣ ಮಾಹಿತಿ ಅಧಿಕಾರಿಗಳ ಬಳಿ ಇರಬೇಕು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರ ಸಮುದಾಯಗಳ ಫಲಾನುಭವಿಗಳ ವಿವರ ಸಂಗ್ರಹಿಸಬೇಕು. ಗ್ಯಾರಂಟಿ ಸಮಿತಿ ಸದಸ್ಯರ ಸಹಯೋಗದಲ್ಲಿ ಯೋಜನೆಗಳನ್ನು ಅನುಷ್ಠಾನ ಗೊಳಿಸಬೇಕು. ಸಭೆಯ ಸೂಚನೆಗಳ ಪಾಲನಾ ವರದಿ ಸಲ್ಲಿಸಬೇಕು ಎಂದು ನಿರ್ದೇಶನ ನೀಡಿದರು.

ಜಿಲ್ಲೆಯಲ್ಲಿ ಗೃಹಲಕ್ಷ್ಮಿ ಯೋಜನೆಯಡಿ 4.61 ಲಕ್ಷಕ್ಕೂ ಹೆಚ್ಚು ನೋಂದಣಿ ಯಾಗಿದ್ದು, 2,744.81 ಕೋಟಿ ಪಾವತಿಸಲಾಗಿದೆ. ಅನ್ನಭಾಗ್ಯಕ್ಕೆ 806.22 ಕೋಟಿ, ಗೃಹಜ್ಯೋತಿಗೆ 557.31 ಕೋಟಿ ಹಾಗೂ ಶಕ್ತಿ ಯೋಜನೆಗೆ 618.03 ಕೋಟಿ ವೆಚ್ಚ ಮಾಡಲಾಗಿದೆ. ಯುವ ನಿಧಿಯಡಿ 27,876 ವಿದ್ಯಾರ್ಥಿಗಳು ನೋಂದಣಿ ಯಾಗಿದ್ದು, 78.87 ಕೋಟಿ ಪಾವತಿಸಲಾಗಿದೆ ಎಂದು ತಿಳಿಸಿದರು.

ಬಸ್ ಪ್ರಯಾಣ ದರ, ಹಾಲಿನ ದರ ಏರಿಕೆ ನಿರ್ಧಾರ ಸರ್ಕಾರವು ಕೂಡಲೇ ವಾಪಸ್ ಪಡೆಯಿರಿ: ಗಣಪಾಲ್ ಐನಾಥರೆಡ್ಡಿ ಆಗ್ರಹ

ಬಳ್ಳಾರಿ ನ 04. ಕರ್ನಾಟಕ ರಾಜ್ಯ ಸರ್ಕಾರವು ನವೆಂಬರ್ 4, 2026 ರಿಂದ ಸಾಮಾನ್ಯ ಜನರ ದೈನಂದಿನ ಜೀವನೋಪಾಯಕ್ಕೆ ತೊಂದರೆಯುಂಟುಮಾಡುವ ರೀತಿಯಲ್ಲಿ ಬಸ್ ಪ್ರಯಾಣ ದರವನ್ನು ಹೆಚ್ಚಿಸುವ ಸರ್ಕಾರದ ನಿರ್ಧಾರ ಖಂಡನೀಯವಾಗಿದೆ ಮತ್ತುಇದು ಸಾರ್ವಜನಿಕ ವಿರೋಧಿ ನೀತಿಯಾಗಿದೆ ಎಂದು ಮಾಜಿ ಬಿಜೆಪಿ ಜಿಲ್ಲಾ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಗಣಪಾಲ ಐನಾಥರೆಡ್ಡಿ ಟೀಕಿಸಿದ್ದಾರೆ..

ಕರ್ನಾಟಕದಲ್ಲಿ ಹಿಂದೆದೂ ಕಾಣದ ರೀತಿಯಲ್ಲಿ ಸರ್ಕಾರವು KSRTC, BMTC, NWKRTC, KKRTC ನಾಲ್ಕೂ ಸಾರಿಗೆ ನಿಗಮಗಳ ಬಸ್ ಟಿಕೆಟ್ ದರಗಳನ್ನು ನವೆಂಬರ್ 4, 2026 ರಿಂದ ಸರಾಸರಿ 23%–35% ವರೆಗೆ ಹೆಚ್ಚಿಸಲಾಗಿದೆ; BMTC ಕನಿಷ್ಠ ದರ 6 ರಿಂದ 10ಕ್ಕೆ, KSRTC ಸಾಮಾನ್ಯ ಬಸ್‌ಗಳಲ್ಲಿ ಗರಿಷ್ಠ 9 ಏರಿಕೆ ಜಾರಿಗೆ ಬಂದಿದೆ. ಇಂತಹ ಸಂದರ್ಭದಲ್ಲಿ ಬಸ್ ಪ್ರಯಾಣ ದರ ಏರಿಕೆಯು ಬಡವರು, ಮಧ್ಯಮ ವರ್ಗದ ಕುಟುಂಬಗಳು, ವಿದ್ಯಾರ್ಥಿಗಳು, ಕಾರ್ಮಿಕರು ಹಾಗೂ ದಿನಗೂಲಿ ನೌಕರರ ಮೇಲೆ ಮತ್ತಷ್ಟು ಆರ್ಥಿಕ ಹೊರೆಯನ್ನು ಉಂಟುಮಾಡಲಿದೆ.

ಅಲ್ಲದೇ, ಸರ್ಕಾರವು ನವಂಬರ್ 1 ರಿಂದ ಹಾಲಿನ ದರ ಪ್ರತಿ ಲೀಟರ್‌ಗೆ ರೂ. 8/– ರಿಂದ 15/– ಹಾಗೂ ಮೊಸರಿನ ದರ ಪ್ರತಿ ಲೀಟರ್‌ಗೆ ರೂ. 14/– ರಷ್ಟು ಏರಿಕೆ ಮಾಡಿರುವ ನಿರ್ಧಾರವು ಸಾಮಾನ್ಯ ಜನರ ಜೀವನದ ಮೇಲೆ ಹೆಚ್ಚುವರಿ ಆರ್ಥಿಕ ಹೊರೆಯನ್ನು ಉಂಟುಮಾಡಲಿದೆ. ಹಾಲು ಕೇವಲ ಒಂದು ವಾಣಿಜ್ಯ ವಸ್ತುವಲ್ಲ. ಅದು ಪ್ರತಿಯೊಂದು ಕುಟುಂಬದ ನಿತ್ಯದ ಅಗತ್ಯವಾಗಿದೆ. ವಿಶೇಷವಾಗಿ ಮಕ್ಕಳು, ವೃದ್ಧರು ಹಾಗೂ ರೋಗಿಗಳಿಗೆ ಹಾಲು ಅತ್ಯಂತ ಅವಶ್ಯಕವಾಗಿದೆ. ಇಂತಹ ಅಗತ್ಯ ವಸ್ತುವಿನ ಬೆಲೆಯನ್ನು ಹೆಚ್ಚಿಸುವುದರಿಂದ ಸಾಮಾನ್ಯ ಜನರ ಜೀವನದ ಮೇಲೆ ನೇರ ಆರ್ಥಿಕ ಪರಿಣಾಮ ಬೀರುತ್ತದೆ ಮತ್ತು ಇದು ಸಾರ್ವಜನಿಕ ವಿರೋಧಿ ನೀತಿ ಯಾಗಿದೆ ಎಂದು ಗಣಪಾಲ ಐನಾಥ ರೆಡ್ಡಿ, ಯವರು ಅಭಿಪ್ರಾಯ ಪಟ್ಟರು. ಇದಲ್ಲದೆ ವಿವಿಧ ಮಾದರಿಯ ಹಾಲಿನ ದರದಲ್ಲಿಯೂ ಏರಿಕೆ ಮಾಡಲಾಗಿದೆ. ಟೋನ್ಡ್ ಹಾಲಿನ ಬೆಲೆ 46 ರೂ.ನಿಂದ 54 ರೂ.ಗೆ, ಹೋಮೋಜಿನೈಸ್ಡ್ ಟೋನ್ಡ್ ಹಾಲಿನ ದರ 47 ರೂ.ನಿಂದ 56 ರೂ.ಗೆ ಹೆಚ್ಚಿಸಲಾಗಿದೆ.

ಹೋಮೋಜಿನೈಸ್ಡ್ ಹಸುವಿನ



ಹಾಲಿನ ಬೆಲೆ 50 ರೂ.ನಿಂದ 58 ರೂ.ಗೆ ಏರಿಕೆಯಾಗಿದ್ದರೆ, ಸ್ಪೆಷಲ್ ಟೋನ್ಡ್ ಹಾಲು ಮತ್ತು ಶುಭಂ ಹಾಲಿನ ದರ ತಲಾ 52 ರೂ.ನಿಂದ 64 ರೂ.ಗೆ ಹೆಚ್ಚಳವಾಗಿದೆ. ಹೋಮೋಜಿನೈಸ್ಡ್ ಶುಭಂ ಹಾಲಿನ ಬೆಲೆ 53 ರೂ.ನಿಂದ 65 ರೂ.ಗೆ ಏರಿಕೆಯಾಗಿದೆ. ಹೊಸ ದರದ ಪ್ರಕಾರ, ಅರ್ಧ ಲೀಟರ್ ಮೊಸರಿನ ಬೆಲೆ 28 ರೂ.ನಿಂದ 34 ರೂ.ಗೆ ಏರಿಕೆಯಾಗಿದ್ದರೆ, ಒಂದು ಲೀಟರ್ ಮೊಸರಿನ ದರ 54 ರೂ.ನಿಂದ 68 ರೂ.ಗೆ ಹೆಚ್ಚಳವಾಗಿದೆ. ಅಂದರೆ, ಅರ್ಧ ಲೀಟರ್ ಮೊಸರಿಗೆ 6 ರೂ. ಹಾಗೂ ಒಂದು ಲೀಟರ್ ಮೊಸರಿಗೆ 14 ರೂ. ಹೆಚ್ಚುವರಿಯಾಗಿದೆ.

‘ಇತಿಹಾಸದಲ್ಲೇ ಮೊದಲ ಬಾರಿಗೆ ಸರ್ಕಾರವು ಹಾಲಿನ ಬೆಲೆಯನ್ನು ಏಕಾಏಕಿ ಲೀಟರ್‌ಗೆ ರೂ. 8/– ರಿಂದ 15/– ರೂಪಾಯಿಯಷ್ಟು ಹೆಚ್ಚಿಸಿದೆ. ರೈತರ ಹಿತಾಸಕ್ತಿಯನ್ನು ಕಾಪಾಡುವ ಹೆಸರಿನಲ್ಲಿ ಗ್ರಾಹಕರ ಮೇಲೆ ಹೆಚ್ಚುವರಿ ಹೊರೆ ಹಾಕುವ ಬದಲು, ಈ ಹಿಂದೆ ರೈತರಿಗೆ ನೀಡಲಾಗುತ್ತಿದ್ದ ಪ್ರೋತ್ಸಾಹ ಧನವನ್ನು ತಡೆ ಹಿಡಿದು, ಈ ರೀತಿಯ ಬೆಲೆ ಏರಿಕೆ ಮಾಡಿರುವ ಕ್ರಮವು ಅಸಮಂಜಸವಾಗಿದೆ. ಇದರ ಬದಲಾಗಿ, ಸರ್ಕಾರವು ರೈತರಿಗೆ ನೀಡಲಾಗುತ್ತಿದ್ದ ಪ್ರೋತ್ಸಾಹ ಧನವನ್ನು ಮುಂದುವರೆಸಿದ್ದರೆ, ಹಾಲಿನ ಬೆಲೆ ಏರಿಕೆ ಮಾಡುವ ಅಗತ್ಯವಿರುತ್ತಿರಲಿಲ್ಲ.

ಹಾಲಿನ ಬೆಲೆ ಏರಿಕೆ ಹಿನ್ನೆಲೆಯಲ್ಲಿ ಹೋಟೆಲ್‌ಗಳಲ್ಲಿ ಕಾಫಿ–ಟೀ ಬೆಲೆಯೂ ಸಹ 5 ರಿಂದ 10 ರೂ. ಗಳ ಹೆಚ್ಚಳವಾಗಿದೆ. ಇದರಿಂದ ನೇರವಾಗಿ ಸಾರ್ವಜನಿಕರ ಹಾಗೂ ಗ್ರಾಹಕರ ಮೇಲೆ ಹೊರೆ ಬೀಳಲಿದೆ. ಸರ್ಕಾರವು ಘೋಷಣೆ ಮಾಡಿದ ದರ ಒಂದಾದರೆ, ವಾಸ್ತವವಾಗಿ ಗ್ರಾಹಕರು ಪಾವತಿಸುತ್ತಿರುವ ದರ ಬೇರೆಯಾಗಿದೆ.

ರಾಜ್ಯ ಸರ್ಕಾರವು ಒಂದು ಕೈಯಿಂದ ಉಚಿತ ಗ್ಯಾರಂಟಿಗಳನ್ನು ನೀಡುವ ನೆಪದಲ್ಲಿ, ಇನ್ನೊಂದು ಕೈಯಿಂದ ಸಾರ್ವಜನಿಕರ ಜೇಬಿಗೆ ಕತ್ತರಿ ಹಾಕುತ್ತಿರುವುದು ಅತ್ಯಂತ ಖಂಡನೀಯವಾಗಿದೆ.

ಆದ್ದರಿಂದ ರಾಜ್ಯ ಸರ್ಕಾರವು ಹಾಲಿನ ದರ ಏರಿಕೆ ನಿರ್ಧಾರವನ್ನು ಮರುಪರಿಶೀಲಿಸಿ, ಕೂಡಲೇ ಹಿಂಪಡೆಯಬೇಕು. ಹಾಲು ಉತ್ಪಾದಕರಿಗೆ, ರೈತರಿಗೆ ಸೂಕ್ತ ಪ್ರೋತ್ಸಾಹಧನ ಹಾಗೂ ಗ್ರಾಹಕರಿಗೆ ಕೈಗೆಟುಕುವ ದರದಲ್ಲಿ ಹಾಲು ದೊರೆಯುವಂತೆ ಅಗತ್ಯ ಕ್ರಮ ಕೈಗೊಳ್ಳಬೇಕು.

ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನವನ್ನು ನೀಡಬೇಕು.

ಹಾಲಿನ ದರ ಏರಿಕೆ ನಿರ್ಧಾರವನ್ನು ಕೂಡಲೇ ಹಿಂಪಡೆಯಬೇಕು.

ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳ ಹಿತಾಸಕ್ತಿಯನ್ನು ಕಾಪಾಡಬೇಕು.

ಅಗತ್ಯ ವಸ್ತುಗಳ ಬೆಲೆ ನಿಯಂತ್ರಣಕ್ಕೆ ಸರ್ಕಾರ ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕು.

ಸಾರ್ವಜನಿಕರ ಅಭಿಪ್ರಾಯ ಪಡೆಯದೆ ಅಗತ್ಯ ವಸ್ತುಗಳ ಬೆಲೆ ಹೆಚ್ಚಿಸುವ ಕ್ರಮ ಕೈಗೊಳ್ಳಬಾರದು.

ಆದ್ದರಿಂದ ಬಸ್ ಪ್ರಯಾಣ ದರ ಹಾಗೂ ಹಾಲಿನ ದರ ಏರಿಕೆಯನ್ನು ಸರ್ಕಾರವು ತಕ್ಷಣವೇ ಹಿಂಪಡೆದು, ಸರ್ಕಾರವು ಜನಸಾಮಾನ್ಯರ ಸಂಕಷ್ಟವನ್ನು ಅರ್ಥಮಾಡಿಕೊಂಡು ಜನಪರ ನಿರ್ಧಾರ ಕೈಗೊಳ್ಳಬೇಕೆಂದು ಗಣಪಾಲ ಐನಾಥರೆಡ್ಡಿ ಆಗ್ರಹಿಸಿದ್ದಾರೆ.

ಜಿಲ್ಲಾಧಿಕಾರಿಗಳೊಂದಿಗೆ ಎರಡನೇ ಸುತ್ತಿನ ಸಭೆ

ಕಬ್ಬು ದರ ನಿಗದಿಗೆ ಮೂಡದ ಒಮ್ಮತ: ಮುಂದುವರಿದ ಹಗ್ಗಜಗ್ಗಾಟ

ಕಲಬುರಗಿ, ನ. 5: ಜಿಲ್ಲೆಯಲ್ಲಿ ಕಬ್ಬಿನ ದರ ನಿಗದಿಗೆ ಜಿಲ್ಲಾಡಳಿತದ ನೇತೃತ್ವದಲ್ಲಿ ರೈತರು ಹಾಗೂ ಕಾರ್ಖಾನೆಗಳ ನಡುವೆ ನಡೆದ ಎರಡನೇ ಸುತ್ತಿನ ಸಭೆಯೂ ಸ್ಪಷ್ಟ ತೀರ್ಮಾನ ಇಲ್ಲದೇ ಅಂತ್ಯಗೊಂಡಿದೆ. ಇದರಿಂದ ದರ ನಿಗದಿ ಹಗ್ಗಜಗ್ಗಾಟ ಮುಂದುವರಿದಿದೆ. ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ನೇತೃತ್ವದಲ್ಲಿ ರೈತ ಸಂಘಟನೆಗಳ ಮುಖಂಡರು ಹಾಗೂ ಜಿಲ್ಲೆಯಲ್ಲಿರುವ ಐದೂ ಸಕ್ಕರೆ ಕಾರ್ಖಾನೆಗಳ ಪ್ರತಿನಿಧಿಗಳೊಂದಿಗೆ ಸಂಜೆ 5ರಿಂದ ರಾತ್ರಿ 10ರ ತನಕ ಸುದೀರ್ಘವಾಗಿ ಸಭೆ ನಡೆಯಿತು.



ಹಲವು ಸುತ್ತಿನ ಸಮಾ ಲೋಚನೆಯ ಬಳಿಕ ಮಾತನಾಡಿದ ಜಿಲ್ಲಾಧಿಕಾರಿ ಇಕಮ್ ಶರೀಫ್, ಬೆಳಗಾವಿಯಲ್ಲಿ ಟನ್ ಕಬ್ಬಿಗೆ ಹೋದ ವರ್ಷಕ್ಕಿಂತಲೂ ಎಷ್ಟು ಹೆಚ್ಚುವರಿ ದರ ನಿಗದಿ ಆಗುತ್ತದೆಯೋ ಅದೇ ಪ್ರಮಾಣದ ದರವನ್ನು ಜಿಲ್ಲೆಯಲ್ಲೂ ಕಳೆದ ವರ್ಷದ ದರಕ್ಕೆ ಸೇರಿಸಿ ನೀಡಲು ಕಾರ್ಖಾನೆಗಳು ತಾತ್ವಿಕ ಒಪ್ಪಿಗೆ ನೀಡಿವೆ. ಇದು ಒಂದರ್ಥದಲ್ಲಿ ರೈತರಿಗೆ ಲಾಭದಾಯಕ ದರ. ರೈತರು ಒಪ್ಪಿದರೆ ಕಾರ್ಖಾನೆ ಗಳಿಂದ ಲಿಖಿತ ಒಪ್ಪಿಗೆ ಪಡೆದು ಕಬ್ಬು ನುರಿಸುವುದನ್ನು ಆರಂಭಿಸ ಬಹುದು. ರೈತರು ತಮ್ಮ ನಿಲುವು ಸ್ಪಷ್ಟಪಡಿಸಬೇಕು ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ರೈತ ಮುಖಂಡರು, ಕಳೆದ ವರ್ಷ ಬೆಳಗಾವಿಗೂ ಕಲಬುರಗಿಗೂ ಪ್ರತಿ ಟನ್‌ಗೆ 300 ವ್ಯತ್ಯಾಸವಿತ್ತು. ಆದರೆ, ಈ ವರ್ಷ ಕಳೆದ ವರ್ಷಕ್ಕಿಂತಲೂ ನಮ್ಮ ಕಬ್ಬಿನ ರಿಕವರಿ ದರ ಅತ್ಯುತ್ತಮವಾಗಿದೆ. ಟನ್‌ಗೆ ರೂ 300 ವ್ಯತ್ಯಾಸ ಒಪ್ಪಲು ಹೇಗೆ ಸಾಧ್ಯ? 100 ರೂ ವ್ಯತ್ಯಾಸದ ದರ ನೀಡಿದರೆ ಒಪ್ಪುತ್ತೇವೆ. ಇಲ್ಲದಿದ್ದರೆ ನಮ್ಮ ಸಹಮತವಿಲ್ಲ ಎಂದು ಸ್ಪಷ್ಟಪಡಿಸಿದರು. ಅಲ್ಲಿಗೆ ಯಾವುದೇ ಸ್ಪಷ್ಟ ನಿರ್ಧಾರವಿಲ್ಲದೇ ಸಭೆ ಅಂತ್ಯಗೊಂಡಿತು.

ಕಬ್ಬಿಗೆ ಏಕರೂಪ ದರ ಕೊಡಿ

ಟನ್ ಕಬ್ಬಿಗೆ 5,500 ರೂಗಳಂತೆ ಏಕರೂಪ ದರ ನಿಗದಿ, ತೊಗರಿಗೆ ಕ್ವಿಂಟಲ್‌ಗೆ 15 ಸಾವಿರ ರೂ ಕನಿಷ್ಠ ಬೆಂಬಲ ಬೆಲೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರೈತ ಸಂಘಟನೆಗಳ ಒಕ್ಕೂಟದಿಂದ ನಗರದ ರಾಮಮಂದಿರ ವೃತ್ತದಲ್ಲಿ ನಡೆಯುತ್ತಿರುವ ಅಹೋರಾತ್ರಿ ಧರಣಿ ಸತ್ಯಾಗ್ರಹ ಗುರುವಾರವೂ ಮುಂದುವರಿದಿದೆ. ಧರಣಿಗೆ ವ್ಯಕ್ತವಾಗುತ್ತಿರುವ ಬೆಂಬಲ ದಿನೇದಿನೇ ಹೆಚ್ಚುತ್ತಿದ್ದು, ಇಂದು ಸಾಕಷ್ಟು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಕೂಡ ಪಾಲ್ಗೊಂಡಿದ್ದರು. ರೈತ ಮುಖಂಡರು ಮಾತನಾಡಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿರುದ್ಧ ವಾಗ್ದಾಳಿ ನಡೆಸಿದರು.

ಕೆನರಾ ಬ್ಯಾಂಕ್ ಆರ್‌ಸೆಟಿ ವತಿಯಿಂದ ಉಚಿತ ‘ಕೃಷಿ ಉದ್ಯಮಿ’ ತರಬೇತಿಗೆ ಚಾಲನೆ

ಬಳ್ಳಾರಿ,ನ.05,ನಗರದ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ–ಉದ್ಯೋಗ ತರಬೇತಿ ಸಂಸ್ಥೆ (ಸಿಬಿ ಆರ್‌ಸೆಟಿ) ಆವರಣದಲ್ಲಿ 13 ದಿನಗಳ ಉಚಿತ ‘ಕೃಷಿ ಉದ್ಯಮಿ? ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಪಶು ಸಂಗೋಪನಾ ಇಲಾಖೆಯ ಉಪ ನಿರ್ದೇಶಕ ಡಾ. ಸದಾಶಿವ ಉಪ್ಪಾರ ಅವರು, ಗುರುವಾರ ಉದ್ಘಾಟಿಸಿ ಬಳಿಕ ಮಾತನಾಡಿದ ಅವರು, ರೈತರು ಹೈನುಗಾರಿಕೆ, ಕೋಳಿ ಸಾಕಾಣಿಕೆ, ಎರೆಹುಳು ಗೊಬ್ಬರ ತೊಟ್ಟಿ ರಚನೆ ಮುಂತಾದ ಪೂರಕ ಚಟುವಟಿಕೆಗಳ ಮೂಲಕ ಸಮಗ್ರ ಕೃಷಿ ಪದ್ಧತಿ ಅಳವಡಿಸಿಕೊಂಡರೆ ಆರ್ಥಿಕವಾಗಿ ಸದೃಢರಾಗಲು ಸಾಧ್ಯ. ಇದಕ್ಕೆ ಇಂತಹ ತರಬೇತಿಗಳು ಹೆಚ್ಚು ಸಹಕಾರಿಯಾಗುತ್ತವೆ ಎಂದು ಹೇಳಿದರು.

ಪ್ರತಿ ತಾಲೂಕು ಮಟ್ಟದಲ್ಲಿ ಪಶು ಸಂಗೋಪನಾ ಇಲಾಖೆಯಿಂದ ದೊರೆಯುವ ವಿವಿಧ ಸೌಲಭ್ಯಗಳ ಸದುಪಯೋಗವನ್ನು ರೈತರು ಪಡೆದುಕೊಳ್ಳಬೇಕು ಎಂದು ಕರೆ ನೀಡಿದರು.

ಸಂಸ್ಥೆಯ ನಿರ್ದೇಶಕ ವಿನಯ್ ಕುಮಾರ್ ಬಿ. ಕೊಳ್ಳೂರುಮಠ ಅವರು ಮಾತನಾಡಿ, ಸಂಸ್ಥೆಯಲ್ಲಿ ತಾಂತ್ರಿಕ ತರಬೇತಿಯೊಂದಿಗೆ ವ್ಯಕ್ತಿತ್ವ ವಿಕಸನ, ಆತ್ಮವಿಶ್ವಾಸ ವೃದ್ಧಿ ಹಾಗೂ ಸಂವಹನ ಕೌಶಲ್ಯಗಳ ತರಬೇತಿಯನ್ನೂ ನೀಡುವುದರಿಂದ ಶಿಬಿರಾರ್ಥಿಗಳಿಗೆ ವೃತ್ತಿ ಜೀವನದಲ್ಲಿ ಮುನ್ನಡೆಯಲು ನೆರವಾಗುತ್ತದೆ ಎಂದರು.

ಬಳ್ಳಾರಿಯ ಕೆನರಾ ಬ್ಯಾಂಕ್ ನ ಜಿಲ್ಲಾ ಲೀಡ್ ವ್ಯವಸ್ಥಾಪಕ ಗಿರೀಶ್ ವಿ. ಕುಲಕರ್ಣಿ ಅವರು ವಿವಿಧ ಬ್ಯಾಂಕ್ ಗಳಲ್ಲಿ ಕೃಷಿ ಮತ್ತು ಸ್ವ–ಉದ್ಯೋಗಕ್ಕೆ ಲಭ್ಯವಿರುವ ಸಾಲ ಸೌಲಭ್ಯಗಳ ಕುರಿತು ಮಾಹಿತಿ ಹಂಚಿಕೊಂಡರು.

ಹಳೇ ವೋಟರ್ ಲಿಸ್ಟ್ ಅನ್ವಯ ಚುನಾವಣೆ ಹಾಸ್ಯಾಸ್ಪದ: ಸಚಿವ ಖಂಡ್ರೆ ವಿರುದ್ಧ ಕಾರ್ಣಿಕ್ ಕಿಡಿ

ಬೀದರ್, ನ. 5: ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಂತರ ಅಂತಿಮ ಮತದಾರರ ಪಟ್ಟಿ ಈಗಾಗಲೇ ಸಿದ್ಧಗೊಂಡಿದೆ. ಹೀಗಿರುವಾಗ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರು, ಹಳೆ ಮತದಾರರ ಪಟ್ಟಿ ಆಧರಿಸಿ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆ ಗಳನ್ನು ನಡೆಸುವುದಾಗಿ ಹೇಳಿಕೆ ನೀಡಿರುವುದು ಹಾಸ್ಯಾಸ್ಪದ ಎಂದು ರಾಜ್ಯ ಬಿಜೆಪಿ ವಕ್ತಾರ ಗಣೇಶ್ ಕಾರ್ಣಿಕ್ ಹೇಳಿದರು.



ಚುನಾವಣೆ ನಡೆಸುವುದು ಚುನಾವಣಾ ಆಯೋಗದ ಮತ್ತು ಚುನಾವಣಾಧಿಕಾರಿಗಳ ಕೆಲಸ. ಆದರೆ, ಪಂಚಾಯತ್ ರಾಜ್ ಸಚಿವರು ಎಂದಿನಿಂದ ಚುನಾವಣೆ ನಡೆಸಲು ಶುರು ಮಾಡಿದ್ದಾರೆ? ನೀವೇ ಸಚಿವರನ್ನು ವಿಚಾರಿಸಿ ಎಂದು ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾಧ್ಯಮದವರಿಗೆ ಸಲಹೆ ಮಾಡಿದರು.

ಇಂತಹ ಸಾಂವಿಧಾನಿಕ ವಿಚಾರದಲ್ಲಿ ಮುಖ್ಯಮಂತ್ರಿಗೆ ಮಾತ್ರ ಅವಕಾಶ ಇರುತ್ತದೆ ಹೊರತು ಯಾವ ಮಂತ್ರಿಗಳಿಗೂ ಇಲ್ಲಿ ಅವಕಾಶ ಇರಲ್ಲ. ಈ ಪ್ರಜ್ಞೆ ಸಚಿವರಿಗಿಲ್ಲವೆ? ಮೂರ್ಖರನ್ನು ಅಧಿಕಾರದಲ್ಲಿ ಕೂರಿಸಿದರೆ ಹೀಗೆ ಹೇಳೊರು ಎಂದು ಟೀಕಿಸಿದರು.

ಎಸ್‌ಐಆರ್ ಪ್ರಕ್ರಿಯೆ ಕುರಿತು ತಪ್ಪು ಮಾಹಿತಿ ಹರಡುವ ಮೂಲಕ ದೇಶದ ಯುವ ಜನರನ್ನು ಈಗಾಗಲೇ ದಾರಿ ತಪ್ಪಿಸುವ ಪ್ರಯತ್ನ ಕಾಂಗ್ರೆಸ್ಸಿನಿಂದ ನಡೆಯುತ್ತಿದೆ.

ಪ್ರಜಾಪ್ರಭುತ್ವದ ರಕ್ಷಣೆ ಹೆಸರಿನಲ್ಲಿ ಜನರಲ್ಲಿ ಗೊಂದಲ ಹಾಗೂ ಸಮಾಜದಲ್ಲಿ ಅಶಾಂತಿ ಸೃಷ್ಟಿಸುವುದು ಸರಿಯಲ್ಲ. ಜನರಲ್ಲಿ ಅರಿವು ಮೂಡಿಸುವುದಕ್ಕಾಗಿಯೇ ಬಿಜೆಪಿ ‘ಪ್ರಜಾಪ್ರಭುತ್ವ ಉಳಿಸಿ, ಅರಾಜಕತೆ ಅಳಿಸಿ’ ಅಭಿಯಾನ ನಡೆಸಲು ಮುಂದಾಗಿದೆ ಎಂದರು.

ದೇಶದ 13 ಕೋಟಿ ಮತದಾರರ ಹೆಸರು ಅಳಿಸಲಾಗಿದೆ ಎಂಬ ಪ್ರಚಾರ ಮಾಡಲಾಗುತ್ತಿದೆ. ಯಾವ ಕಾರಣಕ್ಕಾಗಿ ಹೆಸರುಗಳನ್ನು ತೆಗೆದು ಹಾಕಲಾಗಿದೆ. ಅದಕ್ಕೆ ಸಂಬಂಧಿಸಿದ ನಿಯಮಗಳು ಹಾಗೂ ಪ್ರಕ್ರಿಯೆಗಳೇನು ಎಂಬುದನ್ನು ಜನರಿಗೆ ವಿವರಿಸುತ್ತಿಲ್ಲ. ಅರ್ಧಸತ್ಯ ಹೇಳಿ ಗೊಂದಲ ಸೃಷ್ಟಿಸಲಾಗುತ್ತಿದೆ ಎಂದು ಆರೋಪಿಸಿದರು.

ವಿಧಾನ ಪರಿಷತ್ ಮಾಜಿ ಸಭಾಪತಿ ರಘುನಾಥರಾವ್ ಮಲ್ಕಾಪುರೆ, ಮುಖಂಡರಾದ ಈಶ್ವರ ಸಿಂಗ್ ಠಾಕೂರ್, ಬಾಬು ವಾಲಿ, ಶಶಿಧರ ಹೊಸಳ್ಳಿ, ಕಿರಣ್ ಪಾಟೀಲ, ಸುಧೇಂದ್ರ ಕುಲಕರ್ಣಿ, ಸುನೀಲ ಗೌಳಿ, ಶ್ರೀನಿವಾಸ ಚೌಧ್ರಿ ಉಪಸ್ಥಿತರಿದ್ದರು. ಸಂವಾದ ಕಾರ್ಯಕ್ರಮ: ಜಿಲ್ಲೆ ಅಷ್ಟೆ ಅಲ್ಲ ಇಡೀ ನಾಡಿನಾದ್ಯಂತ ಮಂಗಳವಾರದಿಂದ ‘ಪ್ರಜಾಪ್ರಭುತ್ವ ಉಳಿಸಿ, ಅರಾಜಕತೆ ಅಳಿಸಿ’ ಎಂಬ ಅಭಿಯಾನ ಆರಂಭಿಸಲಾಗುತ್ತಿದ್ದು, ಶಾಲಾ–ಕಾಲೇಜು ವಿದ್ಯಾರ್ಥಿ ಗಳೊಂದಿಗೆ ನೇರ ಸಂವಾದ ಕಾರ್ಯಕ್ರಮ ಏರ್ಪಡಿಸಲಾಗುತ್ತಿದೆ ಎಂದು ಬಿಜೆಪಿ ಮಂಡಲ ಅಧ್ಯಕ್ಷ ಶಶಿಧರ ಹೊಸಳ್ಳಿ ತಿಳಿಸಿದರು.

ನಗರದ ಹೊರವಲಯದಲ್ಲಿರುವ ಲಿಂಗರಾಜ ಅಪ್ಪ ಎಂಜಿನಿಯರಿಂಗ್ ಕಾಲೇಜಿನಿಂದ ಈ ಅಭಿಯಾನ ಶುರು ಮಾಡಲಾಗುತ್ತಿದೆ ಎಂದು ಹೇಳಿದರು.

ಸ್ಥಳೀಯ ವಸ್ತುಗಳ ತಯರಿಕೆ, ಉತ್ಪನ್ನಗಳ ಮಾರುಕಟ್ಟೆಗೆ ಆದ್ಯತೆ: ಪ್ರಧಾನಿ ಮೋದಿ ಪರಿಕಲ್ಪನೆ



ಬೀದರ್, ನ. 5: ಸ್ಥಳೀಯ ಉತ್ಪನ್ನಗಳ ಮಾರಾಟಕ್ಕೆ ಉತ್ತೇಜನ ನೀಡುವ ಹಾಗೂ ಸ್ಥಳೀಯ ಉತ್ಪಾದಕರಿಗೆ ವ್ಯಾಪಾರ ಮಾಡಲು ಮಾರುಕಟ್ಟೆ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ರೋಟರಿ ಕ್ಲಬ್ ಆಫ್ ಬೀದರ್ ಫೋರ್ಟ್ ವತಿಯಿಂದ ವಿಶೇಷ ಮೇಳ ಆಯೋಜಿಸಲಾಗಿತ್ತು.

ಮೇಳವನ್ನು ಉದ್ಘಾಟಿಸಿ ಮಾತನಾಡಿದ ಬೀದರ್ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಿ.ಎಸ್.ಬಿರಾದರ್, ಪ್ರಧಾನಿ ನರೇಂದ್ರ ಮೋದಿ ಅವರ ಪರಿಕಲ್ಪನೆ ಕೇವಲ ದೊಡ್ಡ ಉದ್ಯಮಗಳ ಮೂಲಕ ಭಾರತವನ್ನು ಅಭಿವೃದ್ಧಿಪಡಿಸುವುದಲ್ಲ. ಪ್ರತಿಯೊಬ್ಬ ಸಣ್ಣ ಪುಟ್ಟ ಉತ್ಪಾದಕರೂ ಕೂಡ ಬೆಳೆಯಬೇಕು. ‘ವೋಕಲ್ ಫಾರ್ ಲೋಕಲ್’ ಎಂಬ ಅವರ ಪರಿಕಲ್ಪನೆಯಂತೆ ಸ್ಥಳೀಯ ಉತ್ಪನ್ನಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಬುಡದಿಂದ ಅಮೂಲಾಗ್ರವಾಗಿ ಅಭಿವೃದ್ಧಿ ಹೊಂದಿದಾಗ ಮಾತ್ರ ದೇಶದ ಸಂಪೂರ್ಣ ಅಭಿವೃದ್ಧಿ ಸಾಧ್ಯ. ಅಭಿವೃದ್ಧಿಯಲ್ಲಿ ಎಲ್ಲ ವರ್ಗದವರ ಪಾಲೂ ಇರಬೇಕು ಎಂದರು.

ದೇಶದ ಅಭಿವೃದ್ಧಿಗೆ ಬೃಹತ್ ಕಾರ್ಖಾನೆಗಳು ಹಾಗೂ ಕಟ್ಟಡಗಳ ನಿರ್ಮಾಣವಷ್ಟೇ ಮುಖ್ಯವಲ್ಲ. ಸ್ಥಳೀಯ ರೈತರು ಹಾಗೂ ಯುವಕ–ಯುವತಿಯರು ತಯಾರಿಸುವ ದೇಶೀಯ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಕಲ್ಪಿಸುವುದೂ ಕೂಡ ದೇಶದ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ದೊಡ್ಡ ಮೀನುಗಳು ಸಣ್ಣ ಮೀನುಗಳನ್ನು ನುಂಗಬಾರದು. ಸ್ಥಳೀಯ ಹಾಗೂ ಸರ್ಣಾಣ ಪ್ರಮಾಣದ ಉತ್ಪನ್ನಗಳನ್ನು ಖರೀದಿಸುವ ಮೂಲಕ ರೈತರು ಮತ್ತು ಸಣ್ಣ ಉತ್ಪಾದಕರ ಆರ್ಥಿಕ ಪ್ರಗತಿಯಾಗುತ್ತದೆ. ಅವರ ಪ್ರಗತಿಯಿಲ್ಲದೇ ಕೇವಲ ಕೆಲವೇ ಜನರ ಪ್ರಗತಿಯಿಂದ ಸಂಪೂರ್ಣ ಭಾರತದ ಪ್ರಗತಿ ಸಾಧ್ಯವಿಲ್ಲ. ಆದ್ದರಿಂದ ವಿದೇಶಿ ವಸ್ತುಗಳ ಖರೀದಿ ವ್ಯಾಮೋಹ ಬಿಟ್ಟು ಸ್ಥಳೀಯ ಉತ್ಪನ್ನಗಳನ್ನೇ ಖರೀದಿಸಬೇಕು. ಈ ಮೂಲಕ ಸ್ಥಳೀಯ ಉತ್ಪನ್ನಗಳಿಗೆ ಮಾರು ಕಟ್ಟೆ ಕಲ್ಪಿಸಲು ದೇಶದ ಪ್ರತಿಯೊಬ್ಬ ಪ್ರಜೆಯೂ ಕೈಜೋಡಿಸಬೇಕು ಎಂದು ಹೇಳಿದರು.

ಬಸವರಾಜ ಧನೂರ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಆನ್‌ಲೈನ್ ಮೂಲಕ ವಸ್ತುಗಳನ್ನು ಖರೀದಿಸುವ ಪ್ರವೃತ್ತಿ ಹೆಚ್ಚಾಗಿದೆ. ಇದೇ ಮಾದರಿಯಲ್ಲಿ ಸ್ಥಳೀಯ ಉತ್ಪನ್ನಗಳೂ ಆನ್‌ಲೈನ್ ಮೂಲಕ ಗ್ರಾಹಕರಿಗೆ ಸುಲಭವಾಗಿ ಲಭ್ಯವಾಗುವಂತಾಗಬೇಕು. ಈ ನಿಟ್ಟಿನಲ್ಲಿ ರೋಟರಿ ಕ್ಲಬ್ ಸ್ಥಳೀಯ ಉತ್ಪಾದಕರಿಗೆ ಮಾರುಕಟ್ಟೆ ಒದಗಿಸುವ ಪ್ರಯತ್ನ ಮಾಡುತ್ತಿದೆ. ಮೇಳದಲ್ಲಿ ಜಿಲ್ಲೆಯ 22ರಿಂದ 23 ಸ್ಥಳೀಯ ಉತ್ಪಾದಕರು ತಮ್ಮ ಉತ್ಪನ್ನಗಳ ಮಳಿಗೆಗಳನ್ನು ತೆರೆದು ಗ್ರಾಹಕರಿಗೆ ಪರಿಚಯಿಸಿದರು.

ಎರಡನೇ ಪುಟದಿಂದ

ಕೆಪಿಎಸ್‌ಸಿ 362 ಕಳಂಕಿತ ಅಧಿಕಾರಿಗಳ ಸೇವೆ

ಈ ಪ್ರಕ್ರಿಯೆಯಲ್ಲಿ 2011ರ ಕಳಂಕಿತ ನೇಮಕಾತಿ ಪಟ್ಟಿಯಲ್ಲಿ ಇಲ್ಲದವರು, ಪ್ರಕರಣದ ಆರು ಮೇಲ್ಮನವಿದಾರರು ಹಾಗೂ ಕರ್ನಾಟಕ ಆಡಳಿತಾತಕ ನ್ಯಾಯಮಂಡಳಿಯಲ್ಲಿ (ಕೆಎಟಿ) ಪ್ರಕರಣ ಬಾಕಿ ಇರುವ ಅರ್ಜಿದಾರರು ಸೇರಿದಂತೆ ಅರ್ಹ ಅಭ್ಯರ್ಥಿಗಳು ಭಾಗವಹಿಸಬಹುದು. ಇವರಿಗೆ ಮಾತ್ರವಲ್ಲದೆ, ಪ್ರಸ್ತುತ ಅರ್ಹತೆ ಹೊಂದಿರುವ ಇತರ ಅಭ್ಯರ್ಥಿಗಳಿಗೂ ಒಂದು ಬಾರಿಯ ಅವಕಾಶವಾಗಿ ವಯೋಮಿತಿ ಸಡಿಲಿಕೆ ನೀಡಬೇಕು ಎಂದು ನ್ಯಾಯಾಲಯ ನಿರ್ದೇಶಿಸಿದೆ.

ಹಿರಿತನ ಮತ್ತು ಹಿಂಬಾಕಿ ವೇತನ ಸಿಗದು

ಹೊಸ ನೇಮಕಾತಿಯಲ್ಲಿ ಆಯ್ಕೆಯಾಗುವ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಹೊರಡಿಸಿದ ದಿನಾಂಕದಿಂದ ಮಾತ್ರ ಹಿರಿತನ ಅನ್ವಯವಾಗಲಿದೆ. ಹಿಂದಿನ ಸೇವಾವಧಿಯನ್ನು ಆಧರಿಸಿ ಹಿಂಬಾಕಿ ವೇತನ ಅಥವಾ ಹಿಂದಿನ ದಿನಾಂಕದಿಂದಲೇ ನೇಮಕಾತಿ ಪರಿಗಣಿಸುವ ಸೌಲಭ್ಯ ದೊರೆಯುವುದಿಲ್ಲ. ಈಗಾಗಲೇ ಸೇವೆಯಲ್ಲಿರುವ ಅಧಿಕಾರಿಗಳಿಗೂ ಹೊಸದಾಗಿ ನೇಮಕಗೊಂಡ ದಿನಾಂಕದಿಂದ ಮಾತ್ರ ಹಿರಿತನ ಲೆಕ್ಕ ಹಾಕಲಾಗುತ್ತದೆ. ಆದರೆ, ಅವರ ಹಿಂದಿನ ಸೇವಾವಧಿಯನ್ನು ಪಿಂಚಣಿ ಮತ್ತು ನಿವೃತ್ತಿ ಸೌಲಭ್ಯಗಳ ಲೆಕ್ಕಾಚಾರಕ್ಕೆ ಪರಿಗಣಿಸಬಹುದು ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ.

ಸರ್ಕಾರದ ಮುಂದಿರುವ ಆಯ್ಕೆಗಳೇನು?

ಕಾನೂನು ಇಲಾಖೆಯು ಕಡಿಮೆ ಅಪಾಯದ ಪರ್ಯಾಯವನ್ನೂ ಸೂಚಿಸಿದೆ. 2011ನೇ ಬ್ಯಾಚ್‌ಗೆ ಯಾವುದೇ ವಿಶೇಷ ಆದ್ಯತೆ ನೀಡದೆ, ಎಲ್ಲ ಅರ್ಹ ಅಭ್ಯರ್ಥಿಗಳಿಗೆ ಮುಕ್ತವಾಗಿರುವ ತಾತ್ಕಾಲಿಕ ಅಥವಾ ಗುತ್ತಿಗೆ ಆಧಾರಿತ ನೇಮಕಾತಿ ವ್ಯವಸ್ಥೆಯನ್ನು ಪರಿಗಣಿಸಬಹುದು ಎಂದು ತಿಳಿಸಿದೆ. ಆದರೆ ಹಾಲಿ ಅಧಿಕಾರಿಗಳ ಸೇವೆಯನ್ನು ಮುಂದುವರಿಸುವುದು ಅಥವಾ ಪರಿವರ್ತನಾ ವ್ಯವಸ್ಥೆ ರೂಪಿಸುವುದು ಅಗತ್ಯವೆನಿಸಿದರೆ, ಸರ್ಕಾರ ಮೊದಲು ಸುಪ್ರೀಂ ಕೋರ್ಟ್‌ನಿಂದ ಸ್ಪಷ್ಟನೆ ಪಡೆಯಬೇಕು ಎಂದು ಸಲಹೆ ನೀಡಿದೆ.

ವಕೀಲರ ಮೇಲೆ ಹಲ್ಲೆ-ಕೊಲೆ ಆರೋಪ: ರಕ್ಷಣೆಗೆ ಆಗ್ರಹಿಸಿ ಜಿಲ್ಲಾ ವಕೀಲರ ಹೋರಾಟ

ಕಲಬುರಗಿ, ನ. 5: ವಕೀಲರ ಮೇಲಿನ ಹಲ್ಲೆ ಹಾಗೂ ವಕೀಲರ ವಿರುದ್ಧ ಕೊಲೆ ಪ್ರಕರಣ ದಾಖಲಿಸುತ್ತಿರುವುದನ್ನು ಖಂಡಿಸಿ ವಕೀಲರು ನ್ಯಾಯಾಲಯದ ಕಲಾಪಗಳನ್ನು ಬಹಿಷ್ಕರಿಸಿ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಬೃಹತ್ ಪ್ರತಿಭಟನೆ ಮಾಡಿದರು.

ಪ್ರತಿಭಟನೆಕಾರರು ಟೈರ್ ಸುಟ್ಟು, ವಾಹನಗಳ ಸಂಚಾರ ತಡೆದು ಆಕ್ರೋಶ ಹೊರಹಾಕಿದರು. ಸಂಘದ ಅಧ್ಯಕ್ಷ ಎಸ್.ವಿ. ಪಸಾರ್ ಅವರ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಗೌ–ರೀಶ್ ಎಸ್. ಕಾಶಂಪುರ, ರೇಖಾ ಪಾಟೀಲ್, ಅನಂತ ಎಸ್. ಜಹಾಗೀರದಾರ್, ಮಂಜುನಾಥ ಗಿನ್ನಿ ಸೇರಿದಂತೆ ನೂರಾರು ಜನ ನ್ಯಾಯ ವಾದಿಗಳು ಪಾಲ್ಗೊಂಡಿದ್ದರು.



ಪ್ರತಿಭಟನೆಕಾರರು ನಂತರ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಿ, ಬೆಂಗಳೂರಿನ ವೈಟ್‌ಫೀಲ್ಡ್‌ನ ವಕೀಲ ಮಂಜುನಾಥ ಅವರ ಮೇಲೆ ಗುಂಡಿನ ದಾಳಿ ನಡೆಸಿ ಕೊಲೆ ಮಾಡಿರುವುದು ಮತ್ತು ಅನ್ನಪೂರ್ಣೇಶ್ವರ ನಗರದ ಶ್ರೀರಾಮ್ ಅವರ ಬರ್ಬರ ಹತ್ಯೆ ಹಾಗೂ ಗೌರಿಬಿದನೂರಿನ ಹಿರಿಯ ವಕೀಲ ಸಣ್ಣಕ್ಕಿ ವೆಂಕಟರಮಣಪ್ಪ ಅವರ ಮೇಲೆ ಹಲ್ಲೆ ನಡೆಸಿರುವುದನ್ನು ಪ್ರತಿಭಟನಾಕಾರರು ತೀವ್ರವಾಗಿ ಖಂಡಿಸಿದರು. ವಕೀಲರ ಮೇಲೆ ಹಲ್ಲೆ, ದೌರ್ಜನ್ಯ ಮತ್ತುಬೆದರಿಕೆ ಪ್ರಕರಣಗಳು ನಿರಂತ ರವಾಗಿ ನಡೆಯುತ್ತಿವೆ. ವಕೀಲರರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳು ವಲ್ಲಿ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿದರು.

ವಕೀಲರ ಸಂರಕ್ಷಣಾ ಕಾಯ್ದೆಗೆ ತಿದ್ದುಪಡಿ ತಂದು ಹಲ್ಲೆ ನಡೆಸುವವರಿಗೆ ಏಳು ವರ್ಷಗಳ ಕಠಿಣ ಶಿಕ್ಷೆ ಹಾಗೂ ಜಾಮೀನುರಹಿತ ಬಂಧನಕ್ಕೆ ಅವಕಾಶ ಕಲ್ಪಿಸಬೇಕು. ಹಲ್ಲೆ ನಡೆದ ತಕ್ಷಣ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಪ್ರಕರಣ ದಾಖಲಿಸಿ ಆರೋಪಿಗಳನ್ನು ಬಂಧಿಸಬೇಕು. ವಕೀಲರಿಗೆ ಸೂಕ್ತ ಪೊಲೀಸ್ ಭದ್ರತೆ ಒದಗಿಸಬೇಕು. ಪೊಲೀಸ್ ಠಾಣೆಗಳಲ್ಲಿ ವಕೀಲರಿಗೆ ಗೌರವ ನೀಡಿ, ಅವರು ಸಲ್ಲಿಸುವ ದೂರುಗಳ ಮೇಲೆ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಮಂಜುನಾಥ ಮತ್ತು ಸಣ್ಣಕ್ಕಿ ವೆಂಕಟರಮಣಪ್ಪ ಅವರ ಮೇಲಿನ ಪ್ರಕರಣಗಳಲ್ಲಿ ಆರೋಪಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ಪೊಲೀಸ್ ಠಾಣೆಗಳಲ್ಲಿ ವಕೀಲರಿಗೆ ಕನಿಷ್ಠ ಗೌರವ ನೀಡುತ್ತಿಲ್ಲ ಹಾಗೂ ಕುಳಿತು ಕೊಳ್ಳಲು ಆಸನವನ್ನೂ ಒದಗಿಸದೆ ಅಧಿಕಾರಿಗಳು ಅಹಂಕಾರದಿಂದ ವರ್ತಿಸುತ್ತಿದ್ದಾರೆ ಎಂದು ಆಕ್ರೋಶ ಹೊರಹಾಕಿದ ಅವರು, ಪೊಲೀಸ್ ಠಾಣೆಗಳು ಕಾನೂನು ಬಾಹಿರವಾಗಿ ಕಾಂಗರೂ ಕೋರ್ಟ್‌ಗಳಾಗಿ (ಸಮಾಂತರ ನ್ಯಾಯಾಲಯಗಳು) ಬದಲಾಗುತ್ತಿದ್ದು, ಸಿವಿಲ್ ವ್ಯಾಜ್ಯಗಳನ್ನು ಪೊಲೀಸರೇ ಇತ್ಯರ್ಥಪಡಿಸುತ್ತಿರುವ ಪ್ರವೃತ್ತಿ ಹೆಚ್ಚಾಗಿದೆ. ಪೊಲೀಸ್ ಮಹಾನಿರ್ದೇಶಕರು ಮತ್ತು ಆಯುಕ್ತರು ಸಿವಿಲ್ ವ್ಯಾಜ್ಯಗಳಲ್ಲಿ ಹಸ್ತಕ್ಷೇಪ ಮಾಡಬಾರದು ಎಂದು ಸುತ್ತೋಲೆ ಹೊರಡಿಸಿದ್ದರೂ, ಇನ್‌ಸ್ಪೆಕ್ಟರ್, ಸಬ್‌ಇನ್‌ಸ್ಪೆಕ್ಟರ್ ಹಾಗೂ ಎಸಿಪಿ ಮಟ್ಟದ ಅಧಿಕಾರಿಗಳು ಸುಪ್ರೀಂ ಕೋರ್ಟ್ ಆದೇಶಗಳನ್ನು ಉಲ್ಲಂಘಿಸು ತ್ತಿದ್ದಾರೆ ಎಂದು ಆರೋಪಿಸಿದರು.

ವಕೀಲರ ಹತ್ಯೆ ಪ್ರಕರಣಗಳ ಆರೋಪಿಗಳನ್ನು ಕೂಡಲೇ ಬಂಧಿಸಿ, ಸೂಕ್ತ ತನಿಖೆ ನಡೆಸಿ ಕಠಿಣ ಶಿಕ್ಷೆ ವಿಧಿಸುವಂತೆ, ವಕೀಲರ ಸಂರಕ್ಷಣಾ ಕಾಯ್ದೆಗೆ ತಿದ್ದುಪಡಿ ತಂದು, ಜಾಮೀನು ರಹಿತ ಕಠಿಣ ಕಲಗಳನ್ನು ಸೇರಿಸಬೇಕು.

ಅಪರಾಧಿಗಳಿಗೆ ಕನಿಷ್ಠ 10 ವರ್ಷ ಗಳ ಜೈಲುಶಿಕ್ಷೆ ವಿಧಿಸುವಂತೆ ಕಾನೂನು ರೂಪಿಸುವಂತೆ, ಠಾಣೆಗೆ ಬರುವ ನಾಗರಿಕರು ಹಾಗೂ ವಕೀಲರನ್ನು ಗೌರವಯುತವಾಗಿ ನಡೆಸಿಕೊಳ್ಳಲು ಗೃಹ ಇಲಾಖೆಯಿಂದ ಕಡ್ಡಾಯ ಎಸ್‌ಒಪಿ ಜಾರಿಗೊಳಿಸುವಂತೆ, ಯಾವುದೇ ಕಾರಣಕ್ಕೂ ಪೊಲೀಸ್ ಠಾಣೆಗಳಲ್ಲಿ ಸಿವಿಲ್ ವ್ಯಾಜ್ಯಗಳನ್ನು ಇತ್ಯರ್ಥಪಡಿಸಬಾರದು, ನಿಯಮ ಉಲ್ಲಂಘಿಸುವ ಅಧಿಕಾರಿಗಳ ವಿರುದ್ಧ ಕಠಿಣಕ್ರಮ ಕೈಗೊಳ್ಳುವಂತೆ ಅವರು ಒತ್ತಾಯಿಸಿದರು. ಇದೇ ಸಂದರ್ಭದಲ್ಲಿ ಕಬ್ಬಿಗೆ 5500 ರೂ.ಗಳ ಬೆಂಬಲ ಬೆಲೆಯನ್ನು ನೀಡಬೇಕು ಎಂದು ಅವರು ಒತ್ತಾಯಿಸಿದರು.

ಕರ್ನಾಟಕ ಪಶು ವೈದ್ಯಕೀಯ ವಿವಿ ಯುವಜನೋತ್ಸವಕ್ಕೆ ಚಾಲನೆ



ಬೀದರ, ನ. 5: ತಾಲ್ಲೂಕಿನ ಕಮಠಾಣ ಸಮೀಪದ ಕರ್ನಾಟಕ ಪಶು ವೈದ್ಯಕೀಯ ವಿಶ್ವವಿದ್ಯಾಲಯದಲ್ಲಿ ವಿಶ್ವವಿದ್ಯಾಲಯದ 20ನೇ ಅಂತರ ಕಾಲೇಜು ಯುಜನೋತ್ಸವಕ್ಕೆ ಕುಲಪತಿ ಪ್ರೊ.ಎ.ಟಿ.ರಾಮಚಂದ್ರ ನಾಯಕ ಅವರು ಚಾಲನೆ ನೀಡಿದರು.

ವಿಶ್ವವಿದ್ಯಾಲಯ ಅಧೀನದ 9 ಕಾಲೇಜುಗಳ ವಿದ್ಯಾರ್ಥಿಗಳು ಯುವಜನೋತ್ಸವ ಅಂಗವಾಗಿ ಹಮ್ಮಿಕೊಳ್ಳಲಾದ ಸಾಂಸ್ಕೃತಿಕ, ಸಾಹಿತ್ಯಿಕ, ಲಲಿತಕಲೆ, ಸಂಗೀತ, ನೃತ್ಯ, ನಾಟಕ, ಜಾನಪದ ಕಲೆ ಪ್ರದರ್ಶನ ಹಾಗೂ ಮನೋರಂಜನಾ ಸ್ಪರ್ಧೆಗಳಲ್ಲಿ ಭಾಗವಹಿಸಿದರು.

ಕ್ರೀಡಾಪಟುಗಳು ಕ್ರೀಡಾ ಚಟುವಟಿಕೆಗಳಲ್ಲಿ ಶಿಸ್ತಿನಿಂದ ಪಾಲ್ಗೊಳ್ಳಬೇಕು. ಸೋಲು–ಗೆಲುವನ್ನು ಸಮಾನವಾಗಿ ಸ್ವೀಕರಿಸಬೇಕು ಎಂದು ಯುವಜನೋತ್ಸವವನ್ನು ಉದ್ಘಾಟಿಸಿದ ವಿಶ್ವವಿದ್ಯಾಲಯದ ಕುಲಪತಿ ಡಾ. ಎ.ಟಿ. ರಾಮಚಂದ್ರ ನಾಯಕ್ ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಸುರೇಶ ಚನಶೆಟ್ಟಿ ಮಾತನಾಡಿ, ಪಶು ವೈದ್ಯಕೀಯ ವಿಶ್ವವಿದ್ಯಾಲಯ ಹಾಗೂ ಕಾಲೇಜು ಬೀದರ್ ಜಿಲ್ಲೆಯ ಸಾಮಾಜಿಕ, ಆರ್ಥಿಕ ಹಾಗೂ ವೈಜ್ಞಾನಿಕ ಬೆಳವಣಿಗೆಗೆ ತನ್ನದೇ ಆದ ಕೊಡುಗೆ ನೀಡಿವೆ ಎಂದು ಹೇಳಿದರು.

ಜೆಡಿ ವ್ಯಾನ್ಸ್ 2028ರ ಅಧ್ಯಕ್ಷೀಯ ಸ್ಪರ್ಧೆ ಅನುಮಾನ: ಟ್ರಂಪ್

ಮಧ್ಯಂತರ ಚುನಾವಣೆಯಲ್ಲಿ ಹಿನ್ನಡೆ ಬೆನ್ನಲ್ಲೇ ಸ್ಪಷ್ಟನೆ ನೀಡಿದ ಅಮೆರಿಕ ಅಧ್ಯಕ್ಷ; ಇರಾನ್ ಯುದ್ಧವೇ ಪರಾಜಯಕ್ಕೆ ಕಾರಣ ಎಂದ ಉಪಾಧ್ಯಕ್ಷ

ವಾಷಿಂಗ್ಟನ್,ನ.5: ಮಧ್ಯಂತರ ಚುನಾವಣೆಯಲ್ಲಿ ಡೆಮಾಕ್ರಟ್‌ಗಳ ಎದುರು ರಿಪಬ್ಲಿಕನ್ ಪಕ್ಷಕ್ಕೆ ಹಿನ್ನಡೆಯಾದ ಬೆನ್ನಲ್ಲೇ, 2028ರ ಅಧ್ಯಕ್ಷೀಯ ಚುನಾವಣೆಯಲ್ಲಿ ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಸ್ಪರ್ಧಿಸುವ ಕುರಿತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅನುಮಾನ ವ್ಯಕ್ತಪಡಿಸಿದ್ದಾರೆ. ಈ ಹೇಳಿಕೆಯು ವ್ಯಾನ್ಸ್ ರಾಜಕೀಯ ಭವಿಷ್ಯದ ಕುರಿತು ತೀವ್ರ ಚರ್ಚೆಗೆ ಕಾರಣವಾಗಿದೆ.

ಗುರುವಾರ ಶ್ವೇತಭವನದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಟ್ರಂಪ್, "ನಾನು ಅವರೊಂದಿಗೆ (ವ್ಯಾನ್ಸ್) ಹಲವು ವಿಷಯಗಳ ಬಗ್ಗೆ ಚರ್ಚಿಸುತ್ತೇನೆ. ಆದರೆ ಮುಂದೇನಾಗುತ್ತದೋ ಕಾದು ನೋಡಬೇಕಿದೆ. ಯಾರು ಸ್ಪರ್ಧಿಸಲು ಬಯಸಿದ್ದಾರೆ ಎಂಬುದು ಯಾರಿಗೂ ತಿಳಿಯುವುದಿಲ್ಲ" ಎಂದಿದ್ದಾರೆ.

"ಅನೇಕ ಜನರು ಸ್ಪರ್ಧಿಸಬಹುದು, ಬಹುಶಃ ತುಂಬಾ ಜನರು ಸ್ಪರ್ಧೆಗೆ ಇಳಿಯಬಹುದು ಅಥವಾ ಯಾರೂ ಸ್ಪರ್ಧಿಸದೇ ಇರಬಹುದು. ಬಹುಶಃ ಅವರು (ವ್ಯಾನ್ಸ್) ಸಹ ಸ್ಪರ್ಧಿಸದೇ ಇರಬಹುದು, ಕೊನೆಗೆ ಯಾರು ಅಖಾಡಕ್ಕೆ ಇಳಿಯುತ್ತಾರೆ ಎಂದು ನನಗೂ ಗೊತ್ತಿಲ್ಲ" ಎಂದು ಟ್ರಂಪ್



ತಿಳಿಸಿದರು.

'ಇರಾನ್ ಯುದ್ಧವೇ ಸೋಲಿಗೆ ಕಾರಣ': ವಾಗ್ದಾಳಿ ನಡೆಸಿದ್ದ ವ್ಯಾನ್ಸ್: ಇದಕ್ಕೂ ಮುನ್ನ, ಉಪಾಧ್ಯಕ್ಷ ಜೆಡಿ ವ್ಯಾನ್ಸ್, ಟ್ರಂಪ್ ಆಡಳಿತದಿಂದ ಕೊಂಚ ಅಂತರ ಕಾಯ್ದುಕೊಳ್ಳುತ್ತಾ, ಮಧ್ಯಂತರ ಚುನಾವಣೆಯ ಸೋಲಿಗೆ ಸರ್ಕಾರದ 'ಇರಾನ್ ಯುದ್ಧ'ವೇ ಮುಖ್ಯ ಕಾರಣ ಎಂದು ಆರೋಪಿಸಿದ್ದರು.

ಸಾಮಾಜಿಕ ಜಾಲತಾಣ 'ಎಕ್ಸ್' ನಲ್ಲಿ ದೀರ್ಘ ಪೋಸ್ಟ್ ಹಂಚಿಕೊಂಡಿದ್ದ ವ್ಯಾನ್ಸ್, "ನಾವು ಸೋಲಲು ಯುದ್ಧವೇ ಪ್ರಮುಖ ಕಾರಣ" ಎಂದು ಬಹಿರಂಗವಾಗಿ ಬರೆದುಕೊಂಡಿದ್ದರು.

"2024ರಲ್ಲಿ ಟ್ರಂಪ್ ಅವರನ್ನು ಬೆಂಬಲಿಸಿದ್ದ ರಿಪಬ್ಲಿಕನ್ ಮತದಾರರು ಈ ಬಾರಿಯೂ ಮತ ಚಲಾಯಿಸಿದ್ದಾರೆ. ಆದರೆ ಈ ಯುದ್ಧ, ಹೆಚ್ಚುತ್ತಿರುವ ಇಂಧನ ಬೆಲೆ ಮತ್ತು ಆಡಳಿತವು ತನ್ನ 'ಅಮೆರಿಕ ಫಸ್ಟ್' (ಮೊದಲು ಅಮೆರಿಕ) ನೀತಿಯಿಂದ ದೂರ ಸರಿಯುತ್ತಿರುವುದರ ವಿರುದ್ಧ ಜನ ಅಸಮಾಧಾನಗೊಂಡಿದ್ದಾರೆ" ಎಂದು ವ್ಯಾನ್ಸ್ ಟೀಕಿಸಿದ್ದರು.

ಟ್ರಂಪ್ ವಿರುದ್ಧ ಅಪರೂಪದ ಬಹಿರಂಗ ಅಸಮಾಧಾನ: ಇರಾನ್ ವಿರುದ್ಧದ ಯುದ್ಧವನ್ನು ಪ್ರಾರಂಭದಿಂದಲೂ ವಿರೋಧಿಸುತ್ತಿದ್ದ ವ್ಯಾನ್ಸ್, ಸಾರ್ವಜನಿಕವಾಗಿ ಆಡಳಿತದ ನಿರ್ಧಾರ ಮರ್ಥಿಸಿಕೊಳ್ಳುತ್ತಿದ್ದರೂ, ಆಂತರಿಕವಾಗಿ ತಮ್ಮ ವಿರೋಧ ಕಾಯ್ದುಕೊಂಡಿದ್ದರು. ಇದೀಗ ಮಧ್ಯಂತರ ಚುನಾವಣೆಯಲ್ಲಿ ಸೆನೆಟ್ ಕೈತಪ್ಪಿದ ಬೆನ್ನಲ್ಲೇ, ತಮ್ಮ ಅಸಮಾಧಾನವನ್ನು ಬಹಿರಂಗಪಡಿಸಿದ್ದಾರೆ. ಟ್ರಂಪ್ ಅವರನ್ನು ಇರಾನ್ ಶಾಂತಿ ಮಾತುಕತೆಯ ನೇತೃತ್ವ ವಹಿಸಲು ನೇಮಿಸಿದ್ದರೂ, ಯುದ್ಧದ ದುಬಾರಿ ವೆಚ್ಚದ ಕುರಿತು ವ್ಯಾನ್ಸ್ ಧ್ವನಿ ಎತ್ತಿದ್ದಾರೆ. "ಮುಂದಿನ 6 ವರ್ಷಗಳ ಕಾಲ ಸೆನೆಟ್ ಕಳೆದುಕೊಳ್ಳುವುದು ಸೂಕ್ತ ನಿರ್ಧಾರ ಮತ್ತು ಅದಕ್ಕೆ ಈ ಯುದ್ಧವೇ ಕಾರಣ ಎಂದು ಯಾರಾದರೂ ವಾದಿಸುವುದಾದರೆ ಮಾಡಲಿ. ಅದಕ್ಕಾದ ಬೆಲೆ ತೆರಲು ನಾವು ಸಿದ್ಧ ಎನ್ನುವುದಾದರೆ, ಒಪ್ಪಿ ಅಥವಾ ಬಿಡಿ, ಕನಿಷ್ಠ ಅದನ್ನಾದರೂ ಪ್ರಾಮಾಣಿಕವಾಗಿ ಒಪ್ಪಿಕೊಳ್ಳಿ" ಎಂದು ವ್ಯಾನ್ಸ್ ತಮ್ಮ ಪೋಸ್ಟ್‌ನಲ್ಲಿ ಪ್ರಶ್ನಿಸಿದ್ದರು. "ಆದರೆ ನಾವೇಕೆ ಸೋತಿದ್ದೇವೆ ಎಂಬ ಸತ್ಯ ಎಲ್ಲರಿಗೂ ತಿಳಿದಿದೆ. ನಾವು ಎಲ್ಲಿಗೆ ಸಾಗುತ್ತಿದ್ದೇವೆ ಎಂಬ ಬಗ್ಗೆ ಯಾವುದೇ ಪ್ರಾಮಾಣಿಕ ಚರ್ಚೆ ಆರಂಭವಾಗಬೇಕಿದ್ದರೂ ಅದು ಇಲ್ಲಿಂದಲೇ ಶುರುವಾಗಬೇಕು" ಎಂದು ವ್ಯಾನ್ಸ್ ಪ್ರತಿಪಾದಿಸಿದ್ದರು.

ಯುದ್ಧ ನಿರ್ಧಾರವನ್ನು ಸಮರ್ಥಿಸಿಕೊಂಡ ಅಧ್ಯಕ್ಷ: ಮಧ್ಯಂತರ ಚುನಾವಣೆಯ ಹಿನ್ನಡೆಗೆ ಇರಾನ್ ಸಂಘರ್ಷವೇ ಪ್ರಮುಖ ಕಾರಣ ಎಂಬುದನ್ನು ಒಪ್ಪಿಕೊಂಡರೂ, ಅಧ್ಯಕ್ಷ ಟ್ರಂಪ್ ಮಾತ್ರ ತಮ್ಮ ಇರಾನ್ ವಿರುದ್ಧದ ಮಿಲಿಟರಿ ಕಾರ್ಯಾಚರಣೆ ನಿರ್ಧಾರವನ್ನು ಬಲವಾಗಿ ಸಮರ್ಥಿಸಿಕೊಂಡಿದ್ದಾರೆ. ದೇಶದ ಹಿತದೃಷ್ಟಿಯಿಂದ ಇರಾನ್ ಮೇಲಿನ ಮಿಲಿಟರಿ ದಾಳಿ ಅನಿವಾರ್ಯವಾಗಿತ್ತು ಎಂದು ಟ್ರಂಪ್ ಪ್ರತಿಪಾದಿಸಿದ್ದಾರೆ.

ಇಸ್ರೇಲ್ ಧಾರ್ಮಿಕ ಪಕ್ಷಗಳ ಬೆಂಬಲ ಕಳೆದುಕೊಂಡ ನೆತನ್ಯಾಹು: ಪ್ರತಿಸ್ಪರ್ಧಿಗಳು ಸರ್ಕಾರ ರಚಿಸುವ ಸಾಧ್ಯತೆ

ಟೆಲ್‌ಅವೀವ್, ನ.5: ಬೆಂಜಮಿನ್ ನೆತನ್ಯಾಹು ಅವರೊಂದಿಗೆ ದೀರ್ಘಕಾಲದಿಂದ ಒಡನಾಟ ಹೊಂದಿದ್ದ ತೀವ್ರ-ಸಾಂಪ್ರದಾಯಿಕ ಯಹೂದಿ ಪಕ್ಷ ನೆತನ್ಯಾಹು ಅವರನ್ನು ಇಸ್ರೇಲ್ ಪ್ರಧಾನಿಯಾಗಿ ಮುಂದುವರೆಯುವುದಕ್ಕೆ ಬೆಂಬಲ ನೀಡಲು ನಿರಾಕರಿಸಿತು.

ನೆತನ್ಯಾಹು ಅವರ ಪ್ರತಿಸ್ಪರ್ಧಿ ಗಾದಿ ಐಸೆನ್‌ಕೋಟ್‌ಗೆ ಸರ್ಕಾರ ರಚಿಸಲು ಮೊದಲ ಅವಕಾಶ ಸಿಗುತ್ತದೆ ಎಂಬ ಸೂಚನೆಗಳು ಸ್ಪಷ್ಟವಾಗುತ್ತಿದ್ದಂತೆಯೇ ಈ ಬೆಳವಣಿಗೆ ಸಂಭವಿಸಿದೆ. ಅಕ್ಟೋಬರ್ 27 ರ ಚುನಾವಣೆಯ ನಂತರ ಅಧ್ಯಕ್ಷ ಐಸಾಕ್ ಹೆರ್ಜಾಗ್ ರಾಜಕೀಯ ಪಕ್ಷಗಳೊಂದಿಗೆ ಎರಡನೇ ದಿನದ ಸಮಾಲೋಚನೆ ನಡೆಸಿದರು. ಈ ಚುನಾವಣೆಯಲ್ಲಿ ನೆತನ್ಯಾಹು ಅಥವಾ ಐಸೆನ್‌ಕೋಟ್ ಅವರ ಪಕ್ಷಕ್ಕೆ ಸಾಕಷ್ಟು ಬಹುಮತ ಸಿಕ್ಕಿಲ್ಲ. ಹಿಂದಿನ 5 ಚುನಾವಣೆಗಳ ನಂತರ ನೆತನ್ಯಾಹು ಅವರನ್ನು ಬೆಂಬಲಿಸಿದ ಯುನೈಟೆಡ್ ಟೋರಾ ಜುದಾಯಿಸಂ, ಹೆರ್ಜಾಗ್ ಅವರೊಂದಿಗಿನ ಸಭೆಯಲ್ಲಿ ನೆತನ್ಯಾಹು ಅವರನ್ನು ಮತ್ತೆ ಪ್ರಧಾನಿಯಾಗಿ ಶಿಫಾರಸು ಮಾಡಲು ನಿರಾಕರಿಸಿತು, ಆದರೂ ಅದು ಐಸೆನ್‌ಕೋಟ್‌ಗೂ ಬೆಂಬಲವನ್ನು ಸ್ಪಷ್ಟವಾಗಿ ಸೂಚಿಸಿಲ್ಲ. "ನೆಸೆಟ್‌ನ ಯಾವುದೇ ಸದಸ್ಯರನ್ನು ಸರ್ಕಾರ ರಚಿಸಲು ಶಿಫಾರಸು ಮಾಡದಿರಲು ನಿರ್ಧರಿಸಿದೆ" ಎಂದು ಪಕ್ಷವು ಹೆರ್ಜಾಗ್‌ಗೆ ತಿಳಿಸಿದೆ.

ಅಶ್ಕೆನಾಜಿ ಮೂಲದ ಅಲ್ಟ್ರಾ-ಆರ್ಥೊಡಾಕ್ಸ್ ಯಹೂದಿಗಳನ್ನು ಪ್ರತಿನಿಧಿಸುವ ಪಕ್ಷ, ಹೆಚ್ಚಾಗಿ ಯುರೋಪ್‌ನಿಂದ ಬಂದವರು ಅಥವಾ ಅಲ್ಲಿ ಬೇರುಗಳನ್ನು ಹೊಂದಿರುವವರು, ಹಾಗೆಯೇ ಅದೇ



ಸಮುದಾಯವನ್ನು ಪ್ರತಿನಿಧಿಸುವ ಆದರೆ ಸೆಫಾರ್ಡಿಕ್, ಅಥವಾ ಹೆಚ್ಚಾಗಿ ಮಧ್ಯಪ್ರಾಚ್ಯ ಮತ್ತು ಉತ್ತರ ಆಫ್ರಿಕಾದ ಮೂಲದ ಶಾಸ್, ಧಾರ್ಮಿಕ ವಿದ್ಯಾರ್ಥಿಗಳಿಗೆ ಮಿಲಿಟರಿ ಸೇವೆಯಿಂದ ವಿನಾಯಿತಿಯನ್ನು ಕಾಯ್ದುಕೊಳ್ಳಲು ಒತ್ತಾಯಿಸುತ್ತಿರುವುದರಿಂದ ನೆತನ್ಯಾಹು ಇಬ್ಬರನ್ನೂ ಬೆಂಬಲಿಸಿದ್ದಾರೆ. ಕೇಂದ್ರ ಮತ್ತು ಮಧ್ಯ-ಬಲಪಂಥವನ್ನು ಒಂದುಗೂಡಿಸಲು ಪ್ರಯತ್ನಿಸುತ್ತಿರುವ ಮಾಜಿ ಮಿಲಿಟರಿ ಮುಖ್ಯಸ್ಥ ಐಸೆನ್‌ಕೋಟ್, ಧಾರ್ಮಿಕ ಕ್ಷೇತ್ರದಲ್ಲಿರುವವರಿಗೆ ಮಿಲಿಟರಿ ಸೇವೆಗೆ ವಿನಾಯಿತಿಗಳನ್ನು ರದ್ದುಗೊಳಿಸುವ ವಿಷಯದಲ್ಲಿ ದೃಢ ನಿಲುವು ಹೊಂದಿದ್ದಾರೆ. ನೆತನ್ಯಾಹು ಅವರ ಕಠಿಣ ಬಲಪಂಥೀಯ ಸರ್ಕಾರದ ವಿರುದ್ಧದ ಆಕ್ರೋಶದ ಹಿನ್ನೆಲೆಯಲ್ಲಿ, ಇಸ್ರೇಲಿ-ಅರಬ್ ಪಕ್ಷಗಳು ಹೆಚ್ಚಿನ ಬಲವನ್ನು ಪಡೆದುಕೊಂಡು 19 ಸ್ಥಾನಗಳನ್ನು ಗೆದ್ದುಕೊಂಡಿವೆ. ಐಸೆನ್‌ಕೋಟ್ ಅವರು ಅರಬ್ ಪಕ್ಷಗಳೊಂದಿಗೆ ಸೇರಿ ಸರ್ಕಾರ ರಚಿಸಬಹುದಾದರೂ, ಹಾಗೆ ಮಾಡಿದರೆ ವಿರೋಧ ಪಕ್ಷದಲ್ಲಿರುವ ಕೆಲವರ ಬೆಂಬಲವನ್ನು ಕಳೆದುಕೊಳ್ಳುವ ಅಪಾಯವಿರುತ್ತದೆ.

ಮಧ್ಯಂತರ ಚುನಾವಣೆ ಮೇಲೆ ಇರಾನ್ ಯುದ್ಧ ಪರಿಣಾಮ ಬೀರಿದೆ: ಡೊನಾಲ್ಡ್ ಟ್ರಂಪ್

ವಾಷಿಂಗ್ಟನ್, ನ.5: ತಮ್ಮ ರಿಪಬ್ಲಿಕನ್ ಪಕ್ಷವು ಮಧ್ಯಂತರ ಚುನಾವಣೆಯಲ್ಲಿ ಭಾರಿ ಸೋಲನುಭವಿಸಲು ಇರಾನ್ ವಿರುದ್ಧದ ಯುದ್ಧವೇ ಪ್ರಮುಖ ಕಾರಣ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಒಪ್ಪಿಕೊಂಡಿದ್ದಾರೆ.

ಇರಾನ್ ಯುದ್ಧವೇ 'ನಮ್ಮ ಸೋಲಿಗೆ ಕಾರಣ' ಎಂಬ ವ್ಯಾನ್ಸ್ ಅವರ ಹೇಳಿಕೆಯನ್ನು ಒಪ್ಪುತ್ತೀರಾ ಎಂದು ಶ್ವೇತಭವನದ ಬಾಲ್‌ರೂಂ ನಿರ್ಮಾಣ ಸ್ಥಳದಲ್ಲಿ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಟ್ರಂಪ್, ಅದು ಬಹುಮಟ್ಟಿಗೆ ನಿಜ ಎಂದು ಭಾವಿಸುತ್ತೇನೆ. ಏಕೆಂದರೆ ಅಲ್ಪಾವಧಿಗೆ ಪೆಟ್ರೋಲ್ ಬೆಲೆ ಸ್ವಲ್ಪ ಹೆಚ್ಚಾಗಲು ಈ ಯುದ್ಧ ಕಾರಣವಾಯಿತು ಎಂದು ಹೇಳಿದರು.

ಆದರೆ ಮತ್ತೊಮ್ಮೆ ಇಂತಹ ಪರಿಸ್ಥಿತಿ ಎದುರಾದರೂ ನಾನು ಇದೇ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ದೀರ್ಘಾವಧಿಯಲ್ಲಿ ಇದೊಂದೇ ಪರಿಹಾರ. ಇರಾನ್ ಪರಮಾಣು ಅಸ್ತ್ರ ಹೊಂದಲು ಅವಕಾಶ ನೀಡಲು ಸಾಧ್ಯವಿಲ್ಲ ಎಂದು ಹೇಳಿದರು.

ಆರಂಭದಲ್ಲಿ ಅಧ್ಯಕ್ಷರ ಅಧಿಕೃತ ಕಾರ್ಯಕ್ರಮಗಳ ಪಟ್ಟಿಯಲ್ಲಿ ಯಾವುದೇ ಸಾರ್ವಜನಿಕ ಕಾರ್ಯಕ್ರಮ ಇರಲಿಲ್ಲ. ಆದರೆ ಕೊನೆಯ ಕ್ಷಣದಲ್ಲಿ ಟ್ರಂಪ್ ಸುದ್ದಿಗಾರರನ್ನು ಕರೆಸಿಕೊಂಡು ಮಾತನಾಡಿದರು. ಈ ವೇಳೆ ಕೆಲವು ಪ್ರಶ್ನೆಗಳಿಗೂ ಉತ್ತರಿಸಿದ ಅವರು, "ನಾನೇನಾದರೂ ಚುನಾವಣೆಯಲ್ಲಿ ಸ್ಪರ್ಧಿಸಿದ್ದರೆ ಗೆಲ್ಲುತ್ತಿದ್ದೆ" ಎಂದು ಪ್ರತಿಪಾದಿಸಿದರು.

ಮಧ್ಯಂತರ ಚುನಾವಣೆಯಲ್ಲಿ ತಮ್ಮ ರಿಪಬ್ಲಿಕನ್ ಪಕ್ಷ ಭಾರಿ ಸೋಲು ಅನುಭವಿಸಿದ ಮರುದಿನವೇ, ಡೆಮೋಕ್ರಾಟ್ ಪಕ್ಷ ಅಧಿಕಾರಕ್ಕೆ ಬಂದ ಬಳಿಕ ತಮ್ಮ ವಿರುದ್ಧ ಮಹಾಭಿಯೋಗ ಪ್ರಕ್ರಿಯೆ ಆರಂಭಿಸುವ ಸಾಧ್ಯತೆಯ ಕುರಿತು ಕೇಳಿದ ಪ್ರಶ್ನೆಗೆ ಟ್ರಂಪ್, ಅವರು ಹಾಗೆ ಮಾಡಿದರೆ ಡೆಮೋಕ್ರಾಟ್ ಪಕ್ಷವೇ ನಾಶವಾಗಲಿದೆ ಎಂದು ನಾನು ಭಾವಿಸುತ್ತೇನೆ ಎಂದು ಹೇಳಿದರು.

ಅಲ್ಲದೆ, ತಮ್ಮ ವಿರುದ್ಧ ಮಹಾಭಿಯೋಗ ಪ್ರಕ್ರಿಯೆ ಆರಂಭಿಸಲು ಯಾವುದೇ ಕಾರಣವಿಲ್ಲ ಎಂದು ಪ್ರತಿಪಾದಿಸಿದರು. ಟ್ರಂಪ್ ಸಾಮಾನ್ಯವಾಗಿ ತಮ್ಮ ಹೊರತು ಎಲ್ಲರನ್ನೂ ಸೋಲಿಗೆ ಹೊಣೆ ಮಾಡುತ್ತಾರೆ, ಸಣ್ಣಪುಟ್ಟ ವಿಚಾರಗಳಿಂದ ಹಿಡಿದು ಮಹತ್ವದ ವಿಷಯಗಳವರೆಗೆ, ಅದರಲ್ಲೂ ವಿಶೇಷವಾಗಿ ಚುನಾವಣೆಯಲ್ಲಿ ಸೋಲು ಎದುರಾದಾಗಲೆಲ್ಲ ಜವಾಬ್ದಾರಿಯನ್ನು ಇತರರ ಮೇಲೆ ಹೊರಿಸುವುದು ಟ್ರಂಪ್ ಅವರ ಬಹುಕಾಲದ ಪ್ರವೃತ್ತಿಯಾಗಿದೆ.

ಯುದ್ಧಕ್ಕೆ ಅಮೆರಿಕ ಜನತೆ ತಿರಸ್ಕಾರ: ಮಧ್ಯಂತರ ಚುನಾವಣೆ ಫಲಿತಾಂಶ ಕುರಿತು ಇರಾನ್ ಪ್ರತಿಕ್ರಿಯೆ

ವಾಷಿಂಗ್ಟನ್, ನ.5: ಅಮೆರಿಕದ ಮಧ್ಯಂತರ ಚುನಾವಣೆಯ ಫಲಿತಾಂಶದ ಬಗ್ಗೆ ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಾಘರ್ ಗಾಲಿಬಾಫ್ ಪ್ರತಿಕ್ರಿಯಿಸಿದ್ದು, ಅಮೆರಿಕದ ಜನತೆ ಯುದ್ಧವನ್ನು ತಿರಸ್ಕರಿಸಿದ್ದಾರೆ ಎಂದು ಹೇಳಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, "ಅದು ಆತ್ಮಸಾಕ್ಷಿಯ ಧ್ವನಿಯಾಗಿರಲಿ ಅಥವಾ ಜೀವನ ವೆಚ್ಚದ ಹೊರೆಯಾಗಿರಲಿ, ಅಮೆರಿಕನ್ನರು ಯುದ್ಧಕ್ಕೆ 'ನೋ' ಎಂದಿದ್ದಾರೆ.

ನಾವು ಈ ಸಂದೇಶವನ್ನು ಬೆಂಬಲಿಸುತ್ತೇವೆ. ಅಮೆರಿಕ ಸರ್ಕಾರ ತನ್ನ ಜನರ ಆಶಯಕ್ಕೆ ವಿರುದ್ಧವಾಗಿ ನಡೆದು, ವಿದೇಶಿ ಶಕ್ತಿಗಳ ಒತ್ತಡಕ್ಕೆ ಮಣಿದರೆ, ನಮ್ಮ 'ನೋ' ಉತ್ತರ ಅವರಿಗೆ ದುಃಸ್ವಪ್ನವಾಗಲಿದೆ" ಎಂದು ಎಚ್ಚರಿಕೆ ನೀಡಿದ್ದಾರೆ.

ನವೆಂಬರ್ 3ರಂದು ನಡೆದ



ಅಮೆರಿಕದ ಮಧ್ಯಂತರ ಚುನಾವಣೆಯ ಮತ ಎಣಿಕೆ ಮುಂದುವರಿದಿದ್ದು, ಡೆಮಾಕ್ರಟಿಕ್ ಪಕ್ಷವು ಕಾಂಗ್ರೆಸ್‌ನಲ್ಲಿ ತನ್ನ ಪ್ರಾಬಲ್ಯ ಹೆಚ್ಚಿಸಿಕೊಳ್ಳುವ ಸೂಚನೆಗಳು ಕಂಡುಬಂದಿವೆ ಎಂದು ವರದಿ ಹೇಳಿದೆ. ಈ ಚುನಾವಣೆಯಲ್ಲಿ ಆರ್ಥಿಕ ಪರಿಸ್ಥಿತಿ, ಜೀವನ ವೆಚ್ಚದ ಏರಿಕೆ ಹಾಗೂ ವಿದೇಶಾಂಗ ನೀತಿ ಪ್ರಮುಖ ವಿಷಯಗಳಾಗಿದ್ದವು. ಅದರಲ್ಲೂ ಇರಾನ್‌ಗೆ ಸಂಬಂಧಿಸಿದಂತೆ ನಡೆಯುತ್ತಿರುವ ಮಿಲಿಟರಿ ಸಂಘರ್ಷ ಚುನಾವಣಾ ಚರ್ಚೆಯಲ್ಲಿ ಪ್ರಭಾವ ಬೀರಿತ್ತು.

ಅಮೆರಿಕದ ಪ್ರತಿನಿಧಿಗಳ ಸಭೆಯ ಎಲ್ಲಾ 435 ಸ್ಥಾನಗಳು ಹಾಗೂ ಸೆನೆಟ್‌ನ 35 ಸ್ಥಾನಗಳಿಗೆ ಚುನಾವಣೆ ನಡೆದಿತ್ತು. ಚುನಾವಣಾ ಫಲಿತಾಂಶದಿಂದ ಕಾಂಗ್ರೆಸ್‌ನಲ್ಲಿ ಅಧಿಕಾರದ ಸಮತೋಲನ ಬದಲಾಗುವ ಸಾಧ್ಯತೆಯಿದ್ದು, ಅಧ್ಯಕ್ಷರ ಉಳಿದ ಅಧಿಕಾರಾವಧಿಯಲ್ಲಿ ಆಡಳಿತಾತ್ಮಕ ಮತ್ತು ರಾಜಕೀಯ ಸಂಘರ್ಷ ಹೆಚ್ಚಾಗುವ ಸಾಧ್ಯತೆಯಿದೆ.

ಡೊನಾಲ್ಡ್ ಟ್ರಂಪ್ ಸರ್ಕಾರದಿಂದ ರಕ್ಷಣಾ ಸಚಿವ ಪೀಟ್ ಹೆಗ್ಸೆತ್ ಔಟ್

ವಾಷಿಂಗ್ಟನ್, ನ.5: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮಧ್ಯಂತರ ಚುನಾವಣೆಯಲ್ಲಿ ಆಡಳಿತಾರೂಢ ಪಕ್ಷ ಹಿನ್ನಡೆ ಅನುಭವಿಸಿದ ಬೆನ್ನಲ್ಲೇ, ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ಅವರನ್ನು ಆ ಹುದ್ದೆಯಲ್ಲಿ ಮುಂದುವರಿಸಬೇಕೇ ಎಂಬ ಬಗ್ಗೆ ತಮ್ಮ ಆಪ್ತ ಸಲಹೆಗಾರರೊಂದಿಗೆ ಚರ್ಚಿಸಿದ್ದಾರೆ



ಎಂದು ವರದಿಯಾಗಿದೆ. ಸಲಹೆಗಾರರೊಂದಿಗೆ ದೂರವಾಣಿ ಸಂಭಾಷಣೆ ಹಾಗೂ ಸಮಾಲೋಚನೆ ನಡೆಸುವ ಸಂದರ್ಭದಲ್ಲಿ ನಾಯಕತ್ವ ಬದಲಾವಣೆಯ ಸಾಧ್ಯತೆಯನ್ನು ಟ್ರಂಪ್ ಪ್ರಸ್ತಾಪಿಸಿದ್ದಾರೆ ಎಂದು ಚರ್ಚೆಯ ಬಗ್ಗೆ ಮಾಹಿತಿ ಹೊಂದಿರುವ ಹಲವು ವ್ಯಕ್ತಿಗಳನ್ನು ಉಲ್ಲೇಖಿಸಿ ವರದಿ ತಿಳಿಸಿದೆ. ಆದರೆ, ಹೆಗ್ಸೆತ್ ಅವರ ಭವಿಷ್ಯದ ಕುರಿತು ಈವರೆಗೆ ಯಾವುದೇ ಅಂತಿಮ ನಿರ್ಧಾರ ಕೈಗೊಂಡಿಲ್ಲ. ಇರಾನ್‌ನಲ್ಲಿ ಯುದ್ಧವನ್ನು ಆಡಳಿತವು ನಿಭಾಯಿಸಿದ ರೀತಿಯ ಬಗ್ಗೆ ಹೆಚ್ಚುತ್ತಿರುವ ಟೀಕೆಗಳು ಹಾಗೂ ಅದರ ರಾಜಕೀಯ ಪರಿಣಾಮಗಳ ನಡುವೆ ಈ ಚರ್ಚೆಗಳು ನಡೆದಿವೆ. ಇರಾನ್ ಸಂಘರ್ಷದ ಕುರಿತು ಆಡಳಿತಕ್ಕೆ ಸಲಹೆ ನೀಡುವಲ್ಲಿ ತಮ್ಮ ಪಾತ್ರದ ಬಗ್ಗೆ ಅಮೆರಿಕದ ಸೆಂಟ್ರಲ್ ಕಮಾಂಡ್ ಮುಖ್ಯಸ್ಥ ಅಡ್ಮಿರಲ್ ಬ್ರಾಡ್ ಕೂಪರ್ ಮತ್ತು ಜಂಟಿ ಸೇನಾ ಮುಖ್ಯಸ್ಥರ ಸಮಿತಿಯ ಅಧ್ಯಕ್ಷ ಜನರಲ್ ಡ್ಯಾನ್ ಕೇನ್ ಸೇರಿದಂತೆ ಹಿರಿಯ ಸೇನಾಧಿಕಾರಿಗಳೂ ಹೆಚ್ಚಿನ ಪರಿಶೀಲನೆ ಎದುರಿಸಬೇಕಾಗಬಹುದು ಎಂದು ಮೂಲಗಳು ತಿಳಿಸಿವೆ.


ಇರಾನ್ ನಂಟು ಆರೋಪ: ಭಾರತ ಮೂಲದ ದಂಪತಿಗೆ ಅಮೆರಿಕ ನಿರ್ಬಂಧ

ವಾಷಿಂಗ್ಟನ್, ನ.5: ಇರಾನ್‌ನ ತೈಲ ವ್ಯಾಪಾರದ ಮೇಲಿನ ನಿರ್ಬಂಧಗಳನ್ನು ಉಲ್ಲಂಘಿಸಲು ನೆರವು ನೀಡಿದ ಆರೋಪದ ಮೇಲೆ ಭಾರತ ಮೂಲದ ದಂಪತಿ ಹಾಗೂ ಅವರಿಗೆ ಸಂಬಂಧಿಸಿದ ಹಲವು ಕಂಪನಿಗಳ ವಿರುದ್ಧ ಅಮೆರಿಕ ನಿರ್ಬಂಧ ವಿಧಿಸಿದೆ.

ಅಮೆರಿಕದ ಹಣಕಾಸು ಇಲಾಖೆಯು ಬುಧವಾರ (ಸ್ಥಳೀಯ ಕಾಲಮಾನ) ಈ ನಿರ್ಬಂಧಗಳನ್ನು ಘೋಷಿಸಿದೆ. ಇರಾನ್‌ಗೆ ಬೆಂಬಲ ನೀಡುವವರು 'ನಮ್ಮ ಪರವಾಗಿರಬೇಕು ಅಥವಾ ನಮ್ಮ ವಿರುದ್ಧವಾಗಿರಬೇಕು' ಎಂದು ಅಮೆರಿಕದ ಹಣಕಾಸು ಸಚಿವ ಸ್ಕಾಟ್ ಬೆಸೆಂಟ್ ಎಚ್ಚರಿಕೆ ನೀಡಿದ್ದಾರೆ.

ಇರಾನ್‌ನ ಪೆಟ್ರೋಲಿಯಂ ಸಾಗಿಸುತ್ತಿದ್ದ ಹಡಗುಗಳಿಗೆ ನಕಲಿ ಸಮುದ್ರ ನೋಂದಣಿ ಮತ್ತು ಪ್ರಮಾಣಪತ್ರಗಳನ್ನು ಒದಗಿಸುವ ಮೂಲಕ ದಂಪತಿ ನೆರವು ನೀಡಿದ್ದಾರೆ ಎಂದು ಇಲಾಖೆ ಆರೋಪಿಸಿದೆ.

ಇರಾನ್‌ನ ಸೇನೆ ಹಾಗೂ ಅದರ ಬೆಂಬಲಿತ ಸಂಘಟನೆಗಳ ಪರವಾಗಿ ಕಾರ್ಯನಿರ್ವಹಿಸುತ್ತಿದ್ದ ಹಡಗುಗಳಿಗೂ ಇಂತಹ ದಾಖಲೆಗಳನ್ನು ನೀಡಲಾಗಿದೆ. ನಿರ್ಬಂಧಕ್ಕೆ ಒಳಗಾದವರನ್ನು ಭಾರತ ಮೂಲದ ಸುನೀಲ್ ಕುಮಾರ್ ಶರ್ಮಾ ಮತ್ತು ಅವರ ಪತ್ನಿ



ಜಸ್‌ಪ್ರೀತ್ ಪ್ರೀತಿ ಶಾಹಿದ್ ಎಂದು ಅಮೆರಿಕದ ಹಣಕಾಸು ಇಲಾಖೆ ಗುರುತಿಸಿದೆ.

ಈ ದಂಪತಿ ನಕಲಿ ಹಡಗು ನೋಂದಣಿ ಮತ್ತು ಸಮುದ್ರಯಾನ ಪ್ರಮಾಣಪತ್ರಗಳನ್ನು ಒದಗಿಸುವ ಜಾಲವನ್ನು ನಡೆಸುತ್ತಿದ್ದರು. ಇದರಿಂದ ನಿರ್ಬಂಧಿತ ಹಡಗುಗಳು ಇರಾನ್‌ನ ತೈಲ ಸಾಗಣೆಯನ್ನು ಮುಂದುವರಿಸಲು ಹಾಗೂ ಅಂತಾರಾಷ್ಟ್ರೀಯ ನಿರ್ಬಂಧಗಳನ್ನು ತಪ್ಪಿಸಿಕೊಳ್ಳಲು ಸಾಧ್ಯವಾಗಿತ್ತು ಎಂದು ಆರೋಪಿಸಲಾಗಿದೆ.

ನಾವು ಹಲವು ಬಾರಿ ಹೇಳಿರುವಂತೆ, 'ಆಪರೇಷನ್ ಎಕನಾಮಿಕ್ ಔಟ್‌ಕಾಸ್ಟ್' ಅಡಿಯಲ್ಲಿ ನೀವು ನಮ್ಮ ಪರವಾಗಿರಬೇಕು ಅಥವಾ ನಮ್ಮ ವಿರುದ್ಧವಾಗಿರಬೇಕು. ನೀವು ಎಲ್ಲಿದ್ದೀರಿ ಎಂಬುದು ನಮಗೆ ಗೊತ್ತಿದೆ. ಇರಾನ್ ಆಡಳಿತಕ್ಕೆ ಭೂಮಿ, ಸಮುದ್ರ ಅಥವಾ ವಾಯುಮಾರ್ಗದ ಮೂಲಕ ಬೆಂಬಲ ನೀಡುವುದನ್ನು ಮುಂದುವರಿಸುವವರ ವಿರುದ್ಧ ನಿರ್ಬಂಧ ವಿಧಿಸುತ್ತೇವೆ ಎಂದು ಬೆಸೆಂಟ್ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಈ ಚಟುವಟಿಕೆಗಳು ಕನಿಷ್ಠ 2014ರಿಂದಲೇ ನಡೆಯುತ್ತಿದ್ದವು ಎನ್ನಲಾಗಿದೆ. ಆಗ ಕೆರಿಬಿಯನ್ ರಾಷ್ಟ್ರ ಡೊಮಿನಿಕಾದ ಸಮುದ್ರ ಹಡಗು ನೋಂದಣಿ ಪ್ರಾಧಿಕಾರದಂತೆ ನಟಿಸಲು ದಂಪತಿ ಪ್ರಯತ್ನಿಸಿದ್ದರು. ನಂತರ ಈ ಜಾಲ ಇರಾನ್‌ನ ಪೆಟ್ರೋಲಿಯಂ ಸಾಗಿಸುತ್ತಿದ್ದ ಹಡಗುಗಳಿಗೆ ನೋಂದಣಿ ಸೇವೆಗಳನ್ನು ಒದಗಿಸಿತ್ತು ಎಂದು ಇಲಾಖೆ ಹೇಳಿದೆ. ಈ ದಂಪತಿಗೆ ಸಂಬಂಧಿಸಿದ ಭಾರತ ಮೂಲದ ಹಲವು ಕಂಪನಿಗಳ ಮೇಲೆಯೂ ನಿರ್ಬಂಧ ವಿಧಿಸಲಾಗಿದೆ. ಓಷನಿಕ್ ಟೆಕ್ನಾಲಜೀಸ್ ಇಂಡಿಯಾ, ಆರ್ಯವರ್ತ್ ಶಿಪ್ ಮ್ಯಾನೇಜ್‌ಮೆಂಟ್ ಪ್ರೈವೇಟ್ ಲಿಮಿಟೆಡ್, ಪ್ರಿಸೆಪ್ಟ್ ಟ್ರೆಂಡ್ಸ್ ಪ್ರೈವೇಟ್ ಲಿಮಿಟೆಡ್, ಪಾಲಿನೇಷ್ಯಾ ಮ್ಯಾರಿಟೈಮ್ ಪ್ರೈವೇಟ್ ಲಿಮಿಟೆಡ್, ಅಲೆಕ್ಸಾರ್ಯ ಫಿನ್‌ಸರ್ವ್ ಪ್ರೈವೇಟ್ ಲಿಮಿಟೆಡ್, ಅಲೆಕ್ಸಾರ್ಯ ಮೀಡಿಯಾ ಅಂಡ್ ಎಂಟರ್‌ಟೈನ್‌ಮೆಂಟ್ ಪ್ರೈವೇಟ್ ಲಿಮಿಟೆಡ್, ವಿಹಾರಬೋಟಿಂಗ್ ಪ್ರೈವೇಟ್ ಲಿಮಿಟೆಡ್ ಹಾಗೂ ಆರ್ಯವರ್ತ್ ಮ್ಯಾರಿಟೈಮ್ ಅಂಡ್ ಎಜುಕೇಷನಲ್ ಟ್ರಸ್ಟ್ ಮೇಲೆ ನಿರ್ಬಂಧ ವಿಧಿಸಿದೆ.

ಇದಲ್ಲದೆ, ನಕಲಿ ಧ್ವಜಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರಬಹುದಾದ ಹಡಗುಗಳೊಂದಿಗೆ ವ್ಯವಹರಿಸದಂತೆ ಸಮುದ್ರಯಾನ ಉದ್ಯಮಕ್ಕೆ ಅಮೆರಿಕ ಎಚ್ಚರಿಕೆ ನೀಡಿದೆ. ನಕಲಿ ನೋಂದಣಿಗಳ ಮೂಲಕ ಅಕ್ರಮ ಚಟುವಟಿಕೆಗಳಲ್ಲಿ ತೊಡಗಿರುವ ಹಡಗುಗಳು ಅಂತಾರಾಷ್ಟ್ರೀಯ ನಿಯಮಗಳನ್ನು ಉಲ್ಲಂಘಿಸಿ ಕಾರ್ಯನಿರ್ವಹಿಸಬಹುದು. ಇದರಿಂದ ಸಿಬ್ಬಂದಿಯ ಸುರಕ್ಷತೆ ಮತ್ತು ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ನಿಯಮಗಳ ಉಲ್ಲಂಘನೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಎಚ್ಚರಿಸಿದೆ.

ಅಮೆರಿಕದ ಕಾನೂನಿನಡಿ ನಿರ್ದಿಷ್ಟ ಅನುಮತಿ ಅಥವಾ ವಿನಾಯಿತಿ ದೊರೆತರೆ ಮಾತ್ರ ಅಂತಹ ವಹಿವಾಟುಗಳಿಗೆ ಅವಕಾಶವಿರುತ್ತದೆ. ನಿಯಮ ಉಲ್ಲಂಘಿಸುವ ಅಮೆರಿಕ ಮತ್ತು ವಿದೇಶಿ ವ್ಯಕ್ತಿಗಳ ವಿರುದ್ಧ ನಾಗರಿಕ ಅಥವಾ ಕ್ರಿಮಿನಲ್ ದಂಡ ವಿಧಿಸಬಹುದು ಎಂದು ಹಣಕಾಸು ಇಲಾಖೆ ಎಚ್ಚರಿಸಿದೆ.

ಕೊಹ್ಲಿ ಮತ್ತೊಂದು ದಾಖಲೆ

ನವದೆಹಲಿ, ನ.5: ಭಾರತೀಯ ಕ್ರಿಕೆಟ್ ತಂಡದ ದಿಗ್ಗಜ ಆಟಗಾರ ವಿರಾಟ್ ಕೊಹ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಮತ್ತೊಂದು ಐತಿಹಾಸಿಕ ದಾಖಲೆಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಏಕದಿನ ಕ್ರಿಕೆಟ್‌ನಲ್ಲಿ ರನ್ ಚೇಸ್ ಮಾಡುವಾಗ ಅತಿಹೆಚ್ಚು ರನ್ ಗಳಿಸಿದ್ದ ಸಚಿನ್ ತೆಂಡೂಲ್ಕರ್ ಅವರ ಸಾರ್ವಕಾಲಿಕ ದಾಖಲೆಯನ್ನು ಕೊಹ್ಲಿ ಮುರಿದರು. ನ್ಯೂಜಿಲೆಂಡ್ ವಿರುದ್ಧ ಆಕ್ಲೆಂಡ್‌ನ ಐಕಾನಿಕ್ ಈಡನ್ ಪಾರ್ಕ್‌ನಲ್ಲಿ ನಡೆದ ಮೊದಲ ಏಕದಿನ ಪಂದ್ಯದಲ್ಲಿ ಈ ಮಹತ್ವದ ಮೈಲಿಗಲ್ಲನ್ನು ಸಾಧಿಸಿದರು.



ಗುರುವಾರ ತಮ್ಮ 38ನೇ ಹುಟ್ಟುಹಬ್ಬವನ್ನು ಆಚರಿಸಿಕೊಂಡ ಕಿಂಗ್ ಕೊಹ್ಲಿ, ಕಿವೀಸ್ ವಿರುದ್ಧದ ಈ ಪಂದ್ಯದಲ್ಲಿ ಕಣಕ್ಕಿಳಿಯುವ ಮುನ್ನ ಸಚಿನ್ ದಾಖಲೆ ಮುರಿಯಲು ಕೇವಲ 54 ರನ್‌ಗಳ ಅಗತ್ಯವಿತ್ತು. ಪಂದ್ಯದ ಆರಂಭದಿಂದಲೂ ಉತ್ತಮ ಲಯದಲ್ಲಿದ್ದ ಕೊಹ್ಲಿ, ತಾವೆದುರಿಸಿದ 39ನೇ ಎಸೆತದಲ್ಲಿ 54ನೇ ರನ್ ಕಲೆಹಾಕುವ ಮೂಲಕ ಸಚಿನ್ ತೆಂಡೂಲ್ಕರ್ ಅವರ 8,720 ರನ್‌ಗಳ ದಾಖಲೆಯನ್ನು ಹಿಂದಿಕ್ಕಿ ಏಕದಿನ ರನ್ ಚೇಸ್‌ನ ನಂಬರ್ ಒನ್ ಬ್ಯಾಟ್ಸ್‌ಮನ್ ಎನಿಸಿಕೊಂಡರು.ಪ್ರಸ್ತುತ ವಿರಾಟ್ ಕೊಹ್ಲಿ ಒಟ್ಟು 176 ಏಕದಿನ ಪಂದ್ಯಗಳ 169 ಇನ್ನಿಂಗ್ಸ್‌ಗಳಲ್ಲಿ ಈವರೆಗೆ 8,722 ರನ್‌ಗಳನ್ನು ಕಲೆಹಾಕಿದ್ದಾರೆ. ಈ ವಿಶೇಷ ಪಟ್ಟಿಯಲ್ಲಿ ಸಚಿನ್ ತೆಂಡೂಲ್ಕರ್ ಮತ್ತು ವಿರಾಟ್ ಕೊಹ್ಲಿ ನಂತರದ ಸ್ಥಾನದಲ್ಲಿ ಮತ್ತೊಬ್ಬ ದಿಗ್ಗಜ ರೋಹಿತ್ ಶರ್ಮಾ ಇದ್ದಾರೆ. ಹಿಟ್‌ಮ್ಯಾನ್ 167 ಮ್ಯಾಚ್‌ಗಳ 163 ಇನ್ನಿಂಗ್ಸ್‌ಗಳಲ್ಲಿ ಒಟ್ಟು 6,801 ರನ್ ಗಳಿಸಿ ಮೂರನೇ ಸ್ಥಾನದಲ್ಲಿದ್ದಾರೆ.

ಮಹಿಳಾ ಪ್ರೀಮಿಯರ್ ಲೀಗ್ 5ನೇ ಆವೃತ್ತಿ ವೇಳಾಪಟ್ಟಿ ಪ್ರಕಟ

ನವದೆಹಲಿ, ನ.5: ಮಹಿಳಾ ಪ್ರೀಮಿಯರ್ ಲೀಗ್‌ನ ಐದನೇ ಆವೃತ್ತಿಯ ಪೂರ್ಣ ವೇಳಾಪಟ್ಟಿಯನ್ನು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಬುಧವಾರ ಪ್ರಕಟಿಸಿದೆ. 2027ರ ಜನವರಿ 14ರಿಂದ ಆರಂಭವಾಗಲಿರುವ ಈ ಚುಟುಕು ಕ್ರಿಕೆಟ್ ಸಮರದಲ್ಲಿ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಮಾಜಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡಗಳು ಉದ್ಘಾಟನಾ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಫೆಬ್ರವರಿ 7ರಂದು ಫೈನಲ್ ಪಂದ್ಯ ನಡೆಯಲಿದ್ದು, ಈ ಬಾರಿಯ ಪಂದ್ಯಾವಳಿಗಳು ವಡೋದರಾ ಹಾಗೂ ಮುಂಬೈನ ಬ್ರಬೋರ್ನ್ ಕ್ರೀಡಾಂಗಣದಲ್ಲಿ ಆಯೋಜನೆಗೊಳ್ಳಲಿವೆ.

22 ಪಂದ್ಯಗಳ ಈ ಟೂರ್ನಿಯಲ್ಲಿ ಪ್ರತಿಯೊಂದು ನಗರದಲ್ಲೂ ತಲಾ 11 ಪಂದ್ಯಗಳು ನಡೆಯಲಿವೆ. ಟೂರ್ನಿಯ ಮೊದಲ ಹಂತ ಜನವರಿ 14ರಿಂದ 24ರವರೆಗೆ ವಡೋದರಾದಲ್ಲಿ ಜರುಗಲಿದ್ದು, ಎಲ್ಲಾ 5 ಫ್ರಾಂಚೈಸಿಗಳು ಈ ಹಂತದಲ್ಲಿ ತಮ್ಮ ಅಭಿಯಾನವನ್ನು ಪ್ರಾರಂಭಿಸಲಿವೆ. ತದನಂತರ ಜನವರಿ 26ರಿಂದ ಎರಡನೇ ಹಂತದ ಪಂದ್ಯಗಳು ಮುಂಬೈನ ಪ್ರತಿಷ್ಠಿತ ಕ್ರಿಕೆಟ್ ಕ್ಲಬ್ ಆಫ್ ಇಂಡಿಯಾದ ಬ್ರಬೋರ್ನ್ ಸ್ಟೇಡಿಯಂನಲ್ಲಿ ನಡೆಯಲಿವೆ.

ಲೀಗ್ ಹಂತದ ಪಂದ್ಯಗಳು ಫೆಬ್ರವರಿ 3ಕ್ಕೆ ಮುಕ್ತಾಯಗೊಳ್ಳಲಿದ್ದು, ಫೆಬ್ರವರಿ 5ರಂದು ಎಲಿಮಿನೇಟರ್ ಪಂದ್ಯ ನಡೆಯಲಿದೆ. ಅಂಕಪಟ್ಟಿಯಲ್ಲಿ 2ನೇ ಹಾಗೂ 3ನೇ ಸ್ಥಾನ ಪಡೆಯುವ ತಂಡಗಳು ಫೈನಲ್ ಪ್ರವೇಶಕ್ಕಾಗಿ ಎಲಿಮಿನೇಟರ್‌ನಲ್ಲಿ ಕಾದಾಡಲಿವೆ. ಇನ್ನು ಲೀಗ್ ಹಂತದಲ್ಲಿ ಅಗ್ರಸ್ಥಾನ



ಗಳಿಸುವ ತಂಡವು ನೇರವಾಗಿ ಫೆಬ್ರವರಿ 7ರಂದು ಮುಂಬೈನ ಬ್ರಬೋರ್ನ್ ಅಂಗಳದಲ್ಲಿ ನಡೆಯುವ ಫೈನಲ್ ಪಂದ್ಯಕ್ಕೆ ಅರ್ಹತೆ ಪಡೆಯಲಿದೆ. ಟೂರ್ನಿಯ ಎಲ್ಲಾ 22 ಪಂದ್ಯಗಳು ಭಾರತೀಯ ಕಾಲಮಾನ ಸಂಜೆ 7:30ಕ್ಕೆ ಆರಂಭವಾಗಲಿವೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರು: ಸ್ಮೃತಿ ಮಂದಾನ (ನಾಯಕಿ), ರಿಚಾ ಘೋಷ್ (ವಿಕೆಟ್ ಕೀಪರ್), ಎಲಿಸ್ ಪೆರ್ರಿ, ಲೋರೆನ್ ಬೆಲ್, ಪೂಜಾ ವಸ್ತ್ರಾಕರ್, ಅರುಂಧತಿ ರೆಡ್ಡಿ, ನಾಡಿನ್ ಡಿ ಕ್ಲರ್ಕ್, ರಾಧಾ ಯಾದವ್, ಶ್ರೇಯಾಂಕಾ ಪಾಟೀಲ್, ಜಾರ್ಜಿಯಾ ವೋಲ್, ಜೆಸ್ ಜೊನಾಸೆನ್, ತೇಜಲ್ ಹಸಬ್ನಿಸ್, ಸಾಯಲಿ ಸತ್ಘರೆ, ಕ್ಲೋಯ್ ಟ್ರಯಾನ್, ಪ್ರೇಮಾ ರಾವತ್, ವೃಂದಾ ದಿನೇಶ್, ಕುಮಾರ್ ಪ್ರತ್ಯೂಷಾ.

ಮುಂಬೈ ಇಂಡಿಯನ್ಸ್: ಹರ್ಮನ್‌ಪ್ರೀತ್ ಕೌರ್ (ನಾಯಕಿ), ನ್ಯಾಟ್ ಸಿವರ್-ಬ್ರಂಟ್, ಹೇಲಿ ಮ್ಯಾಥ್ಯೂಸ್, ಅಮನ್‌ಜೋತ್ ಕೌರ್, ಅಮೆಲಿಯಾ ಕೆರ್, ಶಬನಮ್ ಇಸ್ಮಾಯಿಲ್, ಸಂಸ್ಕೃತಿ ಗುಪ್ತಾ, ಸಜನಾ ಸಜೀವನ್, ರಾಹಿಲ ಫಿರ್ದೌಸ್, ನಿಕೋಲಾ ಕೇರಿ, ವೈಷ್ಣವಿ ಶರ್ಮಾ, ತಾರಾ ನಾರಿಸ್, ದಿಶಾ ಕಸಟ್, ಭಾರತಿ ರಾವಲ್, ಲತಿಕಾ ಇನಾಮ್ದಾರ್, ಅಕ್ಷಿತಾ ಭಾಗರ್, ಶ್ವೇತಾ ಸೆಹ್ರಾವತ್, ಸಾನಿಕಾ ಚಾಲ್ಕೆ.

ದೆಹಲಿ ಕ್ಯಾಪಿಟಲ್ಸ್: ಜೆಮಿಮಾ ರೊಡ್ರಿಗಸ್ (ನಾಯಕಿ), ಶಫಾಲಿ ವರ್ಮಾ, ಮರಿಜಾನ್ನೆ ಕಪ್, ನಿಕಿ ಪ್ರಸಾದ್, ಲಾರಾ ವೊಲ್ವಾರ್ಡ್, ಚಿನೆಲ್ಲೆ ಹೆನ್ರಿ, ಶ್ರೀ ಚರಣಿ, ದಿಯಾ ಯಾದವ್, ಮಮತಾ ಮಡಿವಾಳ, ನಂದಿನಿ ಶರ್ಮಾ, ಲೂಸಿ ಹ್ಯಾಮಿಲ್ಟನ್, ಮಿನ್ನು ಮಣಿ, ಅನ್ನಾಬೆಲ್ ಸದರ್ಲ್ಯಾಂಡ್, ಕಿರಣ್ ನವಗಿರೆ, ಉಮಾ ಕಾಶ್ವಿ, ಕರ್ಸ್ಟಿ ಗಾರ್ಡನ್, ನಜ್ಮಾ ಖಾನ್.

ಯುಪಿ ವಾರಿಯರ್ಜ್: ಮೆಗ್ ಲ್ಯಾನಿಂಗ್ (ನಾಯಕಿ), ದೀಪ್ತಿ ಶರ್ಮಾ, ಸೋಫಿ ಎಕ್ಲೆಸ್ಟನ್, ಫೋಬೆ ಲಿಚ್ಫೀಲ್ಡ್, ಹರ್ಲೀನ್ ದೇವೋಲ್, ಕ್ರಾಂತಿ ಗೌಡ್, ಶಿಖಾ ಪಾಂಡೆ, ಶಿಪ್ರಾ ಗಿರಿ, ಸಿಮ್ರಾನ್ ಶೇಖ್, ಪ್ರತಿಕಾ ರಾವಳ್, ಸೋಫಿ ಮೋಲಿನಕ್ಸ್, ಗ್ರೇಸ್ ಹ್ಯಾರಿಸ್, ಸುಷ್ಮಾ ವರ್ಮಾ (ವಿಕೆಟ್ ಕೀಪರ್), ಸ್ನೇಹ್ ರಾಣಾ, ಸಹನಾ ಪವಾರ್, ಮನಾಲಿ ದಕ್ಷಿಣಿ, ಕ್ಯಾಥರೀನ್ ಬ್ರೈಸ್, ಆಶಾ ಶೋಭನಾ.

ಗುಜರಾತ್ ಜೈಂಟ್ಸ್: ಆಶ್ಲೀ ಗಾರ್ಡ್ನರ್ (ನಾಯಕಿ), ಬೆತ್ ಮೂನಿ, ಸೋಫಿ ಡಿವೈನ್, ರೇಣುಕಾ ಸಿಂಗ್ ಠಾಕೂರ್, ಭಾರತಿ ಫುಲ್ಮಾಲಿ, ಕಾಶ್ವಿ ಗೌತಮ್, ಕನಿಕಾ ಅಹುಜಾ, ತನುಜಾ ಕನ್ವರ್, ಜಾರ್ಜಿಯಾ ವೇರ್ಹ್ಯಾಮ್, ಅನುಷ್ಕಾ ಶರ್ಮಾ, ಹ್ಯಾಪಿ ಕುಮಾರಿ, ಕಿಮ್ ಗಾರ್ತ್, ಯಸ್ತಿಕಾ ಭಾಟಿಯಾ, ರಾಜೇಶ್ವರಿ ಗಾಯಕ್ವಾಡ್, ಜಿಂಟಿಮಣಿ ಕಲಿತಾ, ಜಿ. ಕಮಲಿನಿ, ಓರ್ಲಾ ಪ್ರೆಂಡರ್ಗಾಸ್ಟ್, ಸಮೈರಾ ರಾಘವ್.

ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವ ವಿದ್ಯಾಲಯ: 8ನೇ ವಾರ್ಷಿಕ ಅಥ್ಲೆಟಿಕ್ ಕ್ರೀಡಾಕೂಟ

ಬೆಂಗಳೂರು,ನ.5: ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ವಾರ್ಷಿಕ ಅಂತರ ಕಾಲೇಜು ಅಥ್ಲೆಟಿಕ್ ಕ್ರೀಡಾಕೂಟ ಗುರುವಾರ ಬೆಳಿಗ್ಗೆ 7:30 ಗಂಟೆಯಿಂದ ಅಪಾರ ಉತ್ಸಾಹದಿಂದ ಆರಂಭವಾಯಿತು. ವಿವಿಧ ಟ್ರ್ಯಾಕ್ ಮತ್ತು ಫೀಲ್ಡ್ ಸ್ಪರ್ಧೆಗಳು ನಡೆದವು. ಈ ಕ್ರೀಡಾಕೂಟಕ್ಕೆ ಒಟ್ಟು 62 ತಂಡಗಳು ನೋಂದಾಯಿಸಿಕೊಂಡಿದ್ದು, ವಿವಿಧ ಸಂಯೋಜಿತ ಕಾಲೇಜುಗಳಿಂದ 976 ಕ್ರೀಡಾಪಟುಗಳು (900 ಪುರುಷರು ಮತ್ತು 76 ಮಹಿಳೆಯರು) ಭಾಗವಹಿಸಿರುವರು.

ಉದ್ಘಾಟನಾ ಸಮಾರಂಭ

ಅಥ್ಲೆಟಿಕ್ ಕ್ರೀಡಾಕೂಟವನ್ನು ಕುಲಪತಿಗಳಾದ ಪ್ರೊ. ರಮೇಶ್ ಬಿ. ವಿಧ್ಯುಕ್ತವಾಗಿ ಉದ್ಘಾಟಿಸಿದರು. ಕ್ರೀಡಾಪಟುಗಳು ಕ್ರೀಡಾ ಮನೋಭಾವ, ಶಿಸ್ತು, ಸಮರ್ಪಣೆ ಮತ್ತು ಸ್ಪರ್ಧಾತ್ಮಕ ಮನೋಭಾವವನ್ನು ಪ್ರದರ್ಶಿಸಬೇಕೆಂದು ಅವರು ಸಲಹೆಯಿತ್ತರು.

ಕ್ರೀಡೆ ಮತ್ತು ದೈಹಿಕ ಸದೃಢತೆಯ ಮಹತ್ವವನ್ನು ಒತ್ತಿ ಹೇಳಿದ ಅವರು 'ಸದೃಢ ದೇಹದಲ್ಲಿ ಸದೃಢ ಮನಸ್ಸು' ಎಂಬ ಸಂದೇಶವನ್ನು ಉಲ್ಲೇಖಿಸಿದರು. ಕ್ರೀಡಾಪಟುಗಳ ಉತ್ಸಾಹಭರಿತ ಭಾಗವಹಿಸುವಿಕೆಯನ್ನು ಶ್ಲಾಘಿಸಿದ ಅವರು, ತಾವು ಪ್ರತಿನಿಧಿಸುವ ಕಾಲೇಜು ಮತ್ತು



ಸಂಸ್ಥೆಗಳಿಗೆ ಕೀರ್ತಿ ತರುವಂತೆ ಪ್ರೋತ್ಸಾಹಿಸಿದರು. ಕುಲಸಚಿವ ಎ. ನವೀನ್ ಜೋಸೆಫ್, ಮೌಲ್ಯಮಾಪನ ಕುಲಸಚಿವ ಪ್ರೊ. ರಮೇಶ್ ಬಿ. ಕುಡೆನಟ್ಟಿ, ಹಣಕಾಸು ಅಧಿಕಾರಿ ಎಂ. ವಿ. ವಿಜಯಲಕ್ಷ್ಮಿ, ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾದ ಕೆ.ಪಿ.ಪಾಟೀಲ್ ಮತ್ತು ವಿ. ಶಿವಕುಮಾರ್ ಸಮಾರಂಭದಲ್ಲಿ ಹಾಜರಿದ್ದರು.

ಅತ್ಯುತ್ತಮ ಪಥಸಂಚಲನ ಪ್ರಶಸ್ತಿ

ಕುಲಪತಿಗಳು ಮಲ್ಲೇಶ್ವರಂ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಎಂ.ಎಸ್. ರಾಮಯ್ಯ ಕಾಲೇಜು ಮತ್ತು ಸೇಂಟ್ ಫ್ರಾನ್ಸಿಸ್ ಕಾಲೇಜುಗಳಿಗೆ ಅನುಕ್ರಮವಾಗಿಅತ್ಯುತ್ತಮ ಪಥಸಂಚಲನ ಪ್ರಶಸ್ತಿಗಳನ್ನು ವಿತರಿಸಿದರು. ಪುರುಷರು ಮತ್ತು ಮಹಿಳೆಯರ 10,000 ಮೀಟರ್ ಓಟ ಹಾಗೂ 800 ಮೀಟರ್ ಓಟ ಸೇರಿದಂತೆ ಆಯ್ದ ಟ್ರ್ಯಾಕ್ ಸ್ಪರ್ಧೆಗಳ ವಿಜೇತರಿಗೂ ಕುಲಪತಿ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು.